# ಅನುಕ್ರಮಣಿಕೆ


7. ನಾಲ್ಕನೆಯ ನುಡಿ - ರಕ್ಷಕನಾಗಿ ಶ್ರೀಗುರು ................................ 1

7.1.1 ಮಹಾವಾಕ್ಯಾರ್ಥದಲ್ಲಿ ಸ್ಥಿತನಾಗಿರುವುದು - ನಿರಂತರ ಅನ್ವೇಷಣೆಯ ಅವಶ್ಯಕತೆ ................................ 1

7.1.2 ಆಕ್ಷೇಪ: ವಸ್ತುಗಳ 'ಸತ್' ಮತ್ತು ಸ್ಫುರಣ ಅವುಗಳವೇ ; ಇಂದ್ರಿಯಗಳ ಅವಶ್ಯಕತೆ ಇಲ್ಲ................................ 4

7.1.3 ಉತ್ತರ : ನಾಲ್ಕನೆಯ ನುಡಿ................................ 5

7.1.4 'ನಾನು ಮಡಿಕೆಯನ್ನು ತಿಳಿದಿದ್ದೇನೆ' ಎಂಬ ಅನುಭವದ ವಿಶ್ಲೇಷಣೆ – ಸಾಕ್ಷಿ ................................ 6

7.1.5 ವಿರೋಧಿಗಳ ದೃಷ್ಟಿ - ಅವಾಂಛನೀಯ ಪರಿಣಾಮಗಳು , ಅವುಗಳ ನಿರಾಕರಣೆ ................................ 8

7.1.6 ಜ್ಞಾನಕ್ರಿಯೆಗಳಲ್ಲಿ ತ್ರಿಪುಟಿಯ ಸಹಭಾಗಿತ್ವ; ವಿರೋಧಿಗಳ ಅಭಿಪ್ರಾಯಗಳ ವಿಸ್ತರಣ ................................ 10

7.1.7 ಅವೈದಿಕ ಅಭಿಪ್ರಾಯಗಳ ನಿರಾಕರಣೆಯ ಬೇರೆ ನೆಲೆಗಳು ............ 15

7.1.8 ಶ್ರುತಿಯೇ ಅಂತಿಮ ನಿರ್ಣಯ - ಎಲ್ಲ ಬೆಳಕುಗಳ 'ಬೆಳಕಾ'ದ ಸಾಕ್ಷಿಜ್ಞಾನವೇ ಉತ್ತರ ................................ 16

7.1.9 ಮನಸ್ಸು ದಿವ್ಯ ಚಕ್ಷು - ಜ್ಞಾನೇಂದ್ರಿಯಗಳ ಪಾತ್ರ................... 20

7.1.10 ಅಂತಃಕರಣ-ಸ್ವೀಕಾರದ-ಆವಶ್ಯಕತೆ ................................ 27

7.1.11 ಜ್ಞಾನದ ಸಾಕ್ಷಾತ್ಕಾರದ ವರೆಗೂ ಆತ್ಮನಿಗೆ ಅಂತಃಕರಣದ ಸಂಬಂಧವಿರುತ್ತದೆ. ................................ 28

7.1.12 ಮುಖ್ಯಪ್ರಾಣ ................................ 30

7.1.1 ಸೂಕ್ಷ್ಮಶರೀರ ................................ 31

7.1.1 ಕ್ರಿಯೆ ಮತ್ತು ಗ್ರಹಿಕೆ - ಪ್ರಾಣ, ಪ್ರಜ್ಞಾ, ಚೈತನ್ಯ ........................ 33

7.1.15 ಗೋಲಕಗಳು ಇಂದ್ರಿಯಗಳಲ್ಲ ................................ 38

7.1.16 ಅಧಿದೇವತೆಗಳು ................................ 39

7.2.1 ಪ್ರತಿಕರ್ಮ ವ್ಯವಸ್ಥೆ - ಭಿನ್ನ ಭಿನ್ನ ವಿವರಣೆಗಳು ...................... 39

7.2.2 ವಸ್ತುಗಳನ್ನು ಪ್ರಕಾಶಗೊಳಿಸುವುದು - ಜ್ಞಾನೇಂದ್ರಿಯಗಳು ಅಂತಃಕರಣ ಹಾಗೂ ಚಿದಾಭಾಸ ................................ 39

7.2.3 ವಸ್ತುಗಳ ವ್ಯಕ್ತತ್ವ : ಆಕ್ಷೇಪಗಳಿಗೆ ಉತ್ತರ................................ 42

7.2.4 ಸ್ವಯಂಪ್ರಕಾಶವಾದ ಅತೀತವಾದ ಆತ್ಮದ ಉಪಸ್ಥಿತಿಯಿಂದಲೇ
ಗ್ರಹಿಕೆಗೆ ಪ್ರಚೋದನೆ ದೊರೆಯುತ್ತದೆ : ಮಾಯಾ ........................ 43
7.2.5 ಶ್ಲೋಕದ ಮೂರನೆಯ ಸಾಲು ........................................ 46
7.2.6 ಜ್ಞಾನದ ಪ್ರಕ್ರಿಯೆಯಲ್ಲಿ ಬೆಳವಣಿಗೆಯ ಸ್ವರೂಪ ..................... 49
7.2.7 ಅಂತಃಕರಣವೃತ್ತಿಯ ಕಾರ್ಯ - ಆವರಣಭಂಗ, ಚಿದುಪರಾಗ,
ಅಭೇದಾಭಿವ್ಯಕ್ತಿ ; ಜ್ಞಾನದಾಯಕ-ವಾಗಿರುವ ಅಧಿಷ್ಠಾನಚೈತನ್ಯ ... 54
7.2.8 ಪ್ರಮಾತೃಚೈತನ್ಯ, ಪ್ರಮಾಣಚೈತನ್ಯ, ಪ್ರಮೇಯಚೈತನ್ಯ.............. 60
7.2.9 ಅಂತಃಕರಣ ವೃತ್ತಿಯ ಕ್ರಿಯೆಗಳು - ಬೇರೆ ಅಭಿಪ್ರಾಯಗಳ ನಿರಾಕರಣೆ63
7.2.10 ಪರೋಕ್ಷ ಹಾಗೂ ಅಪರೋಕ್ಷ ಜ್ಞಾನ ................................ 65
7.2.11 ಫಲ - ಪ್ರಮಾ - ವೃತ್ತಿವ್ಯಾಪ್ತಿ, ಫಲವ್ಯಾಪ್ತಿ .............................. 67
7.2.12 'ಪ್ರತ್ಯಕ್ಷ' ಬ್ರಹ್ಮಾತ್ಮದಿಂದ ದೊರಕಿಸಿದುದು ............................... 70
7.2.13 ಆಂತರಿಕ ವಸ್ತುಗಳು ಹಾಗೂ ಕಾಲ್ಪನಿಕ ವಸ್ತುಗಳು ಅಜ್ಞಾತಸತ್ತಾ
ಹೊಂದಿರುವುದಿಲ್ಲ. ............................................................ 73
7.2.14 ಪ್ರತಿಕರ್ಮವ್ಯವಸ್ಥೆಯ ಅನ್ವೇಷಣೆ ಬ್ರಹ್ಮಜ್ಞಾನದಲ್ಲಿ.................. 75
7.2.15 ಆಧುನಿಕ ಭೌತಶಾಸ್ತ್ರ - ಅನಿಶ್ಚಿತ ಸ್ವರೂಪ ; ನಿರಾಶೆಯಲ್ಲಿ
ಕೊನೆಗೊಳ್ಳುವ ಶೋಧಪ್ರಯತ್ನ ............................................ 78
7.2.16 ವೇದಾಂತದ ಪ್ರಕ್ರಿಯೆಯಲ್ಲಿ ಮನಸ್ಸು ಸಕ್ರಿಯ ನಮೂದಕ,
ನಿಷ್ಕ್ರಿಯವಲ್ಲ................................................................ 87
7.2.17 ಆಭಾಸವಾದದ ದೃಷ್ಟಿಯಲ್ಲಿ ಜ್ಞಾನ ಮತ್ತು ಆತ್ಮಸಾಕ್ಷಾತ್ಕಾರ....... 91
7.2.18 ಜ್ಞಾನಶಕ್ತಿ, ಕ್ರಿಯಾಶಕ್ತಿ - ಅಂತಃಕರಣದ ಎರಡು ಮುಖಗಳು ......... 96
7.3.1 ನಾಡಿಗಳು - ಲಿಂಗಶರೀರ .................................................... 98
7.3.2 ಚಕ್ರಗಳ ಉಪಾಸನೆ - ಸಂವಾದಿಭ್ರಮ ನ್ಯಾಯ ........................ 103
7.3.3 ಸಾಧನೆಯ ಅಪರಾ ಮತ್ತು ಪರಾ ಮುಖಗಳು ......................... 105
7.3.4 ಉಪನಿಷತ್ತುಗಳಲ್ಲಿ ಯೋಗ - ವೈದಿಕಯೋಗ........................ 109
7.3.5 ವೇದಾಂತದ ನಿಲುವು ಎಲ್ಲ ಪ್ರಕ್ರಿಯೆಗಳ ನೆಲೆ ........................ 112
7.3.6 ನಾಡಿಗಳು - ದೇಹದಲ್ಲಿ ಜೀವನ ಅನುಭವ ಹಾಗೂ ದೇಹದ ತ್ಯಾಗ. 116
7.3.7 ಪಂಚೀಕರಣ - ವ್ಯಷ್ಟಿ ಮತ್ತು ಸಮಷ್ಟಿ - ಅವಸ್ಥಾತ್ರಯ ಹಾಗೂ
ತುರೀಯ - ಪ್ರಣವ............................................................ 121
7.4.1 ಚಿತ್ ಸ್ವರೂಪ, ಎಲ್ಲ ಅವಸ್ಥೆಗಳನ್ನು ಅನುಭವಿಸುವವನು ........ 126
7.4.2 'ಅಹಂ' ಪದದ ವಿಶ್ಲೇಷಣೆ - ಮೂರು ಅರ್ಥಗಳು .................... 131
7.4.3 'ನಾನು ತಿಳಿದಿದ್ದೇನೆ' ಅನುಭವದ ವಿಶ್ಲೇಷಣೆ.......................... 136

7.4.4 ಜ್ಯೋತಿ, ಪರಂ'ಜ್ಯೋತಿ' ........ 137
7.4.5 ಈಶ್ವರಭಾವ - ಉತ್ತಮಪುರುಷ ........ 141
7.4.6 ಚಿತ್ ಸ್ವರೂಪ, ಪರಮಾನಂದ ........ 144
7.4.7 ನಾಲ್ಕನೆಯ ನುಡಿಯ ತಾತ್ಪರ್ಯ - ಅಖಂಡಾಕಾರವೃತ್ತಿಯ ಉದ್ದಾರ - ಸರ್ವಾತ್ಮಭಾವ ........ 147
8. ಐದನೆಯ ನುಡಿ ........ 152
ಶ್ರೀಗುರುವು ಆತ್ಮದ ಮಿಥ್ಯಾರೂಪಗಳನ್ನು ........ 152
ನಾಶಮಾಡುವ ಪಾತ್ರದಲ್ಲಿ ........ 152
8.1 ಪ್ರಸ್ತಾವನೆ ........ 152
8.1.1 'ನಾನು' ಯಾರು ? ಎನ್ನುವುದರ ಶೋಧ ........ 153
8.1.2 ಸಮಸ್ಯೆಯ ವಿಲಕ್ಷಣ ರೂಪ ........ 153
8.1.3 'ಇದಂ' 'ಅಹಂ' ಗಳ ಮಿಶ್ರಣ ........ 156
8.1.4 ಆತ್ಮವನ್ನು ಕುರಿತು ವಿವಿಧ ಅಭಿಪ್ರಾಯಗಳು – ಐದನೆಯ ನುಡಿ... 157
8.2.1 ಚಾರ್ವಾಕ ಮತ – ಸ್ಥೂಲದೇಹವೇ ಆತ್ಮ, ಪ್ರತ್ಯಕ್ಷವೊಂದೇ ಪ್ರಮಾಣ 162
8.2.2 ಚೈತನ್ಯ – ನಾಲ್ಕು ಭೂತಗಳ ಕೂಡುವಿಕೆಯ ಪರಿಣಾಮ ........ 163
8.2.3 ಅನುಮಾನ ಇತ್ಯಾದಿ – ಪ್ರಮಾಣವಲ್ಲ ........ 166
8.2.4 ಲೋಕಾಯತಿಕ ಸೂತ್ರಗಳು ........ 170
8.2.5 ಚಾರ್ವಾಕ ಮತದ ಬೇರೆ ಬೇರೆ ಹೆಸರುಗಳು ........ 171
8.2.6 ಚಾರ್ವಾಕನ ಸಾಹಸದ ಆಧಾರ ಪ್ರತ್ಯಕ್ಷಾಭಾಸ ಇತ್ಯಾದಿಗಳು ........ 172
8.3.1 ಪ್ರತಿಯೊಂದು ಹೆಜ್ಜೆಗೂ ಮೊದಲಿನ ಬೆಳವಣಿಗೆಗಳ ನಿರಾಕರಣೆ, ಒಂದರ ಹಿಂದೊಂದರಂತೆ 'ಬೇರೆಯವುಗಳ ಪ್ರತಿಪಾದನೆ' ........ 173
8.3.2 ದೇಹವೇ ಆತ್ಮ ಎಂಬ ಅಭಿಪ್ರಾಯದ ನಿರಾಕರಣೆ ........ 175
8.3.3 ಇಂದ್ರಿಯಗಳು ಆತ್ಮ ........ 176
8.3.4 ಪ್ರಾಣವು ಆತ್ಮ ಎಂಬಂತೆ ........ 178
8.3.5 ಆತ್ಮವಾಗಿ ಮನಸ್ಸು ........ 178
8.3.6 ಆತ್ಮವಾಗಿ ಬುದ್ಧಿ ........ 179
8.3.7 ಪ್ರಭಾಕರ ಹಾಗೂ ತಾರ್ಕಿಕರ ಅಭಿಪ್ರಾಯ – ಆತ್ಮ, ಕರ್ತಾ ಮತ್ತು ಭೋಕ್ತಾ ........ 180
8.3.8 ಭಾಟ್ಟ ಮತ – ಆತ್ಮ, ಅಚೇತನ – ಸಚೇತನ ........ 181
8.3.9 ಶೂನ್ಯವಾದ – 'ಶೂನ್ಯ' ಆತ್ಮ ........ 182

8.3.10 ಸಾಂಖ್ಯವಾದ – ಆತ್ಮವು ಚಿದ್ರೂಪ ..................................... 182
8.4.1 ಆತ್ಮದ ಗಾತ್ರ, ಸತ್ಯ ಹಾಗೂ ನಿತ್ಯತ್ವ ..................................... 183
8.4.2 ವೇದಾಂತದಿಂದ ಬೇರೆ ದೃಷ್ಟಿಗಳ ಖಂಡನೆ ..................................... 185
8.4.3 ದೇಹ ಆತ್ಮವಲ್ಲ, ಪ್ರತ್ಯಕ್ಷವೊಂದೇ ಪ್ರಮಾಣವಲ್ಲ – ಚಾರ್ವಾಕ ಮತದ ಖಂಡನೆ ..................................... 186
8.4.4 ಇಂದ್ರಿಯಗಳು ಆತ್ಮವಲ್ಲ ..................................... 199
8.4.5 ಪ್ರಾಣ ಆತ್ಮವಲ್ಲ ..................................... 201
8.4.6 ಮನಸ್ಸು ಆತ್ಮನಲ್ಲ ..................................... 203
8.4.7 ಕ್ಷಣಿಕ ವಿಜ್ಞಾನ ಆತ್ಮವಲ್ಲ ..................................... 204
8.4.8 ಬುದ್ಧಿಯು ಆತ್ಮವಲ್ಲ ; ಆತ್ಮವು ಕರ್ತಾ–ಭೋಕ್ತಾ ಅಲ್ಲ ..................................... 205
8.4.9 ಸಂಘಾತವು ಆತ್ಮವಲ್ಲ ..................................... 205
8.4.10 ಆತ್ಮವು ಅಣುವಲ್ಲ ..................................... 206
8.4.11 ಆತ್ಮವು ಸಚೇತನ–ಅಚೇತನವಲ್ಲ ..................................... 207
8.4.12 ಸರ್ವವ್ಯಾಪೀ ಆತ್ಮಗಳ ಅನೇಕತ್ವ ಅಸಮರ್ಥನೀಯ ..................................... 207
8.4.13 ಆತ್ಮ ಭೋಕ್ತಾ ಮಾತ್ರವಲ್ಲ ..................................... 208
8.4.14 ಆತ್ಮ ಒಬ್ಬನೇ, ಸರ್ವಯಾಮಿ ..................................... 209
8.4.15 ಆತ್ಮ, ಸಾಕ್ಷಿ – ಇದು ಕೇವಲ ಉಪನಿಷತ್ತುಗಳ ದರ್ಶನ ..................................... 210
8.5.1 ಹಾಗಾದರೆ 'ನಾನು' ಯಾರು ? ..................................... 211
8.5.2 'ಅಹಂ'ನ್ನು ಸೇರ್ಪಡೆಗಳಿಂದ ಮುಕ್ತಗೊಳಿಸುವುದು – ಸಾಧಕರನ್ನು ಅಪಾಯದಿಂದ ರಕ್ಷಿಸಲು ಬೇರೆ ಪ್ರಕ್ರಿಯೆಗಳ ಖಂಡನೆಯ ಆವಶ್ಯಕತೆ 212
8.5.3 ರಚನೆ, ರೂಪ ಯಾವುದೇ ಇದ್ದರೂ, ದೇಹ ನಾನಲ್ಲ ..................................... 216
8.5.4 'ಅಣುವಾದ'ದ ಅಸಮರ್ಥನೀಯತೆ ..................................... 218
8.5.5 'ನಾನು' ಭೂತಗಳಲ್ಲ, ಭೌತಿಕಗಳಲ್ಲ, ಸಮುದಾಯಗಳಲ್ಲ, ಶೂನ್ಯವಲ್ಲ 220
8.5.6 'ಅಹಂ' ಅಖಂಡ ..................................... 223
8.5.7 ನಿರಾಕರಣೆಯ ವಿಧಾನ ..................................... 223
8.5.8 'ಇದಲ್ಲ', 'ಇದಲ್ಲ' ಎಂಬ ರೀತಿಯ ನಿರಾಕರಣೆ ..................................... 224
8.6.1 ಅಸಮರ್ಪಕ ತಾದಾತ್ಮ್ಯತೆಗಳ ತ್ಯಾಗ – ವಿಚಾರ ಸುಲಭ ಮಾರ್ಗ .. 227
8.6.2 'ನಾನು' ಮಾತ್ರ ಸತ್ಸ್ವರೂಪ, ಅವಿನಾಶಿ ..................................... 231
8.6.3 'ಅಹಂ' ಚಿತ್ ಸ್ವರೂಪನು, ಅವಿಕಾರಿಯು ..................................... 234
8.7.1 'ಅಹಂ' ಅಹಂಕಾರವಲ್ಲ, ಭೇದದ ಅರಿವು ..................................... 237

8.7.2 ಸಂಸಾರ ಕೇವಲ ಅಹಂಕಾರಕ್ಕೆ ಸಂಬಂಧಿಸಿದ್ದು ; ಅಹಂಕಾರದ ಕಾರಣದಿಂದಾದ ವಿನಾಶ, ಅವ್ಯವಸ್ಥೆ ................................ 241
8.7.3 'ಅಹಂ' – ಪ್ರಮಾತಾ ಅಲ್ಲ – ಜ್ಞಾತಾ, ಕರ್ತಾ, ಭೋಕ್ತೃ ಯಾವುದೂ ಅಲ್ಲ ................................ 244
8.8.1 ಅಜ್ಞಾನ: ಅಧ್ಯಾಸಗಳ ಸರಣಿ ................................ 249
8.8.2 ಅನ್ಯೋನ್ಯ ಅಧ್ಯಾಸ – ಐದು ವಿಧಗಳು ................................ 251
8.8.3 ಚಿದಚಿದ್ಗ್ರಂಥಿ ................................ 254
8.8.4 ಲೌಕಿಕ ಹಾಗೂ ವೈದಿಕವಾದ ಎಲ್ಲ ವ್ಯವಹಾರಗಳು, ಮೋಕ್ಷ ಕೂಡ, ಆತ್ಮ, ಅನಾತ್ಮಗಳ ಅನ್ಯೋನ್ಯ ಅಧ್ಯಾಸವನ್ನೇ ಆಧರಿಸಿವೆ.......... 258
8.9.1 ಭ್ರಾಂತರು ಆತ್ಮ ಹೀಗಿಲ್ಲ ಎಂದು ವಾದಿಸುತ್ತಾರೆ ................................ 259
8.9.2 'ಅಹಂ' ನೇ 'ಪುರುಷ' ................................ 259
8.9.3 ಭ್ರಾಂತರ ದೃಷ್ಟಿಯನ್ನು ಸ್ತ್ರೀಯರ, ಬಾಲಕರ, ಕುರುಡರ, ಜಡಮತಿಗಳ ದೃಷ್ಟಿಯೆಂದು ಸಾಮಾನ್ಯವಾಗಿ ಕರೆಯಲಾಗುತ್ತದೆ ................................ 261
8.9.4 ಶ್ರೇಷ್ಠ ಹಾಗೂ ಆದರ್ಶ ಸ್ತ್ರೀಯರ ಅಭಿವಂದನೆ ................................ 265
8.9.5 ಉಪಮೆಗಳ ತಾತ್ಪರ್ಯ – ಸಾಧಕರಿಗೆ ಒಂದು ಎಚ್ಚರಿಕೆ ................................ 272
8.10.1 'ಅಹಂ' – ಅವಿದ್ಯೆ ಹಾಗೂ ಈಶ್ವರಾನುಗ್ರಹದ ಅಭಾವ ಮಿಥ್ಯಾತತ್ತ್ವಗಳ ಕಾರಣ ................................ 274
8.10.2 ಅವಿದ್ಯೆ – ಅಸ್ವಾತ್ಮಕಸ್ವರೂಪ, ಆವರಣ – ದೋಷದ ಉಪಾದಾನ ಕಾರಣ ................................ 277
8.10.3 'ಅಹಂ' ವಿಷಯವಾದ ವಾದಗಳು ಮಾಯೆಯ ವಿಕ್ಷೇಪಶಕ್ತಿಯಿಂದಾಗಿ 278
8.10.4 ಮಹಾಭ್ರಾಂತಿಯ ನಾಶ – ಸಾಕ್ಷಾತ್ ಆತ್ಮವೇ ಆದ ಶ್ರೀಗುರುವಿನ ಪ್ರಯತ್ನ ................................ 279
8.10.5 'ಅಹಂ' ಮತ್ತು 'ಇದಂ' – ಮಿಥ್ಯಾತ್ಮಾ, ಇವುಗಳ ಮಿಶ್ರಣ ಎಲ್ಲ ವಿನಾಶಗಳ ಕಾರಣ ................................ 281
8.10.6 'ಇದಂ' ನ ಅರಣ್ಯ – ಅದರಿಂದ ಹೊರಬರುವ ದಾರಿ ಸದ್ಗುರುವಿನ ಕೃಪೆಯಿಂದ ಲಭ್ಯ ................................ 286
8.10.7 'ಅಹಂ' ಶುದ್ಧ ಚೈತನ್ಯ, 'ಇದಂ' ಮುಕ್ತ ಅಹಂ ................................ 289
8.10.8 'ಅಹಂ' ಶುದ್ಧ ಚೈತನ್ಯ, ಸರ್ವಾತ್ಮಕ ................................ 293
8.10.9 'ಅಹಂ' – ಐದು ಕೋಶಗಳಿಂದ ರಕ್ಷಣೆ ................................ 296
8.10.10 'ಅಹಂ', 'ಇದಂ'ದ ಅಧಿಷ್ಠಾನ – ಮಹಾವಾಕ್ಯ – ಸರ್ವಾತ್ಮತ್ವ..... 298
8.10.11 'ಅಹಂ', ಜ್ಞಾನ 'ಚಕ್ಷು' ................................ 307

8.10.12 'ಪತನ'ದಿಂದ ರಕ್ಷಿಸುವ ಶ್ರೀಗುರುವಿನ ಕರುಣೆ ........................ 310
8.10.13 ಜ್ಞಾನದ ಉದಯ – ಮಾಯೆಯ ಶಾಶ್ವತ ಪಲಾಯನ ............. 312
9.1.1 ಸಂಪೂರ್ಣ ವಿಶ್ವದ ನಿರಾಕರಣೆ - ಶೂನ್ಯವಾದ - ಸುಷುಪ್ತಿ.......... 315
9.1.2 ಶೂನ್ಯವಾದ - ಬ್ರಹ್ಮದ ವಿಷಯದಲ್ಲಿ ಶ್ರುತಿಯಲ್ಲಿ ನೇತ್ಯಾತ್ಮಕ ಪರಿಭಾಷೆ ........................................................ 317
ದಿಗ್ದೇಶಗುಣಗತಿಫಲಭೇದಶೂನ್ಯಂ ಹಿ ಪರಮಾರ್ಥಸದ-ದ್ವಯಂ ಮನ್ದಬುದ್ಧೀನಾಮಸದಿವ ಪ್ರತಿಭಾತಿ । .................................. 318
9.1.3 ಶೂನ್ಯವಾದದ ನಿರಾಕರಣೆ - ಆರನೆಯ ನುಡಿ ........................ 318
9.1.4 ಶೂನ್ಯವಾದ - ಪ್ರಾಸ್ತಾವಿಕ .............................................. 319
9.2.1 ಸರ್ವಾಸ್ತಿತ್ವವಾದ - ಬಾಹ್ಯಜಗತ್ತು - ಪರಮಾಣುಗಳ ಸಂಘಾತ ..... 320
9.2.2 ಆಧ್ಯಾತ್ಮಿಕ ಜಗತ್ತು - ಐದು ಸ್ಕಂಧಗಳು .................................. 321
9.2.3 ಆಲಯಜ್ಞಾನ, ಅಹಂ .................................................. 322
9.2.4 ಈಶ್ವರನಿಲ್ಲ - ಪ್ರತ್ಯಭಿಜ್ಞೆ ಒಂದು ಭ್ರಮೆ .............................. 324
9.2.5 ಕಾರಣ ಪರಂಪರೆ - ಅವಿದ್ಯಾ ಇತ್ಯಾದಿ .................................. 325
9.2.6 ಹೇತೂಪನಿಬಂಧ, ಪ್ರತ್ಯಯೋಪನಿಬಂಧ ............................ 326
9.2.7 ಕ್ಷಣಿಕತಾ - ಪ್ರತಿಸಂಖ್ಯಾನಿರೋಧ, ಅಪ್ರತಿಸಂಖ್ಯಾನಿರೋಧ, ಆಕಾಶ327
9.2.8 ಅಭಾವದಿಂದ ಭಾವದ ಉದಯ........................................ 328
9.2.9 ಬಾಹ್ಯಾರ್ಥವಾದದ ಖಂಡನೆ - ಸಂಘಾತಗಳು ಅಸಂಭವ ........... 328
9.2.10 ಪ್ರತಿಸಂಖ್ಯಾನಿರೋಧ ಹಾಗೂ ಅಪ್ರತಿಸಂಖ್ಯಾನಿರೋಧ ಅಸಮರ್ಥನೀಯ........................................................ 332
9.2.11 ಆಕಾಶ ನಿರುಪಾಖ್ಯವಲ್ಲ (ಅಭಾವವಲ್ಲ) ............................ 334
9.2.12 ಆತ್ಮದ ಕ್ಷಣಿಕತೆಯ ನಿರಾಕರಣ - ಪ್ರತ್ಯಭಿಜ್ಞೆ ಭ್ರಾಂತಿಯಲ್ಲ ........ 335
9.2.13 ಅಭಾವದಿಂದ ಭಾವವಿಲ್ಲ ................................................ 336
9.3.1 ವಿಜ್ಞಾನವಾದ.......................................................... 338
9.3.2 ಗ್ರಹಿಕೆಯನ್ನು ಬಿಟ್ಟು ಬೇರೆ ವಿಷಯವಿಲ್ಲ ............................ 338
9.3.3 ಬೌದ್ಧ ಕಾರಿಕೆಗಳು - ಕ್ಷಣಿಕವಿಜ್ಞಾನ, ಆತ್ಮ, ಭ್ರಾಂತಿಯಿಂದಾಗಿ ತ್ರಿತಯಸ್ವರೂಪ ........................................................ 340
9.3.4 ಗ್ರಹಿಕೆಗಳು ಹಾಗೂ ವಾಸನೆಗಳು - ಪರಸ್ಪರ ಕಾರಣ-ಕಾರ್ಯ ಸಂಬಂಧ341
9.3.5 ವಿಜ್ಞಾನವಾದದ ಖಂಡನೆ - ವಸ್ತುವಿನ ಅನುಭವ.................... 342
9.3.6 ಬೇರೆ ಕಾರಣಗಳು.................................................... 344
9.3.7 ಸಾಕ್ಷಿಯನ್ನು ಗಮನಿಸಲೇಬೇಕು - ಸಮಸ್ಯೆಗಳ ಪರಿಹಾರ............ 346

9.3.8 ‘ಸ್ವಪ್ನದರ್ಶನ’, ಹಾಗೂ ‘ಜಾಗ್ರತಾವಸ್ಥೆಯಲ್ಲಿ ಗ್ರಹಿಕೆಯ ಅನುಭವ’ - ಇವುಗಳ ನಡುವಿನ ಭೇದ ........ 348
9.3.9 ವಾಸನೆಗಳ ಹೊರತಾಗಿಯೂ ಬಾಹ್ಯವಸ್ತುಗಳನ್ನು ಒಪ್ಪಿಕೊಳ್ಳುವ ಆವಶ್ಯಕತೆ ........ 350
9.4.1 ಶೂನ್ಯವಾದ : ಶೂನ್ಯ ಅಂತಿಮ (ಸತ್ಯ) ........ 352
9.4.2 ಬಾಹ್ಯಾರ್ಥವಾದ ಹಾಗೂ ವಿಜ್ಞಾನವಾದಗಳಲ್ಲಿರುವ ಅಂಶಗಳೇ ಕೊನೆಯಲ್ಲಿ ಶೂನ್ಯವಾದಕ್ಕೆ ದಾರಿಮಾಡಿಕೊಡುತ್ತವೆ ........ 355
9.4.3 ಶೂನ್ಯವಾದದ ನಿರೂಪಣೆ - ‘ಪರಾನಿರ್ವಾಣ’ - ಶೂನ್ಯಸ್ಥಿತಿ ........ 356
9.4.4 ಶೂನ್ಯವಾದ, ತೋರಿಕೆಯಲ್ಲಿ ಸಬಲ ಪೂರ್ವಪಕ್ಷ - ಅದರ ಖಂಡನೆ 359
9.4.5 ವಿಜ್ಞಾನವಾದವನ್ನು ಖಂಡಿಸುವ ಸೂತ್ರಗಳಲ್ಲಿ ಸೂಚಿತವಾದ ಶೂನ್ಯವಾದದ ನಿರಾಕರಣೆ ........ 362
9.4.6 ಶೂನ್ಯವಾದವು ಎಲ್ಲ ಪ್ರಮಾಣಗಳಿಗೂ ವಿರುದ್ಧವಾಗಿದೆ - ಸ್ಥಿರವಾದ ಅಧಿಷ್ಠಾನವನ್ನು ಒಪ್ಪಿಕೊಳ್ಳುವ ಆವಶ್ಯಕತೆ ........ 364
9.4.7 ಅಸಮಂಜಸವಾದ ಆಧಾರಸೂತ್ರಗಳಿಂದ ಆತ್ಮದ ಆವರಣ, ಸಾಕ್ಷಾತ್ಕಾರವಲ್ಲ - ಚತುಷ್ಕೋಟಿ ........ 367
9.4.8 ಆತ್ಮವು ‘ಶೂನ್ಯ’ದ ಸಾಕ್ಷಿ ........ 368
9.4.9 ಶೂನ್ಯವಾದಿಗಳಿಂದ ಶ್ರುತಿಗಳ ತಪ್ಪು ಉದ್ಧರಣಗಳು - ‘ಅಸತ್’ ಬ್ರಹ್ಮದ ಪರಿಚಾಯಕ ........ 369
9.5.1 ಬ್ರಹ್ಮ ಶಬ್ದಗಳ ಆಚೆಯದು ........ 372
9.5.2 ಆದಾಗ್ಯೂ, ಬ್ರಹ್ಮದ ಅಸ್ತಿತ್ವದ ಉಪಲಬ್ಧಿ ಸಾಧ್ಯ ........ 378
9.5.3 ಶ್ರುತಿಯ ಅರ್ಥ - ಬ್ರಹ್ಮಾತ್ಮೈಕ್ಯ ; ಶೂನ್ಯವಾದವಲ್ಲ ........ 381
9.5.4 ಶ್ರುತಿ, ಅಖಂಡಾಕಾರವೃತ್ತಿ - ಬ್ರಹ್ಮವನ್ನು ಆವರಿಸಿರುವ ಅವಿದ್ಯೆಯನ್ನು ತೊಲಗಿಸುವುದು ........ 382
9.6.1 ಆತ್ಮದ ಅಸ್ತಿತ್ವ - ಸುಷುಪ್ತಿಯ ಅನುಭವ ಸಾಕ್ಷಿ - ಆನಂದ ........ 386
9.6.2 ನಿದ್ರೆಗಾಗಿ ತೀವ್ರ ಬಯಕೆ - ಐದು ದೃಷ್ಟಾಂತಗಳು ........ 387
9.6.3 ಸುಷುಪ್ತಿಯಲ್ಲಿ ವಿಜ್ಞಾನಮಯ ಬ್ರಹ್ಮದಲ್ಲಿ ಐಕ್ಯ ; ಶೂನ್ಯವಲ್ಲ ... 389
9.6.4 ಸುಷುಪ್ತಿಯಲ್ಲಿ ಸ್ಥಿತಿ: ಎಚ್ಚರಾಗುವುದು - ನೆನಪುಗಳು ಹಾಗೂ ಶ್ರುತಿ 393
9.6.5 ಉಪಾಧಿಗಳ ಮುಂದುವರಿಕೆ - ಬ್ರಹ್ಮದೊಡನೆ ತಾದಾತ್ಮ್ಯದ ಅರಿವಿಲ್ಲದಿರುವಿಕೆ ........ 396
9.6.6 ವಸ್ತುಗಳ ಅರಿವಿರದಿರುವುದರ ಕಾರಣ ವಸ್ತುಗಳ ಅಭಾವ, ‘ಚಿತ್’ ದ ಅಭಾವವಲ್ಲ ........ 400

9.6.7 ಸುಷುಪ್ತಿಯಲ್ಲಿ - ಸಾಕ್ಷಿ, ಸುಖ, ಅವಸ್ಥಾಜ್ಞಾನ ಎಂಬ ಅವಿದ್ಯಾವೃತ್ತಿಗಳ ಮುಕ್ಕೂಟ ............ 401
9.6.8 ಸುಷುಪ್ತಿಯ ಅನುಭವ, ನಿರ್ವಿಕಲ್ಪಕ ............ 404
9.6.9 ಸುಷುಪ್ತಿಯು ಸಾಕ್ಷಿಯಿಂದ ಸ್ಥಾಪಿತವಾಗುತ್ತದೆ, ಪ್ರಮಾಣದಿಂದಲ್ಲ ; ಸುಷುಪ್ತಿಯಲ್ಲಿ ಅಹಂಕಾರವಿರುವುದಿಲ್ಲ ............ 406
9.6.10 ಅವಸ್ಥಾಜ್ಞಾನದ ಸ್ಮರಣೆ, ನಿರಂತರ ಮೂಲಾಜ್ಞಾನದ್ದಲ್ಲ ............ 407
9.6.11 ಸುಖವು ಸಾಕ್ಷಿಯ ಸ್ವರೂಪ ; ದುಃಖಾನುಭವವಲ್ಲ, ಹಾಗೆಯೇ ಜ್ಞಾನಾಭಾವವಲ್ಲ ; ಸ್ಮರಣೆಯಲ್ಲಿಯ 'ಅಹಂ' ಪ್ರಮಾತೃ ............ 411
9.7.1 ಆತ್ಮಕ್ಕೆ ಸಂಬಂಧಿಸಿದಂತೆ ಪ್ರತ್ಯಭಿಜ್ಞಾ : ಸಾಕ್ಷಿಯ ಅನುಭವ, ಪ್ರಮಾತೃವಿನಿಂದ ಸ್ಮರಣೆ - ದೃಷ್ಟಿಸೃಷ್ಟಿವಾದ ............ 418
9.7.2 ಪ್ರಾಜ್ಞ, ತೈಜಸ, ವಿಶ್ವ : ಪ್ರಾಣ ............ 421
9.8.1 ರಾಹುಗ್ರಸ್ತ - ಸುಷುಪ್ತಿಯಲ್ಲಿಯ ಅವಿದ್ಯೆಗೆ ರಾಹುವಿನ ಹೋಲಿಕೆ . 427
9.8.2 ತುರೀಯ, ಸ್ವರೂಪಾನುಭವ, ಸುಷುಪ್ತಿಯಿಂದ ಭಿನ್ನವಾದ ಜ್ಞಾನ 430
9.8.3 ಮೂಲಾಜ್ಞಾನ - ಸುಷುಪ್ತಿಯಲ್ಲಿ ಅದರ ಬೀಜದ ಎದ್ದು ಕಾಣುವ ಉಪಸ್ಥಿತಿ ............ 433
9.8.4 ಶಾಶ್ವತ ಅಧಿಷ್ಠಾನವಾದ ಆತ್ಮವು ಬದಲಾಗುವ ಅವಸ್ಥೆಗಳಿಗೆ ಬದ್ಧವಲ್ಲ 434
9.8.5 ಸುಷುಪ್ತಿಯ ಅನ್ವೇಷಣೆಗೆ ಬ್ರಹ್ಮಾತ್ಮವಾದ ತುರೀಯದಲ್ಲಿ ಅಂತ್ಯ .. 437
9.9.1 ಸುಷುಪ್ತಿ, ಕೈವಲ್ಯದ ನಿದರ್ಶನ ............ 442
9.9.2 ಸುಷುಪ್ತಿಯಲ್ಲಿ ವೈವಿಧ್ಯತೆಯ ಲಯ, ಕೈವಲ್ಯದಲ್ಲಿ ಲೀನತೆ ............ 442
9.9.3 ಸುಷುಪ್ತಿಯಲ್ಲಿ ಜೀವನು ತನ್ನ ಸ್ವರೂಪವನ್ನೇ ಹೊಂದುತ್ತಾನೆ .... 445
9.9.4 ಸ್ವಪ್ನ, ಸುಷುಪ್ತಿಗಳನ್ನು ಕುರಿತ ಅನ್ವೇಷಣೆಯ ಫಲ - ತ್ವಂ ಪದಾರ್ಥ ಶೋಧನ ............ 448
9.9.5 ಸುಷುಪ್ತಿ, ಸಮಾಧಿ ಹಾಗೂ ಮೋಕ್ಷ - ಸಮಾನ ಲಕ್ಷಣಗಳು ಹಾಗೂ ಭಿನ್ನತೆ ............ 449
9.9.6 ಅವಸ್ಥಾತ್ರಯವಿವೇಕವನ್ನಾಧರಿಸಿದ ಅನುಮಾನ, ಅಪರ್ಯಾಪ್ತ ; ಅಪರೋಕ್ಷಾನುಭವಕ್ಕಾಗಿ ಮಹಾವಾಕ್ಯ ಅತಿಮುಖ್ಯ ............ 452
9.9.7 ಅವಸ್ಥಾತ್ರಯದಿಂದ ಮುಕ್ತವಾದ ಜೀವನು ಎಲ್ಲರೂ ಅರಸುವ ಉತ್ತಮಪುರುಷನು ............ 456
9.9.8 ಸುಷುಪ್ತಿಯು ಮಾಯೆಯ ಸೂಚಕ ............ 464
9.9.9 'ಪ್ರಬೋಧನ'; ಕರುಣಾಳುವಾದ ಗುರುವಿನ ಕೃಪೆಯಿಂದ ಮಾಯೆಯ ನಾಶ ............ 465

9.9.10 ಶೂನ್ಯವಾದಕ್ಕೆ ಅಂತಿಮ ವಿರಾಮ ; ಶ್ರೀಗುರು, ಸನ್ಮಾತ್ರ, ಆತ್ಮ - ನಮಸ್ಕಾರಗಳು ........ 467

**10 ಏಳನೆಯ ನುಡಿ** ........ 472

10.1.1 ಪರಸ್ಪರ ಭಿನ್ನವಾದ ಹಾಗೂ ಬದಲಾಗುತ್ತಿರುವ ಅವಸ್ಥೆಗಳಲ್ಲಿ ಆತ್ಮವು ಸ್ಥಾಯಿ ........ 472

10.1.2 ನುಡಿಯ ಅರ್ಥ ವಿವರಣೆ - ಸ್ವಯಂಪ್ರಕಾಶನಾದ ಅಹಂ ನ 'ಇದಂ'-ಮುಕ್ತ ಅನುಭವ ........ 473

10.1.3 ಪ್ರತ್ಯಗಾತ್ಮ ಸದಾತ್ಮ ........ 477

10.1.4 ಪ್ರತ್ಯಗಾತ್ಮ ಚಿದಾತ್ಮ ........ 478

10.1.5 ಪ್ರತ್ಯಗಾತ್ಮ ಸುಖಾತ್ಮ ........ 478

10.1.6 ಬ್ರಹ್ಮಲಕ್ಷಣಗಳೇ ಪ್ರತ್ಯಗಾತ್ಮನ ಲಕ್ಷಣಗಳು ........ 479

10.1.7 ಅಪರೋಕ್ಷ ಸಾಕ್ಷಾತ್ಕಾರ - ಮಹಾವಾಕ್ಯ ವಿಚಾರ ........ 480

10.2.1 ಅನ್ವೇಷಣೆಯ ರಚನಾಕ್ರಮ - ಶ್ರವಣ, ಮನನ, ನಿದಿಧ್ಯಾಸನ - Reductio Ad Absurdum - ಅತಿವ್ಯಾಪ್ತಿಯಿಂದ ಅರ್ಥಹೀನತೆ ........ 480

10.2.2 ಶುದ್ಧ 'ಅಹಂ'ನ ಅನುಭವವೇ ಎಲ್ಲ 'ಇದಂ' ನ ತಳಹದಿ ........ 484

10.2.3 ಎಲ್ಲ ವ್ಯವಹಾರಗಳಿಗೂ 'ಅಹಂ' ಮತ್ತು 'ಇದಂ'ಗಳ ಅನ್ಯೋನ್ಯಾಧ್ಯಾಸವೇ ಕಾರಣ : ಅವಿದ್ಯೆ ........ 487

10.3.1 ಅಧ್ಯಾಸ ಎಂದರೇನು ? ........ 487

10.3.2 ಅರ್ಥಾಧ್ಯಾಸ, ಜ್ಞಾನಾಧ್ಯಾಸ ........ 488

10.3.3 ಅಧ್ಯಾಸ - ವಿವಿಧ ಸಿದ್ಧಾಂತಗಳು ........ 489

10.3.4 ಪ್ರಾಭಾಕರಮೀಮಾಂಸೆಯ ಅಖ್ಯಾತಿವಾದ ........ 491

10.3.5 ಅಖ್ಯಾತಿವಾದದ ಖಂಡನೆ ........ 494

10.3.6 ನೈಯಾಯಿಕರ ಅನ್ಯಥಾಖ್ಯಾತಿವಾದ ಹಾಗೂ ಭಾಟ್ಟಮೀಮಾಂಸೆಯ ವಿಪರೀತಖ್ಯಾತಿವಾದಗಳ ನಿರಾಕರಣೆ ........ 501

10.3.7 ಯೋಗಾಚಾರದ ಆತ್ಮಖ್ಯಾತಿವಾದದ ಖಂಡನೆ ........ 507

10.3.8 ಶೂನ್ಯವಾದಿಯ ಅಸತ್-ಖ್ಯಾತಿವಾದ - ಖಂಡನೆ ........ 510

10.3.9 ಸದಸತ್-ಖ್ಯಾತಿವಾದ - ಖಂಡನೆ - ವೇದಾಂತದ ಅನಿರ್ವಚನೀಯಖ್ಯಾತಿವಾದ ........ 512

10.3.10 ಶ್ರೀಶ್ರೀ ಆಚಾರ್ಯಪಾದರ ಅಧ್ಯಾಸದ ವ್ಯಾಖ್ಯೆ - ಬೇರೆ ಮೂವತ್ತು ಮತಗಳ ದೋಷಗಳಿಂದ ಮುಕ್ತ ........ 515

10.3.11 ಅಧ್ಯಾಸದ ದೃಷ್ಟಾಂತಗಳು ........................................ 521
10.3.12 ಅಧ್ಯಾಸದ ವಿವರಣೆ, ವರ್ಗೀಕರಣ, ದೋಷಗಳ ಮತ್ತು ಬೇರೆ ಘಟಕಗಳ ಒಳಗೊಳ್ಳುವಿಕೆ ........................................ 522
10.3.13 ಅಧ್ಯಾಸದ ಪ್ರಕ್ರಿಯೆ ........................................ 529
10.3.14 ಅವಿದ್ಯೆಯು ಅಧ್ಯಾಸದ ರಚನಾತ್ಮಕ ಘಟಕ ; ಉಳಿದ ಘಟಕಗಳು ಆನುಷಂಗಿಕ ........................................ 531
10.3.15 ಅಧ್ಯಾಸ - ಗಮನಿಸಬೇಕಾದ ಘಟಕಗಳು - ಅನಿರ್ವಚನೀಯತೆಯ ಸ್ವೀಕೃತಿ ಸಾರ್ವತ್ರಿಕ ........................................ 532
10.3.16 ಸತ್ತೆಯ ಎರಡು ಶ್ರೇಣಿಗಳ ನಡುವೆ ಗೊಂದಲ : - ವಿವರಣೆ, ಅನುಮಾನ ಇತ್ಯಾದಿ ವ್ಯರ್ಥ - ಭ್ರಮೆಯನ್ನು ದೂರಮಾಡಲು ಮಾತ್ರ ಪ್ರಕ್ರಿಯೆ - ಜಗನ್ಮಾಯೆಗೆ ಅನ್ವಯ ........................................ 535
10.3.17 ಆತ್ಮದ ತೊಡಗಿಕೊಳ್ಳುವಿಕೆ ಪ್ರಾತಿಭಾಸಿಕ, ಅಧಿಷ್ಠಾನ ನಿರ್ಮಲ, ಶುದ್ಧ539
10.3.18 ಸ್ತೋತ್ರ ತೋರಿಸಿದ ಹೊರಬರುವ ದಾರಿ ........................................ 541
10.4.1 ಪ್ರತ್ಯಭಿಜ್ಞೆ - ಭೇದದ ಭ್ರಾಂತಿಯನ್ನು ದೂರ ಮಾಡುವ ಮೂಲಕ ಸ್ವರೂಪಜ್ಞಾನ ........................................ 542
10.4.2 ಪ್ರತ್ಯಕ್ಷತ್ವದ ನಿರ್ಣಾಯಕ - ಪ್ರತ್ಯಕ್ಷಪ್ರಮಾಣವೆಂದು ಪ್ರತ್ಯಭಿಜ್ಞೆ ... 545
10.4.3 ಪರಮಾರ್ಥದಲ್ಲಿ ಪ್ರತ್ಯಭಿಜ್ಞೆ ಒಂದು ವಸ್ತುವಿಗೆ (ವಿಷಯಕ್ಕೆ) ಸಂಬಂಧಿಸಿದ ಸತ್ಪದಾರ್ಥವನ್ನು ಮಾತ್ರ ಪ್ರಕಾಶಿಸುತ್ತದೆ ............ 547
10.5.1 ಎಲ್ಲ ವಿಕಾರಿ ಅವಸ್ಥೆಗಳು, ಅಮುಖ್ಯ ಅವಸ್ಥೆಗಳು ಅವಿಕಾರಿಯಾದ ಒಂದೇ ಸತ್ಪದಾರ್ಥವಾದ ಬ್ರಹ್ಮಕ್ಕೆಯೇ ಸಂಬಂಧಿಸಿದವುಗಳು ...... 552
10.5.2 ಪ್ರತ್ಯಭಿಜ್ಞೆಯಿಂದ 'ಚಿತ್'ದ ದರ್ಶನ ........................................ 553
10.5.3 ವಸ್ತುವಿನ ದರ್ಶಕವೆಂದು ಪ್ರತ್ಯಭಿಜ್ಞೆ ಯಾವಾಗಲೂ ಸಪ್ರಮಾಣವಾದದ್ದು ........................................ 555
10.5.4 ಸ್ಮೃತಿ, ಸ್ಥಿರನಾದ 'ಅಹಂ'ನಿಗೆ ಸಂಬಂಧಿಸಿದ ಪ್ರತ್ಯಭಿಜ್ಞೆ ........... 557
10.5.5 ಮಾಯಾ ಹಾಗೂ ವಿದ್ಯೆ ........................................ 561
10.5.6 ಅಂತಃಕರಣವೃತ್ತಿಯೆಂದು ಪ್ರತ್ಯಭಿಜ್ಞೆ ........................................ 562
10.5.7 ಸಾಕ್ಷಿಯಾಗಿ ಪ್ರತ್ಯಭಿಜ್ಞೆ ........................................ 563
10.5.8 ನಿತ್ಯಚೈತನ್ಯನಾದ ಪ್ರತ್ಯಗಾತ್ಮನ್ ಪ್ರತ್ಯಭಿಜ್ಞೆಯಾಗಿ .................. 563
10.5.9 ಸ್ವಯಂಪ್ರಭವಾದ ಮಹಾವಾಕ್ಯಾರ್ಥವಾಗಿ ಪ್ರತ್ಯಭಿಜ್ಞೆ ............. 565
10.5.1 ಪ್ರತ್ಯಭಿಜ್ಞೆಗೆ ಸಂಬಂಧಿಸಿದ ಪ್ರಮಾಣಗಳು ........................................ 566
10.6.1 ಪ್ರಜ್ಞಾನ ಸಾರ್ವಲೌಕಿಕ, ಅವಸ್ಥೆಗಳು ಉಪಾಧಿಗಳು ................. 569

10.6.2 ಕೂಟಸ್ಥನಾದ ಸಾಕ್ಷಿ - ವೃತ್ತಿಗಳು, ಅವುಗಳ ನಡುವಿನ ಸಂಧಿಗಳು ; ಅವುಗಳ ಅಭಾವ ........ 573
10.6.3 ಆತ್ಮದ ಯಥಾವತ್ ಅನುಭವ - ಮೊದಲರುಚಿ - ಕ್ಷಣಿಕ ಸಮಾಧಿಗಳು 577
10.6.4 ಏಕವಾದ ಚೈತನ್ಯದ ಅಪರೋಕ್ಷ ಅನುಭವ - 'ಅಹಂ' ದ ಜಾಡಿನ ಅನುಸರಣೆ ........ 582
10.6.5 ಚೈತನ್ಯ, ಅಂತರ್ಯಾಮಿಯಾದ ಬ್ರಹ್ಮಾತ್ಮ, ಪ್ರತ್ಯಕ್ಷ, ಅಪರೋಕ್ಷ - ಉಷಸ್ತಿ ಹಾಗೂ ಕಹೋಲ ಬ್ರಾಹ್ಮಣಗಳು ........ 584
10.6.6 ಶ್ರುತಿ ಹಾಗೂ ಸ್ತೋತ್ರದ ನುಡಿ ........ 588
10.6.7 ಅಪವಾದ ದೃಷ್ಟಿ, ಎಲ್ಲ ಅಧ್ಯಾತ್ಮಶಾಸ್ತ್ರಗಳ ಪ್ರಯತ್ನಗಳ ಗುರಿ .... 592
10.7.1 ಭಕ್ತಿ ಅತ್ಯಗತ್ಯವಾದ ಸಾಧನ ಸಾಮಗ್ರಿ ........ 594
10.7.2 ಪಾಂಡಿತ್ಯ, ಬಾಲ್ಯ, ಮೌನ - ಮುಖ್ಯಬ್ರಾಹ್ಮಣ್ಯ ........ 595
10.7.3 ಏಕಾಗ್ರವಾದ ಭಕ್ತಿ ........ 599
10.7.4 ಭಕ್ತಿಯ ಎರಡು ಆಯಾಮಗಳು ........ 601
10.7.5 ಭಕ್ತಿ - ತ್ರಿವಿಧ ; ಪ್ರತ್ಯಗಾತ್ಮನಲ್ಲಿ ನಿಷ್ಠೆ ........ 602
10.7.6 ಪ್ರತ್ಯಭಿಜ್ಞಾನವಿಲ್ಲದ ಸಮಾಧಿಗಳು ನಿರರ್ಥಕ ........ 603
10.7.7 ಆತ್ಮದಲ್ಲಿ ಭಕ್ತಿ - ಅಕ್ಷರೋಪಾಸನೆ ........ 606
10.7.8 ಈಶ್ವರನಲ್ಲಿ ಭಕ್ತಿ - ವಿಶ್ವಾತ್ಮಕ ರೂಪ ........ 608
10.7.9 ಶ್ರೀಗುರುವಿನಲ್ಲಿ ಭಕ್ತಿ - ಕರ್ಮವೆಂಬ ಮೃತ್ಯುವಿನಿಂದ ಮೋಕ್ಷ...... 613
10.7.10ಕಾಮವೆಂಬ ಮೃತ್ಯುವಿನಿಂದ ಮೋಕ್ಷ ........ 615
10.7.11 ಅವಿದ್ಯೆ ಎಂಬ ಮೃತ್ಯುವಿನಿಂದ ಮುಕ್ತಿ ........ 618
10.8.1 ಪ್ರಕಟೀಕರಣ - ಅವಿದ್ಯೆ ಹಾಗೂ ಅದರ ನಿಷ್ಪತ್ತಿಗಳೆಂಬ ಎರಡನೆಯ ವಸ್ತು ಎಂದೂ ಇರಲಿಲ್ಲ, ಈಗಲೂ ಇಲ್ಲ, ಮುಂದೆಯೂ ಇರುವುದಿಲ್ಲ. 621
10.8.2 ಆತ್ಮದ ಸಾಕ್ಷಿತ್ವಕ್ಕೆ ಬಾಧೆ ........ 624
10.8.3 ಅಖಂಡಾಕಾರ ವೃತ್ತಿಗೆ ಬಾಧೆ ; ಬಾಧಕ ವಸ್ತು ........ 624
10.8.4 ಪ್ರಗತಿ, ಕಾಲಕ್ರಮದಲ್ಲಿ ; ಪೂರ್ಣತ್ವ, ಕಾಲಾತೀತ ಸ್ಫುರಣದಲ್ಲಿ .... 629
10.8.5 ಮಾಯೆಯ 'ನಾಶ' ........ 629
10.8.6 ಒಮ್ಮೆ ಬಾಧಿತವಾದ ಅಜ್ಞಾನ ಮತ್ತೆ ಹುಟ್ಟಿಕೊಳ್ಳುವುದಿಲ್ಲ, - ಬಾಧೆ ಹಾಗೂ ಪ್ರಧ್ವಂಸಾಭಾವಗಳ ಅಂತರ - ಅಭಾವ ಒಂದು ವಿಕಲ್ಪ ... 632
10.8.7 ವಿಶ್ವ - ಪ್ರಾಜ್ಞರಿಗೆ ಕೇವಲ ಆತ್ಮನ್-ಬ್ರಹ್ಮನ್, ಭ್ರಾಂತರಿಗೆ ಅನೇಕ .... 638
10.9 ಸಾಕ್ಷಾತ್ಕಾರ - ಅನುಭವದ ಸತ್ಯ - ಎಲ್ಲ ಊಹೆ ಹಾಗೂ ತರ್ಕಗಳಿಗೆ ಕೊನೆ. ........ 639

10.9.1 ಉಪದೇಶ ಯಾರಿಗೆ ? ಬ್ರಹ್ಮನಿಗೋ ಅಥವಾ ಅನ್ಯನಿಗೋ ? ........639
10.9.2 ಅವಿದ್ಯೆಯ ನಾಶ - ಪ್ರಶ್ನೆಗಳು..........................................641
10.9.3 ಪ್ರತ್ಯಕ್ಷ ಅನುಭವವೇ ನಿರ್ಣಾಯಕ.....................................642
10.9.4 ಅವಿದ್ಯೆಯ ಮೇಲೆ ಆಕ್ರಮಣ - ಅಸತ್ ಮೇಲಿನ ಆಕ್ರಮಣವೇ .....643
10.9.5 ತರ್ಕವು ಅನುಭವದ ಅಡಿಯಾಳಾಗಬೇಕು .............................645
10.9.6 ಅವಿದ್ಯೆಯ ನಿವೃತ್ತಿ - ಅನುಭವ ಮತ್ತು ಅರ್ಥಾಪತ್ತಿ ................647
10.9.7 ಅವಿದ್ಯೆಯ ನಾಶ - ಪ್ರಕ್ರಿಯೆಗಳು ........................................648
10.9.8 ಅಖಂಡಾಕಾರವೃತ್ತಿ ಅಂತಿಮ ಪ್ರಮಾಣ..............................653
10.9.9 ವೇದಾಂತ ಅನಾಕ್ರಮಣೀಯ ...........................................654
10.9.10 ಪ್ರಕಟೀಕರಣ - ಕೇವಲನಾದ, ಅವಿನಾಶಿಯಾದ ಶಿವನಾದ, 'ಅಹಂ'ನ ಸಾಕ್ಷಾತ್ಕಾರ ................................................................. 656
10.10.1 ಪರಮಶಾಂತಿ - ಮೌನದ ವಾಗ್ಮಿತೆ.....................................658
10.10.2 ಉಪದೇಶದ ಸಂಕೇತ - ಮಂಗಲಕರವಾದ ಚಿನ್ಮುದ್ರೆ................661
10.10.3 ಶ್ರೀಗುರುವಿಗೆ ಅತ್ಯಂತ ಕೃತಜ್ಞತೆಯಿಂದ, ಪೂಜ್ಯಭಾವದಿಂದ, ತಾದಾತ್ಮ್ಯದ ಅರಿವಿನಿಂದ ನಮಸ್ಕಾರಗಳು............................. 665
10.11 ಉಪಸಂಹಾರ - ಸಾರಾಂಶ - ಸರ್ವಾತ್ಮತ್ವ .............................666

॥ ಶ್ರೀಃ ॥

# ಶ್ರೀದಕ್ಷಿಣಾಮೂರ್ತಿ ಸ್ತೋತ್ರಮ್
# ಮಾನಸೋಲ್ಲಾಸ ಹಾಗೂ ತತ್ತ್ವಸುಧಾ
# ವ್ಯಾಖ್ಯಾನಗಳನ್ನಾಧರಿಸಿದ ಅಧ್ಯಯನ

## ॥ ಸಂಪುಟ 2 ॥

## 7. ನಾಲ್ಕನೆಯ ನುಡಿ - ರಕ್ಷಕನಾಗಿ ಶ್ರೀಗುರು

### 7.1.1 ಮಹಾವಾಕ್ಯಾರ್ಥದಲ್ಲಿ ಸ್ಥಿತನಾಗಿರುವುದು - ನಿರಂತರ ಅನ್ವೇಷಣೆಯ ಅವಶ್ಯಕತೆ

ಬ್ರಹ್ಮಾತ್ಮೈಕ್ಯವು ಶ್ರುತಿಯ ಬೋಧೆಯೆಂದು ಇಲ್ಲಿ ಸ್ಥಾಪಿತವಾಗಿರುವುದು, ಪ್ರತ್ಯಕ್ಷ ಮೊದಲಾದ ಎಲ್ಲ ಪ್ರಮಾಣಗಳೆಂದು ಗಣಿಸಲಾದ ಪುರಾವೆಗಳಿಗೆ ವಿರುದ್ಧವಾದುದೆಂದು ಕೆಲವರು ಆಕ್ಷೇಪಿಸಿದ್ದಾರೆ. ಈ ಆಕ್ಷೇಪಗಳು **'ತತ್' ಪದಾರ್ಥ** ಹಾಗೂ **'ತ್ವಂ' ಪದಾರ್ಥ**ಗಳೆರಡಕ್ಕೂ ಸಂಬಂಧಿಸಿ ಬಂದಿವೆ. ಸ್ತೋತ್ರದ ನಾಲ್ಕನೆಯ ನುಡಿ ವಿಶೇಷವಾಗಿ ಇವುಗಳಲ್ಲಿ ಮೊದಲನೆಯದಕ್ಕೆ (ತತ್) ಸಂಬಂಧಿಸಿದರೆ, ಐದನೆಯ ಮತ್ತು ಆರನೆಯ ನುಡಿಗಳು ಎರಡನೆಯದಕ್ಕೆ (ತ್ವಂ) ಸಂಬಂಧಿಸಿವೆ. **ಮಾನಸೋಲ್ಲಾಸಟೀಕಾ** (IV-1) ತೋರಿಸುವಂತೆ, ಇಲ್ಲಿ ಅನುಸರಿಸಿದ ವಿಧಾನ, ಈ ಮೊದಲೇ ತಿಳಿಸಿದಂತೆ, ಬ್ರಹ್ಮಸೂತ್ರದ **ಅವಿರೋಧಾಧ್ಯಾಯ**ದ ರೀತಿಯಲ್ಲಿದೆ.

ಈ ಅನ್ವೇಷಣೆ ಮಹಾವಾಕ್ಯದ ಉಪದೇಶದ ಮೂಲಕ ಸಮ್ಯಕ್ ಜ್ಞಾನದ ಸ್ಫುರಣದ ಅನುಗ್ರಹ ಪಡೆದವನಲ್ಲಿ ಅಳುಕುತ್ತಿರಬಹುದಾದ ವಿರುದ್ಧ ವಿಚಾರಗಳನ್ನು ಹೊರಗೆ ಹಾಕಿ ಅವನನ್ನು ಬ್ರಹ್ಮಾತ್ಮದಲ್ಲಿ ಮಾತ್ರ ನೆಲೆಸುವಂತೆ ಸ್ಥಿತಗೊಳಿಸುವುದಾಗಿದೆ. ಮಹಾವಾಕ್ಯದ ತಾತ್ಪರ್ಯವಾದ 'ನಾನು ಬ್ರಹ್ಮ' ಈ ಜ್ಞಾನ ದೃಢವಾಗುವವರೆಗೆ (ಸಾಧಕನು) ಶಮಾದಿಗಳನ್ನು ಹೊಂದಿದವನಾಗಿ ಶ್ರವಣಾದಿಗಳನ್ನು ಅಭ್ಯಾಸಮಾಡಬೇಕೆಂದು

**ವಾಕ್ಯವೃತ್ತಿ**(49)ಯಲ್ಲಿ ಶ್ರೀ ಶ್ರೀ ಆಚಾರ್ಯಪಾದರು ವಿಧಿಸಿರುವುದನ್ನು ಶ್ರೀ ಶ್ರೀವಿದ್ಯಾರಣ್ಯಚರಣರು ತೋರಿಸಿದ್ದಾರೆ –

ಅಸ್ತು ಬೋಧೋಽಪರೋಕ್ಷೋಽತ್ರ ಮಹಾವಾಕ್ಯಾತ್ತಥಾಽಪ್ಯಸೌ ।
ನ ದೃಢಃ ಶ್ರವಣಾದೀನಾಮಾಚಾರ್ಯೈಃ ಪುನರೀರಣಾತ್ ॥
(ಪಂ. VII-97)
ಅಹಂ ಬ್ರಹ್ಮೇತಿ ವಾಕ್ಯಾರ್ಥಬೋಧೋ ಯಾವದ್ದೃಢೀಭವೇತ್ ।
ಶಮಾದಿಸಹಿತಸ್ತಾವದಭ್ಯಸೇಚ್ಛ್ರವಣಾದಿಕಮ್ ॥ (ಪಂ. VII-98)

ಬೇರೆ ಸಾಧಕರು ಕೂಡ ಶ್ರವಣ ಮುಂತಾದವುಗಳ ಅನುಷ್ಠಾನವನ್ನು ಅವಶ್ಯವಾಗಿ ಮಾಡಲೇಬೇಕೆಂದು ಪ್ರತ್ಯೇಕವಾಗಿ ಹೇಳುವ ಅವಶ್ಯಕತೆ ಇಲ್ಲ. ಇದರಿಂದ ಮಹಾವಾಕ್ಯಾರ್ಥವನ್ನು ತಿಳಿದುಕೊಂಡಿದ್ದರೂ, ಜ್ಞಾನದ ಅನುಗ್ರಹವನ್ನು ಪಡೆಯದವರಿಗೆ ಸಾಕ್ಷಾತ್ಕಾರದ ಹಾದಿಯಲ್ಲಿ ಅಡ್ಡಬರುವ ಬೇರೆ ವೈಚಾರಿಕ ನಿಲುವುಗಳ ಅಶಕ್ತತೆಯನ್ನು ತೆರೆದು ತೋರಿಸುವ ಮೂಲಕ, ಸಹಾಯವಾಗುತ್ತದೆ. ಈ ಅನ್ವೇಷಣೆಯು **ಮಹಾವಾಕ್ಯ**ದ ತಾತ್ಪರ್ಯವನ್ನು ಪುನರಾವರ್ತಿಸುವ ಮೂಲಕ, ಮಹಾವಾಕ್ಯದ ಅರ್ಥವನ್ನು ಇನ್ನೂ ತಿಳಿಯಬೇಕಾದವರಿಗೂ ಪ್ರಯೋಜನಕಾರಿಯಾಗುತ್ತದೆ. ಅದರ ಉದ್ದೇಶ ವ್ಯಾವಹಾರಿಕ ಅನುಭವಗಳನ್ನು - 'ಮಡಕೆ ಇದೆ', 'ಮಡಕೆ ತೋರಿಬರುತ್ತಿದೆ' ಹಾಗೂ 'ನಾನು ಒಬ್ಬ ಮನುಷ್ಯ' - ಒಟ್ಟಾಗಿ ಹೇಗೆ ಹೊಂದಿಸಿಕೊಳ್ಳಬೇಕು ಎನ್ನುವುದನ್ನು ತಿಳಿಯುವುದು. ಇದಕ್ಕೂ ಮುಂದೆ, ಶ್ರುತಿ ಹೇಳಿದ ರೀತಿಯಲ್ಲಿ ಬ್ರಹ್ಮಾತ್ಮವನ್ನು ಸಾಧಕನು ಎಲ್ಲಿ ಶೋಧಿಸಬೇಕು - **ಸೋಽನ್ವೇಷ್ಟವ್ಯಃ ಸ ವಿಜಿಜ್ಞಾಸಿತವ್ಯಃ** (ಛಾಂ.ಉ. 8-7-1) ಎನ್ನುವುದನ್ನು ಹೇಳಲಾಗಿದೆ. ಬ್ರಹ್ಮಸೂತ್ರಗಳ **ಸಮನ್ವಯಾಧ್ಯಾಯ** ಹಾಗೂ **ಅವಿರೋಧಾಧ್ಯಾಯ** ಹಾಗೂ ಅವುಗಳ ಮೇಲಿನ ಭಾಷ್ಯಗಳ ಆಧಾರವಾಗಿಟ್ಟುಕೊಂಡ ಅನ್ವೇಷಣೆಗಳ ಮೂಲಕ ಇದನ್ನು ಸಾಧಿಸಲಾಗಿದೆ. ಇಂಥ ಅನ್ವೇಷಣೆ ಹಾಗೂ ಅಸಂಗತ ಭಾವನೆಗಳ ಪ್ರಾಬಲ್ಯದಿಂದ ಮುಕ್ತವಾದ ನಿದಿಧ್ಯಾಸನ ಇವುಗಳನ್ನು ಕೈಗೊಳ್ಳುವಾಗ ಸಾಧಕನ ಪಕ್ವತೆಗೆ ಅನುಸಾರವಾಗಿ ಅವುಗಳನ್ನು ಹೊಂದಿಸಿಕೊಳ್ಳಬೇಕಾಗುತ್ತದೆ.

**ಪಂಚದಶೀ** ಹೇಳುವಂತೆ -

ಸಮನ್ವಯಾಧ್ಯಾಯ ಏತತ್ ಸೂಕ್ತಂ ಧೀಸ್ವಾಸ್ಥ್ಯಕಾರಿಭಿಃ ।
ತರ್ಕೈಃ ಸಂಭಾವನಾರ್ಥಸ್ಯ ದ್ವಿತೀಯಾಧ್ಯಾಯ ಈರಿತಾ ॥ (VII – 102)

ಬಹುಜನ್ಮದೃಢಾಭ್ಯಾಸಾದ್ದೇಹಾದಿಷ್ವಾತ್ಮಧೀಃ ಕ್ಷಣಾತ್ ।
ಪುನಃಪುನರುದೇತ್ಯೇವಂ ಜಗತ್ಸತ್ಯತ್ವಧೀರಪಿ ॥ (VII – 103)

ವಿಪರೀತಾ ಭಾವನೇಯಮೈಕಾಗ್ರ್ಯಾತ್ಸಾ ನಿವರ್ತತೇ ॥
(VII – 104)

ತತ್ತ್ವಭಾವನಯಾ ನಶ್ಯೇತ್ ಸಾತೋ ದೇಹಾತಿರಿಕ್ತತಾಮ್ ।
ಆತ್ಮನೋ ಭಾವಯೇತ್ತದ್ವನ್ಮಿಥ್ಯಾತ್ವಂ ಜಗತೋಽನಿಶಮ್ ॥
(VII – 112)

[ಬ್ರಹ್ಮಸೂತ್ರಗಳ **ಸಮನ್ವಯಾಧ್ಯಾಯ** ಎಂಬ ಮೊದಲನೆಯ ಅಧ್ಯಾಯದಲ್ಲಿ ವಿವರವಾಗಿ ಇದನ್ನು ಹೇಳಿದೆ. ಎರಡನೆಯ ಅಧ್ಯಾಯದಲ್ಲಿ, ಬುದ್ಧಿಯನ್ನು ಆತ್ಮದಲ್ಲಿ ಸ್ಥಿರಗೊಳಿಸಲು ತರ್ಕಗಳನ್ನು ಉಪಯೋಗಿಸಿ ವಿಷಯಸಿದ್ಧಾಂತದ ಸಮರ್ಥನೆ ನೀಡಲಾಗಿದೆ.

ಅನೇಕ ಜನ್ಮಗಳ ಸತತ ಲಾಲನೆಯ ಕಾರಣವಾಗಿ ತಾನು ದೇಹವೇ ಎನ್ನುವ ಭಾವನೆ, ಅಲ್ಲದೆ ಜಗತ್ತು ಸತ್ಯವೆಂಬ ವಿಚಾರ ಮತ್ತೆ ಮತ್ತೆ ಬರುತ್ತವೆ. ಈ ತಪ್ಪು ಕಲ್ಪನೆಯ ನಿರ್ಮೂಲನವನ್ನು ಮನಸ್ಸಿನ ಏಕಾಗ್ರತೆಯಿಂದ ಸಾಧಿಸಬಹುದು. ಸತ್ಯದ ಮನನದಿಂದ ಅದು ನಾಶವಾಗುತ್ತದೆ. ಆದ್ದರಿಂದ (ಸಾಧಕನು) ನಿರಂತರವಾಗಿ ತಾನು ದೇಹದಿಂದ ಬೇರೆ ಎನ್ನುವುದರ ಬಗ್ಗೆ, ಹಾಗೆಯೇ ವಿಶ್ವದ ಅಸತ್ ಸ್ವರೂಪದ ಬಗ್ಗೆ ಸದಾ ಚಿಂತಿಸಬೇಕು.]

ಈ ವಿಷಯದ ವಿವರಣೆಯನ್ನು ಮುಂದುವರಿಸುತ್ತ **ಪಂಚದಶೀ** ಬ್ರಹ್ಮದ ಮನನ ಮಾಡುವಾಗ, ಆ ಕುರಿತು ವಿಚಾರ ಮಾಡುವಾಗಾಗಲಿ ಮಾತಾಡುವಾಗಾಗಲಿ ಯಾವುದೇ ವಿಧಿ ಅಥವಾ ನಿಷೇಧಗಳಿಲ್ಲ ಎಂದು ಹೇಳುತ್ತದೆ. 'ಆತ್ಮ ಎಂದರೆ ಚಿತ್-ಏ. ಹಾಗೂ ಜಗತ್ತೆನ್ನುವುದು ಮಿಥ್ಯೆ' ಎಂಬ ಗ್ರಹಿಕೆಯಲ್ಲಿ ಪರ್ಯವಸಾನ ಹೊಂದಿದ ಮನಸ್ಸುಳ್ಳವನನ್ನು ಆಖ್ಯಾನಗಳಾಗಲಿ, ಇತಿಹಾಸಗಳಾಗಲಿ

ವಿಚಲಿತಗೊಳಿಸಲಾರವು ಯಾಕೆಂದರೆ ಅವು ಕೂಡ ಸಾಧಕನನ್ನು ಇದೇ ಗುರಿಯತ್ತ ಕರೆದೊಯ್ಯುತ್ತವೆ.

ಚಿದೇವಾತ್ಮಾ ಜಗನ್ಮಿಥ್ಯೇತ್ಯತ್ರ ಪರ್ಯವಸಾನತಃ ।
ನಿದಿಧ್ಯಾಸನವಿಕ್ಷೇಪೋ ನೇತಿಹಾಸಾದಿಭಿರ್ಭವೇತ್ ॥ (ಪಂ. VII-123)

ಬೇರೆ ಬೇರೆ ಮಟ್ಟದ ಅಧಿಕಾರ ಹೊಂದಿದ ಸಾಧಕರನ್ನು ಕುರಿತು **ಪಂಚದಶೀ** ವಿವರಗಳನ್ನು ಒದಗಿಸಿದೆ

### 7.1.2 ಆಕ್ಷೇಪ: ವಸ್ತುಗಳ 'ಸತ್' ಮತ್ತು ಸ್ಫುರಣ ಅವುಗಳವೇ ; ಇಂದ್ರಿಯಗಳ ಅವಶ್ಯಕತೆ ಇಲ್ಲ.

**ಮಾನಸೋಲ್ಲಾಸ** (IV-1) ನಾಲ್ಕನೆಯ ನುಡಿಯನ್ನು ಪರಿಚಯಿಸುತ್ತ ಹೀಗೆ ಹೇಳುತ್ತದೆ –

ಸ್ವತಃ ಸನ್ತಃ ಪ್ರಕಾಶನ್ತೇ ಭಾವಾ ಘಟಪಟಾದಯಃ ।
ನೇಶ್ವರಸ್ಯ ಸಮಾವೇಶಾದಿತ್ಯಸ್ಯೋತ್ತರಮುಚ್ಯತೇ ॥

['ಮಡಕೆ ಇದೆ', 'ಬಟ್ಟೆ ಇದೆ', 'ಮಡಕೆ ತೋರುತ್ತಿದೆ', 'ಬಟ್ಟೆ ತೋರುತ್ತಿದೆ' ಮುಂತಾದ ಅನುಭವಗಳನ್ನು ಪುರಾವೆಯಾಗಿಟ್ಟು-ಕೊಂಡು ಮಡಿಕೆ ಅಥವಾ ಬಟ್ಟೆಗಳಂಥ ವಸ್ತುಗಳಿಗೆ ತಮ್ಮದೇ ಆದ ಅಸ್ತಿತ್ವವಿದೆ ಹಾಗೂ ಅವು ತಾವಾಗಿಯೇ ತೋರಿಬರುತ್ತವೆ, ಈಶ್ವರನು ಅವುಗಳಲ್ಲಿ ಪ್ರವೇಶಿಸುವುದರಿಂದ ಅಲ್ಲ.]

ಆಕ್ಷೇಪಕನ ನಿಲುವನ್ನು ಈ ನುಡಿಯ ಸಂದರ್ಭದಲ್ಲಿ **ತತ್ತ್ವಸುಧಾ** ಹೆಚ್ಚು ವಿವರದಲ್ಲಿ ವ್ಯಕ್ತಪಡಿಸಿದೆ –

ನನ್ವೇವಂ ತರ್ಹಿ ಸರ್ವಸ್ಯ ಜಗತ ಆತ್ಮನ್ಯಧ್ಯಸ್ತತ್ವೇ ಭವನ್ಮತೇ ಕಥಂ ಕರಣಾದ್ಯಪೇಕ್ಷಾ ? ಪ್ರಕಾಶರೂಪಾತ್ಮಸಂಬನ್ಧಾದೇವ ಸರ್ವಂ ಸರ್ವದಾ ಕಿಮಿತಿ ನ ಭಾಯಾತ್ ? ಸರ್ವಗತಚೈತನ್ಯಸ್ಯಾವಿರೋಧೇನ ಅಜ್ಞಾನಾವೃತತ್ವೇ ವಾ ಕಥಂ ಕಾದಾಚಿತ್ಕಂ ಜಗತೋ ಭಾನಮ್ ? ಅಜ್ಞಾನಸ್ಯ ಚೈತನ್ಯಾತಿರಿಕ್ತನಿವರ್ತಕಾಭಾವಾತ್, ತಸ್ಯ ಚಾವಿರೋಧಿತ್ವಾತ್ ।

[ನಿಮ್ಮ ಅಭಿಪ್ರಾಯದಂತೆ ಇಡಿಯ ಜಗತ್ತು ಆತ್ಮದ ಮೇಲೆ ಅಧ್ಯಾರೋಪಿತವಾಗಿದ್ದರೆ ಇಂದ್ರಿಯಾದಿಗಳ ಆವಶ್ಯಕತೆ ಏನು ? ಸ್ಫುರಣಸ್ವರೂಪನಾದ ಆತ್ಮದ ನೇರ ಸಂಬಂಧವಿರುವಾಗ ಪ್ರತಿಯೊಂದು ವಸ್ತುವೂ ತಾನಾಗಿಯೇ ಯಾವಾಗಲೂ ಯಾಕೆ ಪ್ರಕಾಶಿಸಲಾರದು ? ಒಂದು ವೇಳೆ ಆತ್ಮ ಅಜ್ಞಾನದ ಕಾರಣವಾಗಿ ಮರೆಯಾಗಿದೆ ಎಂದು ಹೇಳುವಿರಾದರೆ ನಿಮ್ಮ ಪ್ರಕ್ರಿಯೆಯಲ್ಲಿ ಅಜ್ಞಾನವನ್ನು ತೆಗೆದುಹಾಕುವ ಆ ಸರ್ವವ್ಯಾಪಿಯಾದ 'ಚಿತ್' ಏಕೈಕವಾದದ್ದಾದರೂ ಅಜ್ಞಾನವನ್ನೂ ಸೇರಿ ಏನನ್ನೂ ವಿರೋಧಿಸುವುದಿಲ್ಲವಾದ್ದರಿಂದ, ಜಗತ್ತಿನ ವಸ್ತುಗಳು ಕದಾಚಿತ್ ಆದರೂ ಸ್ಫುರಿಸುವ ಸಂಭವವಾದರೂ ಎಲ್ಲಿದೆ ?]

'ಜಗತ್ತಿನಲ್ಲಿ ಎಲ್ಲ ವಸ್ತುಗಳೂ ತಮ್ಮ ಇರುವಿಕೆ ಮತ್ತು ಸ್ಫುರಣ ಎರಡನ್ನೂ ಈಶ್ವರನಿಂದಲೇ ಪಡೆಯುತ್ತವೆ' ಎಂಬ ಮೂರನೆಯ ನುಡಿಯ ಮೊದಲ ಸಾಲಿನಲ್ಲಿ ಬರುವ ಹೇಳಿಕೆಯ ಬಗ್ಗೆ ಹೀಗೆ ಆಕ್ಷೇಪ.

## 7.1.3 ಉತ್ತರ : ನಾಲ್ಕನೆಯ ನುಡಿ

ಇದಕ್ಕೆ ಉತ್ತರವಾಗಿ ನಾಲ್ಕನೆಯ ನುಡಿ –

ನಾನಾಛಿದ್ರಘಟೋದರಸ್ಥಿತಮಹಾದೀಪಪ್ರಭಾಭಾಸ್ವರಂ
ಜ್ಞಾನಂ ಯಸ್ಯ ತು ಚಕ್ಷುರಾದಿಕರಣದ್ವಾರಾ ಬಹಿಃ ಸ್ಪನ್ದತೇ ।
ಜಾನಾಮೀತಿ ತಮೇವ ಭಾನ್ತಮನುಭಾತ್ಯೇತತ್ಸಮಸ್ತಂ ಜಗ-
ತ್ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ ॥

[ಯಾರ ಚೈತನ್ಯವು ಅನೇಕ ಛಿದ್ರಗಳುಳ್ಳ ಘಟದೊಳಗಿರಿಸಿದ ಮಹಾದೀಪದಂತೆ ಕಣ್ಣು ಮೊದಲಾದ ಕರಣಗಳ ಮೂಲಕ ಹೊರಗೆ ಹರಿದುಬರುತ್ತದೆಯೋ, ಹಾಗೆ 'ನಾನು ತಿಳಿದಿದ್ದೇನೆ' ಎಂಬ ಅರಿವಿನಿಂದ ಯಾರು ಪ್ರಕಾಶಿಸುತ್ತಾರೋ ಅವನನ್ನೇ ಅನುಸರಿಸಿ ಈ ಇಡೀ ಜಗತ್ತು ಪ್ರಕಾಶವಾಗಿದೆಯೋ ತನ್ನ ಗುರುವಿನ ರೂಪದಲ್ಲಿ ಅವತರಿಸಿದ ಆ ಪ್ರಭಾಯಮಾನನಾದ ಶ್ರೀದಕ್ಷಿಣಾಮೂರ್ತಿಗೆ ನನ್ನ ನಮಸ್ಕಾರಗಳು.]

### 7.1.4 ‘ನಾನು ಮಡಿಕೆಯನ್ನು ತಿಳಿದಿದ್ದೇನೆ’ ಎಂಬ ಅನುಭವದ ವಿಶ್ಲೇಷಣೆ - ಸಾಕ್ಷಿ

ಈ ಎಲ್ಲ ಚರ್ಚೆಯ ಕೇಂದ್ರವಾದ ‘ನಾನು ತಿಳಿದಿದ್ದೇನೆ’ - ಜಾನಾಮಿ - ಎಂಬ ಅನುಭವದತ್ತ ಇಲ್ಲಿ ಲಕ್ಷ್ಯಗೊಡಲಾಗಿದೆ. ಎಂದರೆ ಅನ್ವೇಷಕನು ‘ಮಡಕೆ ಇದೆ’ **ಘಟೋಽಸ್ತಿ** – ‘ಮಡಕೆ ತೋರುತ್ತದೆ’ – **ಘಟಃ ಸ್ಫುರತಿ** – ಎಂಬ ಪ್ರಮಾಣಸಿದ್ಧ ಗ್ರಹಿಕೆಗಳನ್ನಷ್ಟೇ ಅಲ್ಲದೆ ಇವುಗಳೊಡನೆಯೇ ಬರುವ – ‘ನಾನು ಮಡಕೆಯನ್ನು ತಿಳಿದಿದ್ದೇನೆ’ - **ಅಹಂ ಘಟಮ್ ಜಾನಾಮಿ** – ‘ಮಡಕೆ ನನ್ನಿಂದ ಗ್ರಹಿಸಲ್ಪಟ್ಟಿದೆ’ – **ಮಯಾ ವಿದಿತೋಽಯಂ ಘಟಃ** – ‘ಸಾಕ್ಷಿ’ಯ ಇಂಥ ಅನುಭವಗಳನ್ನು ಗುರುತಿಸಬೇಕಾಗುತ್ತದೆ. **ಮಾನಸೋಲ್ಲಾಸ** (IV-2) ತೋರಿಸುವ ಹಾಗೆ ಈ ಜ್ಞಾನ ಬಹಳ ಮಹತ್ತ್ವದ್ದು.

ಅಹಮಿತ್ಯನುಸನ್ಧಾತಾ ಜಾನಾಮೀತಿ ನ ಚೇತ್ ಸ್ಫುರೇತ್ ।
ಕಸ್ಯ ಕೋ ವಾ ಪ್ರಕಾಶೇತ ಜಗಚ್ಚ ಸ್ಯಾತ್ ಸುಷುಪ್ತವತ್ ॥

[‘ನಾನು ತಿಳಿದಿದ್ದೇನೆ’ ಎಂಬ ವಾಸ್ತವಿಕ ಅರಿವಿನಲ್ಲಿ ಪ್ರಮಾತೃವು ‘ನಾನು’ ಎಂದು ಪ್ರಕಟವಾಗದಿದ್ದರೆ, ಸ್ಫುರಿಸುವುದು ಏನನ್ನು ಮತ್ತು ಯಾರಿಗೆ ? ಪ್ರತಿಯೊಬ್ಬ ವ್ಯಕ್ತಿಯೂ ಸುಷುಪ್ತಿಯಲ್ಲಿದ್ದಂತಾಗುತ್ತದೆ.]

ಈ ಶ್ಲೋಕದ ಮೇಲಿನ **ಟೀಕಾ** ಹೀಗಿದೆ -

ಒಂದು ವಸ್ತು ತಾನಾಗಿಯೇ ಪ್ರಕಾಶಿಸುವುದಾದರೆ, ಅನುಭವಿಸುವವನಾದ ಪ್ರಮಾತೃವಿಗೆ ‘ನಾನು ಆ ವಸ್ತುವನ್ನು ಗ್ರಹಿಸಿದ್ದೇನೆ’ ಎಂಬ ರೂಪದ ಯಾವ ಅನುಭವವೂ ಇರುವುದು ಅಸಾಧ್ಯ. ಆಗ, ಒಂದು ವ್ಯಕ್ತಿಯ ಚಿತ್ತವು ಎಲ್ಲ ಕಡೆಗಳಿಂದಲೂ ದಪ್ಪ ಕಲ್ಲುಗಳಿಂದ ಮುಚ್ಚಿದ ಗುಹೆಯಲ್ಲಿ ಉರಿಯುತ್ತಿರುವ ದೀಪವಿದ್ದಂತೆ ಆಗಿ ಅದರ ಎದುರಿಗಿನ ಯಾವ ವಸ್ತುವನ್ನೂ ತಲುಪಲಾರದು. ಹೀಗಾಗಿದ್ದರೆ ಸುತ್ತಲಿನ ಜಗತ್ತಿನ ಅರಿವೇ ಇಲ್ಲದೆ ವ್ಯಕ್ತಿ ಸಂಪೂರ್ಣ ಜಡನಾಗಿ ಹಾಗೂ ಗಾಢ ನಿದ್ರೆಯಲ್ಲಿದ್ದವನಂತೆ ಜಗತ್ತಿನ ವ್ಯವಹಾರಗಳಿಗೆ ವಿಮುಖನಾಗಿಬಿಡಬೇಕಾಗಿತ್ತು. ಆದ್ದರಿಂದ ಜಗತ್ತು ತಾನು ವ್ಯಕ್ತವಾಗಲು ಬೇರೊಂದರ ಮೇಲೆ ಅವಲಂಬಿಸಿದೆ ಎನ್ನುವುದನ್ನು ಒಪ್ಪಲೇ ಬೇಕಾಗುತ್ತದೆ. ಜಗತ್ತು ತನ್ನ ಪ್ರಕಾಶವನ್ನು

ಪಡೆಯಲು ಅವಲಂಬಿಸಿದ ಆ ಬೇರೊಂದು ಪದಾರ್ಥವು ನಿತ್ಯವಾಗಿರಬೇಕು ಹಾಗೂ ಸ್ವತಃ ವ್ಯಕ್ತವಾಗುವುದಕ್ಕೆ ಬೇರೆ ಯಾವುದನ್ನೂ ಅವಲಂಬಿಸಿರಬಾರದು.

ಹಾಗೆಯೇ ತನ್ನ ಅಸ್ತಿತ್ವಕ್ಕಾಗಿ ವಿಶ್ವ ಬೇರೊಂದನ್ನು ಅವಲಂಬಿಸಿರುತ್ತದೆ. **ಮಾನಸೋಲ್ಲಾಸ** (IV-3) ಹೀಗೆ ಹೇಳುತ್ತದೆ –

ಪ್ರಾಗೂರ್ಧ್ವಂ ಚಾಸತಾಂ ಸತ್ತ್ವಂ ವರ್ತಮಾನೇಽಪಿ ನ ಸ್ವತಃ ।
ತಸ್ಮಾದೀಶೇ ಸ್ಥಿತಂ ಸತ್ತ್ವಂ ಪ್ರಾಗೂರ್ಧ್ವತ್ವವಿವರ್ಜಿತೇ ॥

ಭೂತ, ಭವಿಷ್ಯತ್ತುಗಳಲ್ಲಿ ಅಸ್ತಿತ್ವದಲ್ಲಿರಲಾರದ್ದು ವರ್ತಮಾನದಲ್ಲಿ ಇರಲಾರದು, ಎಂದು **ಮಾಂಡೂಕ್ಯಕಾರಿಕಾ** (2-6) ತೋರಿಸಿದೆ – 'ಆದಾವನ್ತೇ ಚ ಯನ್ನಾಸ್ತಿ ವರ್ತಮಾನೇಽಪಿ ತತ್ತಥಾ ।'

ಆದ್ದರಿಂದ, ಅದು ಭೂತ, ಭವಿಷ್ಯತ್ತುಗಳನ್ನು ಮೀರಿದ ಈಶ್ವರನಲ್ಲಿ ತನ್ನ ಅಸ್ತಿತ್ವವನ್ನು ಪಡೆದಿದೆ.

ಈ ಶ್ಲೋಕದ ಮೇಲಿನ ಟೀಕೆ ಹೀಗಿದೆ -

ಇಲ್ಲಿ ಪರಾಮರ್ಶಿಸಲಾದ ಬಾಹ್ಯ ವಸ್ತುಗಳಿಗೆ ತಮ್ಮದೇ ಆದ ಅಸ್ತಿತ್ವವಿಲ್ಲ, ಯಾಕೆಂದರೆ, ಸಿಂಪೊಂದರಲ್ಲಿ ಬೆಳ್ಳಿ ಕಂಡಂತೆ ಅವು ಕ್ಷಣಿಕವಾಗಿ ಗೃಹಿಸಲ್ಪಡುತ್ತವೆ. ಅವು ತಮ್ಮಷ್ಟಕ್ಕೆ ತಾವೇ ಅಸ್ತಿತ್ವದಲ್ಲಿದ್ದರೆ ಆತ್ಮದಂತೆ ತಾವಾಗಿಯೇ ವ್ಯಕ್ತಗೊಳ್ಳಬಹುದಿತ್ತು, ಯಾವನೊಬ್ಬ ವ್ಯಕ್ತಿಯ ಗೃಹಿಕೆಯ ವಸ್ತುಗಳಾಗುತ್ತಿರಲಿಲ್ಲ. ಆದರೆ, ಅವು ವ್ಯಕ್ತಿಯ ಗೃಹಿಕೆಯ ವಸ್ತುಗಳಾಗಿರುವುದು ಯಾವಾಗಲೂ ಅನುಭವಕ್ಕೆ ಬರುತ್ತದೆ. ಇನ್ನೊಂದು ರೀತಿಯಿಂದ ನೋಡಿದರೆ - ಎಲ್ಲಿಂದ ಎಲ್ಲವೂ ಹುಟ್ಟುತ್ತದೆಯೋ ಮತ್ತು ಎಲ್ಲಿ ಎಲ್ಲವೂ ಅಂತವಾಗುತ್ತವೆಯೋ ಆ ಅಸ್ತಿತ್ವವಾದ ಪ್ರತ್ಯಗಾತ್ಮನೇ ಎಲ್ಲವುಗಳ, ಎಲ್ಲ ಅವಸ್ಥೆಗಳ ಸಾಕ್ಷಿಯಾಗಿರುವುದರಿಂದ ಈಶ್ವರನ 'ಸತ್' ಹಾಗೂ 'ಸ್ಫುರಣ', ನಿತ್ಯ ಹಾಗೂ ನಿರಂತರವಾಗಿರಬೇಕು ; ಎಂದರೆ, ಈಶ್ವರನ 'ಸತ್' ಹಾಗೂ 'ಸ್ಫುರಣ'ವಿಲ್ಲದ ಕಾಲವಿರಲಿಲ್ಲ, ಮುಂದೆಯೂ ಇರುವುದಿಲ್ಲ. ಹೀಗೆ 'ಮಡಕೆ ಇದೆ', 'ಮಡಕೆ ತೋರಿಬರುತ್ತದೆ' ಇವುಗಳನ್ನಷ್ಟೇ ಅಲ್ಲದೆ, ಸಾಕ್ಷಿ-ಆತ್ಮದ ಅನುಭವಗಳಾದ 'ನನಗೆ ಮಡಿಕೆಯ ಅರಿವಿದೆ', ಇಂಥವುಗಳನ್ನು ಪರಾಮರ್ಶಿಸುವುದು ಒಂದು ವಸ್ತುವಿನ ಅನುಭವವನ್ನು ಒಬ್ಬ ವ್ಯಕ್ತಿಯ ಒಂದು ವಿಶಿಷ್ಟಜ್ಞಾನಕ್ಕೆ

ವಿಷಯವೆಂದು ಪರಿಗಣಿಸುವಿಕೆಯ ದೃಷ್ಟಿಯಿಂದ ಅತೀವ ಮಹತ್ತ್ವದ್ದಾಗಿದೆ ; ಇದಕ್ಕೆ ಬೇರೆ ದಾರಿಯಿಲ್ಲ. ಜಗತ್ತಿನ ವಸ್ತುಗಳಿಗೆ ಸ್ವಂತದ ಅಸ್ತಿತ್ವ ಹಾಗೂ ಪ್ರಕಾಶಗಳಿವೆಯೆಂದು ವಾದಿಸುವ ವಿರೋಧಿಯು ಈ ಅನುಭವಜ್ಞಾನವನ್ನು ಹಾಗೂ ವಸ್ತುಗಳ ಕ್ಷಣಿಕತ್ವವನ್ನು ಸಕಾರಣವಾಗಿ ವಿವರಿಸಲಾರ, ಹಾಗೂ ವಸ್ತುಗಳು ಯಾವಾಗಲೂ ತಮ್ಮಷ್ಟಕ್ಕೆ ತಾವೇ ಪ್ರಕಾಶಿಸುತ್ತಿದ್ದರೆ ಇಂದ್ರಿಯಗಳಂಥ ಜ್ಞಾನಸಾಧನಗಳ ಆವಶ್ಯಕತೆ ಯಾಕೆ ಎನ್ನುವುದನ್ನೂ ತಿಳಿಸಲಾರ. ಹೀಗಾಗಿ, ಜಗತ್ತಿನಲ್ಲಿರುವ ವಸ್ತುಗಳಿಗೆ ತಮ್ಮದೇ ಅಸ್ತಿತ್ವ, ಪ್ರಕಾಶಗಳಿಲ್ಲ, ಅವುಗಳ ಅಸ್ತಿತ್ವ, ಪ್ರಕಾಶಗಳೆರಡೂ ಆತ್ಮನಿಂದಲೇ ದೊರಕುತ್ತವೆ. **ತತ್ತ್ವಸುಧಾ** ಹೇಳುವ ಹಾಗೆ -

ಆತ್ಮವಜ್ಜಗತಃ ಸ್ವತಸ್ಸತ್ತ್ವೇ ತದ್ವದೇವೋತ್ಪತ್ತಿವಿನಾಶಾನುಪಪತ್ತೇಃ, ತದ್ವದೇವ ಕರಣಾದ್ಯನಪೇಕ್ಷಯಾ ಸರ್ವದಾ ಭಾನಪ್ರಸಙ್ಗಾಚ್ಚ, ನ ಸ್ವತಸ್ಸತ್ತಾಪ್ರಕಾಶೌ ಭವತೋ ಜಗತಃ ಕಿನ್ತು ಆತ್ಮಸತ್ತಾಪ್ರಕಾಶಾಭ್ಯಾಮೇವ ಜಗತೋಽಪಿ ಸತ್ತಾಪ್ರಕಾಶೌ ।

## 7.1.5 ವಿರೋಧಿಗಳ ದೃಷ್ಟಿ - ಅವಾಂಛನೀಯ ಪರಿಣಾಮಗಳು , ಅವುಗಳ ನಿರಾಕರಣೆ

ಸ್ತೋತ್ರದ ಬೆಳಕಿನಲ್ಲಿ **ತತ್ತ್ವಸುಧಾ** ವಿರೋಧಿಗಳ ದೃಷ್ಟಿಗಳ ಕೆಲವೊಂದು ಅವಾಂಛನೀಯ ಪರಿಣಾಮಗಳನ್ನು ಎತ್ತಿ ತೋರಿಸಿ ಅವುಗಳನ್ನು ನಿರಾಕರಿಸುತ್ತದೆ.

ಕೇಚಿತ್ತು ಅಚಿದ್ರೂಪಾತ್ಮನಿಷ್ಠಜ್ಞಾನೇನ ಘಟಾದಿವಿಷಯೋ ಭಾಸತ ಇತಿ ವದನ್ತಿ । ತನ್ನ । ಆತ್ಮನಿಷ್ಠಜ್ಞಾನಸ್ಯ ಜಡಸ್ಯ ಸ್ವಪ್ರಕಾಶಸ್ಯ ವಾ ಘಟಾದಿವಿಷಯೇಣ ಸಂಯೋಗಾದಿಸಂಬನ್ಧಾಭಾವಾತ್ ಸ್ವರೂಪಸಂಬನ್ಧಸ್ಯ ಚ ಅತಿಪ್ರಸಕ್ತತ್ವಾತ್ ।

ಕೇಚಿತ್ತು ವಿಷಯನಿಷ್ಠಸ್ಫುರಣೇನ ಘಟಾದಿಭಾನಮಿತಿ ಕಥಯನ್ತಿ । ತದಪಿ ನ । ವಿಷಯನಿಷ್ಠಸ್ಯ ಆತ್ಮನಾ ಸಹ ಸಂಬನ್ಧಾಭಾವೇನ ಅಹಂ ಜಾನಾಮೀತಿ ಸಂಬನ್ಧಪ್ರತ್ಯಯಾನುಪಪತ್ತೇಃ । ತಸ್ಮಾದಸ್ಮದುಕ್ತಪ್ರಕಾರೇಣ ಸ್ವಪ್ರಕಾಶಸಾಕ್ಷಿಚೈತನ್ಯಸಂಬನ್ಧಾದೇವ ಘಟಾದಿವಿಷಯಭಾನಮಿತಿ ।

[ಕೆಲವರು, ಘಟ ಇತ್ಯಾದಿ ವಸ್ತುಗಳು ಜಡ ಸ್ವಭಾವವುಳ್ಳ ಆತ್ಮದಲ್ಲಿರುವ ಜ್ಞಾನಪ್ರಭೆಯಿಂದ ಸ್ಫುರಿಸುತ್ತವೆ ಎಂದು ಆಗ್ರಹಿಸುತ್ತಾರೆ. ಆದರೆ ಅದು ಹಾಗಾಗದು, ಯಾಕೆಂದರೆ, ಜಡವಾಗಲಿ, ಸ್ವಪ್ರಕಾಶವಾಗಲಿ, ಆತ್ಮದಲ್ಲಿರುವ ಜ್ಞಾನವು ಘಟ ಇತ್ಯಾದಿಗಳ ಜೊತೆಗೆ ಸ್ಪರ್ಶ ಇತ್ಯಾದಿಗಳ ಮೂಲಕ ಸಂಬಂಧ ಹೊಂದಿಲ್ಲ, ಮತ್ತು ಸ್ವರೂಪಸಂಬಂಧವು ಇಲ್ಲಿ ಅಸಂಗತ.

ಮತ್ತೂ ಕೆಲವರು ಘಟಾದಿ ವಸ್ತುಗಳ ಸ್ಫುರಣ ಅವುಗಳಲ್ಲಿಯೇ ಇರುವ ಸ್ಫುರಣಶಕ್ತಿಯಿಂದ ಆಗುತ್ತದೆ ಎನ್ನುತ್ತಾರೆ. ಇದೂ ಅಸಾಧ್ಯ, ಯಾಕೆಂದರೆ ವಸ್ತುಗಳಲ್ಲಿರುವ ಚೈತನ್ಯ ಆತ್ಮಕ್ಕೆ ಸಂಬಂಧಿ-ಸಿಲ್ಲವಾದ್ದರಿಂದ 'ನಾನು (ವಸ್ತುವನ್ನು) ತಿಳಿದಿದ್ದೇನೆ' ಎಂಬ ಜ್ಞಾನವನ್ನು ಸಮರ್ಥಿಸುವುದು ಆಗದು. ಆದ್ದರಿಂದ, ಘಟ ಇತ್ಯಾದಿ ವಸ್ತುಗಳ ಸ್ಫುರಣವು ಈಗಾಗಲೇ ತೋರಿಸಿದ ಹಾಗೆ ಸ್ವಪ್ರಕಾಶ ಸಾಕ್ಷಿಚೈತನ್ಯದ ಜೊತೆಗೆ ಅವುಗಳ ಸಂಬಂಧದಿಂದ ಸಾಧ್ಯ.]

**ಮಾನಸೋಲ್ಲಾಸ**ವು ವಿರೋಧಿಗಳ ದೃಷ್ಟಿಗಳ ಇನ್ನು ಕೆಲವು ಅವಾಂಛನೀಯ ಪರಿಣಾಮಗಳನ್ನು ತೋರಿಸುತ್ತದೆ -

ಸ್ವಯಮೇವ ಪ್ರಕಾಶೇರನ್ ಜಡಾ ಯದಿ ವಿನೇಶ್ವರಮ್ ।
ಸರ್ವಂ ಸರ್ವಸ್ಯ ಭಾಸೇತ ನ ವಾ ಭಾಸೇತ ಕಿಞ್ಚನ ॥

(IV-4)

ತಸ್ಮಾತ್ಸರ್ವಜ್ಞಮಜ್ಞಂ ವಾ ಜಗತ್ ಸ್ಯಾದೇಕರೂಪಕಮ್ ।
ತುಲ್ಯೇ ಸ್ವಯಂಪ್ರಕಾಶತ್ವೇ ಜಡಚೇತನಯೋರ್ಮಿಥಃ ॥

(IV-5)

ತುಲ್ಯಮೇವ ಪ್ರಸಜ್ಯೇರನ್ ಗ್ರಾಹ್ಯಗ್ರಾಹಕತಾದಯಃ ।
ಇನ್ದ್ರಿಯಾಣಾಮನಿಯಮಾಚ್ಚಾಕ್ಷುಷಾಃ ಸ್ಯೂ ರಸಾದಯಃ ॥

(IV-6)

[ಜಡವಸ್ತುಗಳು ಸಚೇತನ ಆತ್ಮವಾದ ಈಶ್ವರನಿಂದ ಸ್ವತಂತ್ರವಾಗಿ ಪ್ರಕಾಶಿಸುವುದಾದಲ್ಲಿ, ಅವುಗಳ ಪ್ರಕಾಶ ನಿರಂತರವಾಗಿರಬೇಕಾಗುತ್ತದೆ ಹಾಗೂ ಜ್ಞಾನದ ವಿಷಯವಾಗಿ ಎಲ್ಲರಿಗೂ ಒಂದೇ ರೀತಿ ಕಾಣಿಸಿಕೊಳ್ಳಬೇಕಾಗುತ್ತದೆ. ಆದರೆ ಜ್ಞಾನಗ್ರಾಹ್ಯವಾಗುವುದು ಅವುಗಳ ಸ್ವರೂಪವಾಗಿರದೆ ಹೋದರೆ ಯಾವ ವ್ಯಕ್ತಿಯೂ ಯಾವ ವಸ್ತುವಿನ ಜ್ಞಾನವನ್ನೂ ಪಡೆಯಲಾರ.

ಆದ್ದರಿಂದ ಜಗತ್ತಿನಲ್ಲಿ ಎಲ್ಲರೂ ಏಕರೂಪವಾಗಿ ಸರ್ವಜ್ಞರೋ, ಅಜ್ಞರೋ ಆಗುತ್ತಾರೆ.

ಚೇತನ, ಅಚೇತನಗಳೆರಡೂ ಒಂದೇ ರೀತಿ ಸ್ವಪ್ರಕಾಶ ಹೊಂದಿರುವವುಗಳಾದರೆ ಎರಡೂ ಒಂದನ್ನೊಂದು ಗ್ರಹಿಸುತ್ತವೆ ಹಾಗೂ ಒಂದಕ್ಕೊಂದು ಗ್ರಾಹ್ಯವಾಗುತ್ತವೆ ; ಹಾಗೂ ಜ್ಞಾನೇಂದ್ರಿಯಗಳು ಅನಿಯಮಿತ ಗ್ರಹಣಶಕ್ತಿಯುಳ್ಳವಾಗಿ ರುಚಿಯನ್ನು ಕಣ್ಣು ಗ್ರಹಿಸಬಹುದು ಇತ್ಯಾದಿ. ಹೀಗಾಗಿ, 'ಬಾಹ್ಯ ವಸ್ತುಗಳಿಗೆ ತಮ್ಮದೇ ಆದ ಪ್ರಕಾಶ ಹಾಗೂ ಅಸ್ತಿತ್ವವಿರುತ್ತವೆ' ಎಂಬ ವಾದವು 'ಜ್ಞಾತಾ, ಜ್ಞೇಯಗಳು ಬೇರೆ ಬೇರೆ' ಎನ್ನುವ ನಮ್ಮ ನಿರ್ವಿವಾದ ನಿಲುವಿಗೆ ಹಾಗೂ ಬಾಹ್ಯವಸ್ತುಗಳೆಲ್ಲವೂ ಹೆಚ್ಚು ಕಡಿಮೆ ಅಶಾಶ್ವತವಾದವುಗಳು ಎಂಬ ವಿಚಾರಕ್ಕೂ ವಿರುದ್ಧವಾಗಿದೆ.]

### 7.1.6 ಜ್ಞಾನಕ್ರಿಯೆಗಳಲ್ಲಿ ತ್ರಿಪುಟಿಯ ಸಹಭಾಗಿತ್ವ; ವಿರೋಧಿಗಳ ಅಭಿಪ್ರಾಯಗಳ ವಿಸ್ತರಣ

ವ್ಯಾವಹಾರಿಕ ಜ್ಞಾನ, ಎಲ್ಲರಿಗೂ ತಿಳಿದಿರುವಂತೆ, ಪ್ರಮಾತೃ (ಜ್ಞಾತಾ) ಮತ್ತು ಜ್ಞಾತವಸ್ತುಗಳಷ್ಟೇ ಅಲ್ಲದೆ ಜ್ಞಾನಕ್ರಿಯೆಯನ್ನೊಳ-ಗೊಂಡ ತ್ರಿಪುಟಿಯಾಗಿರುತ್ತದೆ. **ವಿವರಣಪ್ರಮೇಯಸಂಗ್ರಹ**ವು (1-1) ವೇದಾಂತವೂ ಸೇರಿದಂತೆ ಯಾವ ಪ್ರಕ್ರಿಯೆಯಲ್ಲಿಯೂ ಇದನ್ನು ಸಕಾರಣವಾಗಿ ಸಮರ್ಥಿಸಿಲ್ಲ ಎಂದು ವಾದಿಸುತ್ತದೆ, ಹಾಗೂ ತನ್ನ ವಾದವನ್ನು ಸಮರ್ಥಿಸಿಕೊಳ್ಳಲು ಕೆಲವು ಉದಾಹರಣೆಗಳನ್ನು ಕೊಟ್ಟಿದೆ -

ಪ್ರಮಾತೃಪ್ರಮಾಣಾದಿವ್ಯವಹಾರಸ್ಯ ಸರ್ವೇಣಾಪಿ ವಾದಿನಾ ದುರುಪಪಾದತ್ವಾತ್ । ತಥಾಹಿ – ವೇದಾನ್ತಿಸಾಙ್ಖ್ಯಯೋರ್ಮತೇ ಕಿಮಹಙ್ಕಾರಃ ಪ್ರಮಾತಾ ಉತಾತ್ಮಾ ? ನಾದ್ಯಃ, ತಸ್ಯ ಜಡತ್ವಾತ್ । ದ್ವಿತೀಯೇಽಪಿ ಪ್ರಮಾಣಾಖ್ಯಕ್ರಿಯಾರೂಪೇಣ ಪರಿಣಾಮಿತ್ವಂ ಪ್ರಮಾತೃತ್ವಮ್, ತಚ್ಚಾವಿಕಾರಿಣ್ಯಾತ್ಮನಿ ದುಃಸಮ್ಪಾದಮ್ । ಅನ್ತರೇಣೈವ ಪ್ರಮಾತೃತ್ವಂ ಚೈತನ್ಯೇನ ವಿಷಯಪ್ರಕಾಶೇ ತಸ್ಯ ಸರ್ವಗತತ್ವೇನ ಸರ್ವಂ ಯುಗಪತ್ ಪ್ರಕಾಶೇತೇತಿ ಪ್ರತಿಕರ್ಮವ್ಯವಸ್ಥಾ ನ ಸಿದ್ಧ್ಯೇತ್ ।

ತಾರ್ಕಿಕಾದಿಮತೇಽಪಿ ಕಿಂ ಸರ್ವಗತಾತ್ಮನ್ಯುತ್ಪದ್ಯಮಾನಂ ಜ್ಞಾನಂ ಯಾವದಾತ್ಮಸಮವಾಯಿ ? ಉತ

ಶರೀರಾವಚ್ಛಿನ್ನಾತ್ಮಪ್ರದೇಶಸಮವಾಯಿ ? ನಾದ್ಯಃ, ನಿಯಾಮಕಾಭಾವೇನ ಯುಗಪತ್ ಸರ್ವಾವಭಾಸಪ್ರಸಙ್ಗಾತ್ । ಧರ್ಮಾಧರ್ಮೌ ನಿಯಾಮಕಾವಿತಿ ಚೇತ್, ನ । ತಯೋಃ ಸುಖದುಃಖಜನಕವಿಷಯೇಷು ತಥಾತ್ವೇಽಪಿ ಉಪೇಕ್ಷಣೀಯತೃಣಾದಿಸರ್ವವಸ್ತುಷ್ವನಿಯಾಮಕತ್ವಾತ್ । ಯಸ್ಯ ಜ್ಞಾನಸ್ಯ ಯಜ್ಜನಕಂ ತತ್ತೇನ ಪ್ರಕಾಶ್ಯಮಿತಿ ನಿಯಮ ಇತಿ ಚೇತ್, ನ । ಚಕ್ಷುರಾದೇರಪಿ ಚಕ್ಷುರ್ಜನ್ಯಜ್ಞಾನವೇದ್ಯತ್ವಪ್ರಸಙ್ಗಾತ್ । ವಿಷಯತ್ವೇ ಸತಿ ಯಸ್ಯ ಜನಕಂ ವೇದ್ಯಮಿತಿ ಚೇತ್ ; ನ । ವಿಷಯತ್ವಸ್ಯಾದ್ಯಾಪ್ಯನಿರೂಪಣಾತ್ , ಲೋಕಪ್ರಸಿದ್ಧ್ಯಾ ತನ್ನಿರೂಪಣೇಽಪಿ ಜ್ಞಾನಸ್ಯ ಗುಣತ್ವೇ ಕ್ರಿಯಾತ್ವೇ ವಾ ನ ಸ್ವಜನಕವಿಷಯಗ್ರಾಹಿತ್ವಾನಿಯಮಸಿದ್ಧಿಃ । ಪ್ರದೀಪಗುಣಸ್ಯ ಪ್ರಕಾಶಸ್ಯಾಜನಕೇಽಪಿ ಘಟೇ ಪ್ರಕಾಶಕತ್ವದರ್ಶನಾತ್ । ಬಾಣಾದಿಕ್ರಿಯಾಣಾಂ ಚಾನುದ್ದಿಷ್ಟೇಽಪಿ ವಸ್ತುನಿ ಸ್ವಾಶ್ರಯಸಂಯುಕ್ತೇಽತಿಶಯಹೇತುತ್ವದರ್ಶನಾತ್ ।

ಅಥ ಜ್ಞಾನಾಶ್ರಯಸ್ಯಾತ್ಮನೋಽಪಿ ನಿರವಯವತ್ವಾನ್ನ ಸರ್ವಸಂಯೋಗ ಇತಿ ನಾಸ್ತಿ ಯುಗಪತ್ ಸರ್ವಾವಭಾಸಪ್ರಸಙ್ಗಃ ? ತರ್ಹಿ ನ ಕಿಞ್ಚಿದಪಿ ಪ್ರಕಾಶೇತ, ಕ್ರಿಯಾರೂಪಸ್ಯ ವಾ ಜ್ಞಾನಸ್ಯ ಸ್ವಾಶ್ರಯಮತಿಲಙ್ಘ್ಯಾನ್ಯತ್ರ ಸಂಸರ್ಗಾಯೋಗಾತ್ । ಅಸಂಸೃಷ್ಟಗ್ರಾಹಿತ್ವೇ ಚಾತಿಪ್ರಸಙ್ಗಾತ್ ।

ಶರೀರಾವಚ್ಛಿನ್ನಾತ್ಮಪ್ರದೇಶಸಮವಾಯಿ ಜ್ಞಾನಮಿತ್ಯಸ್ಮಿನ್ ಪಕ್ಷೇಽಪಿ ಪ್ರದೇಶಸ್ಯ ಸ್ವಾಭಾವಿಕತ್ವೇ ಸಾವಯವತ್ವಮಾತ್ಮನಃ ಪ್ರಸಜ್ಯೇತ । ಔಪಾಧಿಕತ್ವೇಽಪಿ ಜ್ಞಾನಂ ತತ್ಪ್ರದೇಶಸಂಯುಕ್ತಗ್ರಾಹಿ ಚೇತ್, ತದಾ ದೇಹಾದ್ಬಾಹ್ಯೇ ಘಟಾದಿರ್ನ ಭಾಸೇತ, ಬಾಹ್ಯಾತ್ಮಪ್ರದೇಶಸಂಯುಕ್ತಗ್ರಾಹಿತ್ವೇ ಬಾಹ್ಯಂ ಸರ್ವಮಪ್ಯವಭಾಸೇತ ।

ನನು ಸಂಬನ್ಧರಹಿತೇಽಪಿ ವಸ್ತುನಿ ವ್ಯವಸ್ಥಯೈವ ಜ್ಞಾನಕ್ರಿಯಾತಿಶಯಂ ಜನಯಿಷ್ಯತಿ । ಯಥಾ ಅಭಿಚಾರಕ್ರಿಯಯಾ ಸಹಸ್ರಯೋಜನವ್ಯವಹಿತೋಽಪ್ಯುದ್ದಿಷ್ಟ ಏವ ಪುರುಷೋ ಮಾರ್ಯತೇ ತದ್ವತ್ । ತನ್ನ, ತತ್ರಾಪಿ ಹನ್ತೃಹನ್ಯಮಾನಪುರುಷದ್ವಯಸಂಯುಕ್ತಸ್ಯ ದೇವತಾತ್ಮನ ಈಶ್ವರಸ್ಯ ವಾ ಕೃತ್ಯಾದೇರ್ವಾ ನಿಯಾಮಕಸ್ಯಾನುಮೇಯತ್ವಾತ್ ।

ವಿಮತಮಭಿಚಾರಕರ್ಮ ಸ್ವಸಂಬನ್ಧಿನ್ಯತಿಶಯಜನಕಮ್, ಕ್ರಿಯಾತ್ವಾತ್ ಬಾಣಾದಿಕ್ರಿಯಾವತ್ ।

ತರ್ಹ್ಯೇವಮಸ್ತು ಜ್ಞಾನಾಧಾರೇಣಾತ್ಮನಾ ಮನಃ ಸಂಯುಜ್ಯತೇ, ಮನಸಾ ಚೇನ್ದ್ರಿಯಮ್, ತೇನ ಚ ವಿಷಯಃ, ಸಾ ಚೇಯಂ ಸಂಯೋಗಪರಮ್ಪರಾ ನಿಯಾಮಿಕೇತಿ । ತದಪ್ಯಸತ್, ತಸ್ಯಾಃ ಪರಂಪರಾಯಾ ಜ್ಞಾನಾತ್ಪೂರ್ವಂ ಜ್ಞಾನೋತ್ಪಾದನ ಏವೋಪಕ್ಷ-ಯಾತ್ । ಜ್ಞಾನಾದುಪರ್ಯಪಿ ಸಂಯೋಗಪರಂಪರಯಾ ವಿಷಯಾವಭಾಸೇ ವಿಷಯಸಂಯುಕ್ತತತ್ಸಂಯುಕ್ತಾದಿರೂಪೇ-ಣಾವಸ್ಥಿತಂ ಸರ್ವಂ ಜಗದವಭಾಸೇತ । ಏವಮಣುಪರಿಮಾಣ ದೇಹಪರಿಮಾಣಾತ್ಮಪಕ್ಷಯೋರಪಿ ದೋಷಾ ಊಹನೀಯಾಃ । ತಸ್ಮಾನ್ನ ಸರ್ವವಾದಿನಾಂ ಪ್ರಮಾಣಾದಿವ್ಯವಹಾರಸಂಭವಃ ।

[ವೇದಾಂತ ಮತ್ತು ಸಾಂಖ್ಯ ವ್ಯವಸ್ಥೆಗಳಲ್ಲಿ ಪ್ರಮಾತೃ ಯಾರು ? ಅಹಂಕಾರವೇ, ಆತ್ಮವೇ ? ಅಹಂಕಾರವು ಅಚೇತನವಾದುದರಿಂದ ಅದು ಪ್ರಮಾತೃವಾಗಲಾರದು. ಪ್ರಮಾತೃತ್ವವು ಆತ್ಮನದು ಎಂದೂ ಹೇಳಲಾಗದು. ಪ್ರಮಾಣ ಎಂಬ ಕ್ರಿಯೆಯಲ್ಲಿ ಪ್ರಮಾತೃ ಪರಿಣಾಮ ಹೊಂದುತ್ತಾನೆ. ಆದರೆ ಅವಿಕಾರಿಯಾದ ಆತ್ಮದಲ್ಲಿ ಪರಿಣಾಮವನ್ನು ಕಾಣಲಾರೆವು. ಪ್ರಮಾತೃವಾಗದಿದ್ದರೂ ಕೂಡ ಸಚೇತನನಾದ ಹಾಗೂ ಸ್ವಯಂಪ್ರಕಾಶನಾದ ಆತ್ಮವು ವಸ್ತುಗಳನ್ನು ಪ್ರಕಾಶಿಸಬಲ್ಲದು ಎಂದು ವಾದಿಸಿದರೆ, ಆಗ ಆತ್ಮದ ಸರ್ವವ್ಯಾಪಿತ್ವದಿಂದಾಗಿ, ಎಲ್ಲ ವಸ್ತುಗಳೂ ಏಕಕಾಲಕ್ಕೆ ಪ್ರಕಾಶಿತವಾಗುವ ಪ್ರಸಂಗ ಉಂಟಾಗುತ್ತದೆ. ಇದರಿಂದಾಗಿ ಪ್ರತಿಕರ್ಮವ್ಯವಸ್ಥೆ ಅರ್ಥಹೀನವಾಗುತ್ತದೆ.

ಇದೇ ಪ್ರಕಾರ ತಾರ್ಕಿಕರ ಪ್ರಕ್ರಿಯೆಯಲ್ಲಿ ಸರ್ವಶಕ್ತವಾದ ಆತ್ಮದಲ್ಲಿ ಹುಟ್ಟುವ ಜ್ಞಾನವು ಸರ್ವವ್ಯಾಪಿಯಾದ ಇಡಿಯ ಆತ್ಮವನ್ನು ಒಳಗೊಳ್ಳುತ್ತದೆಯೋ ಅಥವಾ ದೇಹದಿಂದ ಅವಚ್ಛಿನ್ನವಾದ ಭಾಗವನ್ನು ಮಾತ್ರವೋ ? ಮೊದಲನೆಯದು ಸ್ವೀಕಾರಾರ್ಹವಾಗಲಾರದು ಯಾಕೆಂದರೆ, ಆಗ ನಿಯಂತ್ರಕನ ಅಭಾವದಲ್ಲಿ ಎಲ್ಲ ವಸ್ತುಗಳೂ ಒಮ್ಮೆಲೆ ವ್ಯಕ್ತವಾಗುವ ಪ್ರಸಂಗ ಉಂಟಾಗುತ್ತದೆ. ಧರ್ಮ ಹಾಗೂ ಅಧರ್ಮಗಳಂಥ ನಿಯಂತ್ರಕಗಳಿವೆಯಲ್ಲ ಎಂದರೆ, ಇದು ಕ್ರಮವಾಗಿ ಸುಖ ಹಾಗೂ ದುಃಖಗಳಿಗೆ ಕಾರಣವಾಗುವ ವಸ್ತುಗಳ ವಿಷಯದಲ್ಲಿ

ನಿಜವಿರಬಹುದು. ಆದರೆ ಇಂಥವುಗಳನ್ನು ಸ್ಪಷ್ಟಿಸದ ವಸ್ತುಗಳ ವಿಷಯದಲ್ಲಿ ಹಾಗೂ ಹುಲ್ಲು ಮುಂತಾದ ಉಪೇಕ್ಷಿತ ವಸ್ತುಗಳ ವಿಷಯದಲ್ಲಿ ಇವುಗಳ ಪ್ರಯೋಜನವಿಲ್ಲ. ವಿಷಯಜ್ಞಾನವು ತನ್ನ ಜನಕವನ್ನು ತಾನೇ ಪ್ರಕಾಶಿಸಬೇಕು ಎಂಬ ನಿಯಮವಿಲ್ಲ. ಒಂದು ವೇಳೆ ಹಾಗಿದ್ದಿದ್ದರೆ ಚಕ್ಷುವಿನಿಂದ ಬರುವ ಜ್ಞಾನವೇ ಕಣ್ಣುಗಳನ್ನು ವ್ಯಕ್ತಪಡಿಸಬೇಕಾಗುತ್ತಿತ್ತು. ಅರಿವಿನ ವಿಷಯವಾದುದರಿಂದ ಕಣ್ಣು, ಅದರಿಂದ ಉತ್ಪನ್ನವಾಗುವ ಜ್ಞಾನದಿಂದ ವ್ಯಕ್ತವಾಗುತ್ತದೆ ಎಂದು ಹೇಳಿದರೂ 'ವಿಷಯ'ತ್ವದ ಪ್ರಶ್ನೆ ಹಾಗೆಯೇ ಉಳಿಯುತ್ತದೆ. ವ್ಯವಹಾರದಲ್ಲಿ ಇದು ಹೀಗೆ ಇದೆ ಎಂದು ಹೇಳಿದರೂ ಜ್ಞಾನವನ್ನು ಒಂದರ ಗುಣ ಅಥವಾ ಕ್ರಿಯೆಯೆಂದು ಭಾವಿಸಿದರೂ, ಅದು ತನ್ನ ಜನಕವಸ್ತುವನ್ನೂ ಗ್ರಹಿಸುತ್ತದೆ ಎಂಬ ಸಾಮಾನ್ಯೀಕೃತ ಹೇಳಿಕೆ ಸಾಧ್ಯವಿಲ್ಲ. ಯಾಕೆಂದರೆ ದೀಪದ ಗುಣವಾದ ಪ್ರಕಾಶಕತೆ ತನ್ನ ಜನಕವಲ್ಲದ ಮಡಿಕೆಯನ್ನು ಪ್ರಕಾಶಿಸುತ್ತದೆ. ಹಾಗೆಯೇ, ಬಾಣದ ಕ್ರಿಯೆಗಳನ್ನು ಗಮನಿಸಿದರೆ, ತಾನು ಸಂಪರ್ಕಕ್ಕೆ ಬಂದ ವಸ್ತುವಿನಲ್ಲಿ ತನ್ನಲ್ಲಿಯ ಶಕ್ತಿಯಿಂದಾಗಿ ಸೀಳುವುದು ಇತ್ಯಾದಿ ಮಹತ್ತ್ವದ ಪರಿವರ್ತನೆಗಳಿಗೆ ಕಾರಣವಾಗುವುದನ್ನು ಕಾಣಬಹುದು.

ಅರಿವಿನ ನೆಲೆಯಾದ ಆತ್ಮವು ಭಾಗಗಳಿಲ್ಲದ್ದಾದುರಿಂದ ಅದಕ್ಕೆ ಎಲ್ಲ ವಸ್ತುಗಳೊಡನೆ ಸಂಪರ್ಕವಿರುವುದಿಲ್ಲ, ಆದುದರಿಂದ ಎಲ್ಲ ವಸ್ತುಗಳೂ ಒಮ್ಮೆಲೆ ವ್ಯಕ್ತವಾಗಲಾರವು - ಎಂದು ವಾದಿಸಬಹುದು. ಆಗ ಯಾವ ವಸ್ತುವೂ ವ್ಯಕ್ತವಾಗದ ಪ್ರಸಂಗ ಬರಬಹುದು, ಯಾಕೆಂದರೆ ಅರಿವು, ಗುಣವೇ ಆಗಿರಲಿ, ಕ್ರಿಯೆಯೇ ಆಗಿರಲಿ, ತನ್ನ ನೆಲೆಯೊಡನೆ ಸಂಬಂಧವಿರದ ಯಾವ ವಸ್ತುವಿನೊಡನೆಯೂ ಸಂಬಂಧ ಹೊಂದಲಾರದು. ಒಂದು ವೇಳೆ ಅರಿವು ತನ್ನ ನೆಲೆಯೊಡನೆ (ಆತ್ಮದೊಡನೆ) ಯಾವ ಸಂಬಂಧವಿಲ್ಲದ ವಸ್ತುವನ್ನೂ ಪ್ರಕಾಶಿಸಬಲ್ಲುದು ಎಂದು ವಾದಿಸಿದರೆ, ಅದು ಅತಿಪ್ರಸಂಗವೆನಿಸೀತು.

ಅರಿವು ಆತ್ಮದಲ್ಲೆಲ್ಲ ವ್ಯಾಪಿಸಿದೆ ಎಂಬ ಅಭಿಪ್ರಾಯದಲ್ಲಿಯ ದೋಷಗಳನ್ನು ನಿವಾರಿಸಿಕೊಳ್ಳುವ ಉದ್ದೇಶದಿಂದ ಜ್ಞಾನವು ಶರೀರದಿಂದ ಅವಚ್ಛಿನ್ನವಾದ ಪ್ರದೇಶದಲ್ಲಿ ಮಾತ್ರ ಇರುತ್ತದೆ ಎಂದು ವಾದಿಸಿದರೆ, ಆಗಲೂ ಕೂಡ ಈ ಪ್ರದೇಶವು ಆತ್ಮದ ಸ್ವರೂಪದಲ್ಲಿ ಇರುವಂತಾದರೆ ಭಾಗಗಳಿರುವ ಸಾಧ್ಯತೆಯನ್ನು ಸೂಚಿಸುತ್ತದೆ. ಈ

ಭಾಗವು ಉಪಾಧಿಗಳಿಗೆ ಸಂಬಂಧಿಸಿದ್ದಾದರೆ ಹಾಗೂ ತನ್ನ ಸಂಪರ್ಕದಲ್ಲಿರುವ ವಸ್ತುಗಳನ್ನು ಮಾತ್ರ ಗ್ರಹಿಸುತ್ತದೆ ಎಂದಾದರೆ ದೇಹಕ್ಕೆ ಸಂಪರ್ಕದಲ್ಲಿರುವ ಬಾಹ್ಯ ವಸ್ತುಗಳ ಗ್ರಹಿಕೆಗೆ ಅವಕಾಶವೇ ಇರುವುದಿಲ್ಲ. ಜ್ಞಾನವು ದೇಹದ ಆಚೆಗಿರುವ ಆತ್ಮವನ್ನು ಗ್ರಹಿಸುವುದು ಸಾಧ್ಯವಿದ್ದರೆ ಎಲ್ಲ ಹೊರಗಿನ ವಸ್ತುಗಳು ಪ್ರಕಾಶಿತವಾಗುವದನ್ನು ತಡೆಯಲು ಸಾಧ್ಯವಿಲ್ಲ. ಜ್ಞಾನವು ಕ್ರಿಯಾರೂಪದಿಂದ ತನಗೆ ಸಂಬಂಧಿಸಿರದ ವಸ್ತುಗಳಲ್ಲಿಯೂ ಅಸಾಧಾರಣವೊಂದನ್ನು ಉತ್ಪಾದಿಸಬಲ್ಲುದು ಎಂದು ವಾದಿಸಬಹುದು, ಉದಾಹರಣೆಗೆ ಅಭಿಚಾರಕಕ್ರಿಯಾ - ನೂರಾರು ಮೈಲುಗಳಾಚೆಗೆ ಇರುವ ಉದ್ದಿಷ್ಟ ವ್ಯಕ್ತಿಯನ್ನು ಕೊಲ್ಲಬಹುದಾದ ವಾಮಾಚಾರ. ಆದರೆ ಇದು ಹಾಗಲ್ಲ. ಇಲ್ಲಿ ಕೂಡ ಯಾವುದೋ ಒಂದು ದೇವತೆಯನ್ನೋ, ಈಶ್ವರನನ್ನೋ ಅಥವಾ ಅದೃಷ್ಟವನ್ನೋ ಇಲ್ಲವೆ ಪ್ರಾರಬ್ಧಕರ್ಮವನ್ನೋ ಕೊಲ್ಲುವ ಹಾಗೂ ಕೊಲ್ಲಲ್ಪಡುವ ವ್ಯಕ್ತಿಗಳಿಗೆ ಸಂಬಂಧಿಸಿದ ಕ್ರಿಯಾಶಕ್ತಿಯನ್ನಾಗಿ ಊಹಿಸಿಕೊಳ್ಳಬೇಕಾಗುತ್ತದೆ. ಈ ಅಭಿಚಾರಕರ್ಮ ತನ್ನ ಕ್ರಿಯೆಯ ಮೂಲಕ ತನಗೆ ಸಂಬಂಧಿಸಿದ ವಸ್ತುವಿನಲ್ಲಿ ಪರಿಣಾಮಕ್ಕೆ ಕಾರಣವಾಗುತ್ತದೆ, ಬಾಣದ ಕ್ರಿಯೆಯಂತೆಯೇ.

ಈ ಸಮಸ್ಯೆಯನ್ನು ಪರಿಹರಿಸಿಕೊಳ್ಳಲೆಂದು ಹೀಗೆ ವಾದಿಸಬಹುದು - ಮನಸ್ಸು ಜ್ಞಾನದ ಆಧಾರವಾದ ಆತ್ಮದ ಸಂಪರ್ಕದಲ್ಲಿ ಹಾಗೂ ಜ್ಞಾನೇಂದ್ರಿಯಗಳ ಸಂಪರ್ಕದಲ್ಲಿ ಬರುತ್ತದೆ, ಇಂದ್ರಿಯಗಳು ವಿಷಯದ ಸಂಪರ್ಕ ಬೆಳೆಸುತ್ತವೆ - ಹೀಗೆ ಈ ಸಂಪರ್ಕ ಪರಂಪರೆಯೇ ಅರಿವಿನ ನಿಯಾಮಕವಾಗುತ್ತದೆ. ಆದರೆ ಇದೂ ಪರಿಹಾರವಲ್ಲ, ಯಾಕೆಂದರೆ, ಈ ಪರಂಪರೆಯು ಜ್ಞಾನ ಹುಟ್ಟುವುದಕ್ಕೆ ಮೊದಲು ನಡೆಯುವಂಥದು ಹಾಗೂ ನಂತರ ನಿಂತು ಹೋಗುವಂಥದು. ಜ್ಞಾನದ ಉತ್ಪತ್ತಿಯ ನಂತರವೂ ಈ ಪರಂಪರೆ ಮುಂದುವರೆದರೆ, ಆಗ ಜಗತ್ತಿನಲ್ಲಿರುವ ಎಲ್ಲ ವಸ್ತುಗಳೂ ವ್ಯಕ್ತವಾಗುವ ಹಾಗೂ ಅವುಗಳಲ್ಲಿ ಪ್ರತಿಯೊಂದೂ ಸಂಪರ್ಕ ಪರಂಪರೆಯಿಂದ ಆ ವಸ್ತುವಿನ ಸಂಪರ್ಕ ಹೊಂದುವ ಪ್ರಸಂಗ ಬರಬಹುದು. ಹೀಗೆಯೇ, ಆತ್ಮವನ್ನು ಪರಮಾಣುವಿನ ಪರಿಮಾಣದಲ್ಲಿ ಅಥವಾ ದೇಹದ ಪರಿಮಾಣದಲ್ಲಿ ಭಾವಿಸುವ ಪ್ರಕ್ರಿಯೆಗಳೂ ಕೂಡ ಈ ಪ್ರಕ್ರಿಯೆಗಳಿಗಿಂತ ಹೆಚ್ಚಿನ ಪ್ರಗತಿ ಸಾಧಿಸಿಲ್ಲ ಎನ್ನುವುದು ಸ್ಪಷ್ಟವಾಗಿ

ಕಾಣುತ್ತದೆ. ಈ ಯಾವ ಪ್ರಕ್ರಿಯೆಗಳಲ್ಲಿಯೂ **ಪ್ರತಿಕರ್ಮವ್ಯವಸ್ಥೆ**ಯ ಬಗ್ಗೆ ಸಮಾಧಾನಕರವಾದ ವಿವರಣೆಗಳಿಲ್ಲ.]

**ಪ್ರತ್ಯಕ್ತತ್ವಚಿಂತಾಮಣಿ** (5-33,34) ಯೂ ಹೀಗೆಯೇ ಹೇಳುತ್ತದೆ. –

> ಏವಮೇವೋಹನೀಯಾಃ ಸ್ಯುರಣುಮಾತ್ರಾತ್ಮವಿನ್ಮತೇ ।
> ದೇಹಮಾತ್ರಾತ್ಮವಾದೇ ಚ ದೋಷಾ ಯುಕ್ತಿವಿದಾಂ ವರೈಃ ॥
> ತಸ್ಮಾನ್ಮಾತೃಪ್ರಮಾಣಾದಿವ್ಯವಹಾರಸ್ಯ ಸಂಭವಃ ।
> ಸರ್ವವಾದಿಮತೇ ನಾಸ್ತಿ ಯುಕ್ತಿಭಿಶ್ಚೇತಿ ಸಙ್ಗ್ರಹಃ ॥

## 7.1.7 ಅವೈದಿಕ ಅಭಿಪ್ರಾಯಗಳ ನಿರಾಕರಣೆಯ ಬೇರೆ ನೆಲೆಗಳು

ಈ ಪ್ರಕ್ರಿಯೆಗಳಲ್ಲಿ ಯಾವದೂ **ಪ್ರತಿಕರ್ಮವ್ಯವಸ್ಥೆ**ಯ ಸಮಾಧಾನಕರ ವಿವರಣೆಯನ್ನು ಕೊಡಲು ಸಮರ್ಥವಾಗಿಲ್ಲ, **ಸೂತ್ರ**ಗಳು (2-2) ಹಾಗೂ ಅವುಗಳ ಮೇಲಿನ ಭಾಷ್ಯಗಳು ಇನ್ನೂ ಹೆಚ್ಚು ಗಟ್ಟಿಯಾದ ನೆಲೆಗಳಲ್ಲಿ ವೇದಬಾಹ್ಯವಾದ ಅಭಿಪ್ರಾಯಗಳನ್ನು ನಿರಾಕರಿಸುವಾಗ ಕೊಟ್ಟ ಕಾರಣಗಳಿಗೆ  ಇನ್ನೊಂದನ್ನು ಸೇರಿಸುತ್ತದೆ ಅಷ್ಟೆ. ಈ ಕಾರಣಗಳಲ್ಲಿ ಪ್ರತಿಯೊಂದು ಪ್ರಕ್ರಿಯೆಯಲ್ಲಿ ಕಂಡುಬರುವ ಅಂತರ್ವಿರೋಧಗಳು, ಕುತರ್ಕಗಳು, ಪ್ರಾಯೋಜಿತ ತತ್ತ್ವಗಳಲ್ಲಿ ಕೆಲವುಗಳ ಅಸಮರ್ಥನೀಯತೆ ಸೇರಿವೆಯಲ್ಲದೆ ಇಂಥ ವಿಷಯಗಳಲ್ಲಿ ಪ್ರಮಾಣವಾದ ಶ್ರುತಿಯನ್ನು ಅನುಸರಿಸದೇ ಇರುವುದು (ದೋಷ)ವೆಂದೂ ಹೇಳಲಾಗಿದೆ. ಉದಾಹರಣೆಗೆ, (ಆತ್ಮನ ಸ್ವರೂಪ ಚೈತನ್ಯವಾಗಿದೆ, ನೈಯಾಯಿಕ, ವೈಶೇಷಿಕರು ಹೇಳುವಂತೆ ಅಚೇತನವಲ್ಲ) ಎನ್ನುವುದನ್ನು ಸ್ಥಾಪಿಸುವ ಸೂತ್ರ **ಜ್ಞೋಽತ ಏವ** (2-3-12-10)ದ **ಭಾಷ್ಯ** ಹೀಗೆ ಹೇಳುತ್ತದೆ –

> ವೈಶೇಷಿಕಾದಿತರ್ಕಶ್ಚ ಶ್ರುತಿವಿರೋಧೇ ಆಭಾಸೀಭವತಿ।

ಹಾಗೆಯೇ, ಆತ್ಮವಾಗಲಿ, ಈಶ್ವರನಿಗೆ ಸ್ಥಾನ ಕೊಡದ ಸಾಂಖ್ಯರ ಪ್ರಕೃತಿಯಾಗಲಿ ಕ್ರಿಯೆಯನ್ನು ಆರಂಭಿಸುವ ಸಾಮರ್ಥ್ಯ ಹೊಂದಿಲ್ಲ ಎಂದು ತೋರಿಸಿದ ನಂತರ **ಭಾಷ್ಯ** (2-2-1-10) ಹೀಗೆ ಹೇಳುತ್ತದೆ -

ಪ್ರಸಿದ್ಧ ಏವ ತು ಶ್ರುತ್ಯೇಶ್ವರಕಾರಣವಾದಿನ್ಯಾ ವಿರೋಧಃ ತದನುವರ್ತಿನ್ಯಾ ಚ ಸ್ಮೃತ್ಯಾ ।

ಭಾಷ್ಯದಲ್ಲಿ ಶ್ರುತಿಗಳನ್ನಾಧರಿಸಿದ ಬೇರೆ ಎಲ್ಲ ಪ್ರಕ್ರಿಯೆಗಳ ಬಗೆಗೂ ಇಂಥವೇ ಟೀಕೆಗಳು ಕಂಡುಬರುತ್ತವೆ.

### 7.1.8 ಶ್ರುತಿಯೇ ಅಂತಿಮ ನಿರ್ಣಯ - ಎಲ್ಲ ಬೆಳಕುಗಳ 'ಬೆಳಕಾ'ದ ಸಾಕ್ಷಿಜ್ಞಾನವೇ ಉತ್ತರ

ಈ ಬಿಕ್ಕಟ್ಟಿನಿಂದ ಪಾರಾಗಲು ಶ್ರುತಿಯೊಂದೇ ಸಹಾಯಮಾಡಬಲ್ಲದು. ಈ ನುಡಿಯ ಮೂರನೆಯ ಸಾಲು ತೋರಿಸುವಂತೆ **ಸಾಕ್ಷಿಜ್ಞಾನ - ನಾನು ಅರಿತಿದ್ದೇನೆ (ಅಹಂ ಜಾನಾಮಿ)** ಸದ್ಯದ ಸನ್ನಿವೇಶವನ್ನು ತಿಳಿಯಲು ಉತ್ತಮ ಉಪಾಯವಾಗಿದೆ. ಇದು ಶ್ರುತಿ ಹೇಳಿದಂತೆಯೇ ಇದೆ (ಮುಂ.ಉ. 2-2-11, ಕಠ. ಉ. 5-15). **ತತ್ತ್ವಸುಧಾ** ಹಾಗೂ **ಮಾನಸೋಲ್ಲಾಸಟೀಕಾ** (IV-1) ಹೀಗೆ ಹೇಳಿವೆ -

ಉಕ್ತಮರ್ಥಂ ಶ್ರುತ್ಯಾ ದೃಢಯತಿ – ಜಾನಾಮೀತಿ । ಅಹಮಿದಂ ಜಾನಾಮೀತಿ ಸ್ವಗತೇನ ನಿರಪೇಕ್ಷಪ್ರಕಾಶರೂಪೇಣ ವಿಷಯಮವಭಾಸಯನ್ ಯಃ ಸ್ವಯಮೇವ ಭಾಸತೇ, ತಮೇವ ಭಾನ್ತಂ ಪ್ರಕಾಶಮಾನಮ್, ಅನು ಅನುಸೃತ್ಯ, ಏತತ್ ಜಗತ್ ಭಾತಿ, ನ ಸ್ವತ ಇತ್ಯಕ್ಷರ ಯೋಜನಾ । ತಥಾ ಚ ಶ್ರುತಿಃ –

ನ ತತ್ರ ಸೂರ್ಯೋ ಭಾತಿ ನ ಚನ್ದ್ರತಾರಕಂ ನೇಮಾ ವಿದ್ಯುತೋ ಭಾನ್ತಿ ಕುತೋಽಯಮಗ್ನಿಃ । ಇತಿ ಸರ್ವಪ್ರಕಾರ-ಪ್ರಕಾಶವಿಷಯತ್ವೋಕ್ತ್ಯಾ ಸ್ವಪ್ರಕಾಶತ್ವಂ ಪ್ರತ್ಯಗ್ಬ್ರಹ್ಮಣ ಉಪಪಾದ್ಯ, ತಮೇವ ಭಾನ್ತಮನುಭಾತಿ ಸರ್ವಂ ತಸ್ಯ ಭಾಸಾ ಸರ್ವಮಿದಂ ವಿಭಾತಿ ॥

ಇತಿ ಭಾಸಮಾನಾತ್ಮಪ್ರಕಾಶಾನುವಿದ್ಧಂ ತತ್ಸರ್ವಂ ಜಗದವಭಾಸತ ಇತಿ ನಿರ್ಧಾರಯತಿ ।

**ಶ್ರುತಿ** (ಮುಂ.ಉ. 2-2-11) ಯ ಮೇಲಿನ **ಭಾಷ್ಯ** ಹೀಗೆ ಹೇಳುತ್ತದೆ –

ಕಥಂ ತತ್ 'ಜ್ಯೋತಿಷಾಂ ಜ್ಯೋತಿಃ' ಇತಿ ? ಉಚ್ಯತೇ ।

ನ ತತ್ರ ತಸ್ಮಿನ್ ಸ್ವಾತ್ಮಭೂತೇ ಬ್ರಹ್ಮಣಿ ಸರ್ವಾವಭಾಸಕೋಽಪಿ ಸೂರ್ಯೋ ಭಾತಿ । ತದ್ ಬ್ರಹ್ಮ ನ ಪ್ರಕಾಶಯತೀತ್ಯರ್ಥಃ । ಸ ಹಿ ತಸ್ಯೈವ ಭಾಸಾ ಸರ್ವಮನ್ಯದನಾತ್ಮಜಾತಂ ಪ್ರಕಾಶಯತಿ । ನ ತು ತಸ್ಯ ಸ್ವತಃ ಪ್ರಕಾಶನಸಾಮರ್ಥ್ಯಮ್ । ತಥಾ ನ ಚನ್ದ್ರತಾರಕಮ್ । ನೇಮಾ ವಿದ್ಯುತೋ ಭಾನ್ತಿ । ಕುತೋಽಯಮಗ್ನಿರಸ್ಮಾದ್ಗೋಚರಃ ? ಕಿಂ ಬಹುನಾ ? ಯದಿದಂ ಜಗದ್ಭಾತಿ ತತ್ ತಮೇವ ಪರಮೇಶ್ವರಂ ಸ್ವತೋ ಭಾರೂಪತ್ವಾದ್ಭಾನ್ತಂ ದೀಪ್ಯಮಾನಮನುಭಾತ್ಯನುದೀಪ್ಯತೇ । ಯಥಾ ಜಲೋಲ್ಮುಕಾದ್ಯಗ್ನಿಸಂಯೋಗಾದಗ್ನಿಂ ದಹನ್ತಮನುದಹತಿ, ನ ಸ್ವತಃ ತದ್ವತ್ । ತಸ್ಯೈವ ಭಾಸಾ ದೀಪ್ತ್ಯಾ ಸರ್ವಮಿದಂ ಸೂರ್ಯಾದಿ ಜಗದ್ವಿಭಾತಿ । ಯತ ಏವಂ ತದೇವ ಬ್ರಹ್ಮ ಭಾತಿ ಚ ವಿಭಾತಿ ಚ ಕಾರ್ಯಗತೇನ ವಿವಿಧೇನ ಭಾಸಾ, ಅತಃ ತಸ್ಯ ಬ್ರಹ್ಮಣೋ ಭಾರೂಪತ್ವಂ ಸ್ವತೋಽವಗಮ್ಯತೇ । ನ ಹಿ ಸ್ವತೋಽವಿದ್ಯಮಾನಂ ಭಾಸನಮನ್ಯಸ್ಯ ಕರ್ತುಂ ಶಕ್ನೋತಿ । ಘಟಾದೀನಾಮನ್ಯಾವಭಾಸಕತ್ವಾದರ್ಶನಾದ್ಭಾರೂಪಾಣಾಂ ಚ ಆದಿತ್ಯಾದೀನಾಂ ತದ್ದರ್ಶನಾತ್ ।

[ಅದು ‘ಜ್ಯೋತಿಗಳ ಜ್ಯೋತಿ’ ಹೇಗೆ ಎನ್ನುವುದನ್ನು ವಿವರಿಸಲಾಗಿದೆ. ಸೂರ್ಯನು ಸರ್ವವನ್ನು ಪ್ರಕಾಶಿಸುವವನಾದರೂ ಆತ್ಮವಾದ ಬ್ರಹ್ಮವನ್ನು ಪ್ರಕಾಶಿಸಲಾರ. ಯಾಕೆಂದರೆ ತಾನೇ ಬ್ರಹ್ಮಾತ್ಮದಿಂದ ಪ್ರಕಾಶಿತನಾಗಿದ್ದಾನೆ. ಹಾಗಿಲ್ಲದೇ ಹೋಗಿದ್ದರೆ ಅವನಲ್ಲಿ ಪ್ರಕಾಶಿಸಲು ಸಾಮರ್ಥ್ಯವೇ ಇರುತ್ತಿರಲಿಲ್ಲ. ಹಾಗೆಯೇ ಚಂದ್ರನಾಗಲಿ, ನಕ್ಷತ್ರಗಳಾಗಲಿ ಮಿಂಚಾಗಲಿ, ತನ್ನಷ್ಟಕ್ಕೆ ತಾನೇ ಪ್ರಕಾಶಿಸಲಾರದು; ಹಾಗೆಯೇ ಈಗ ನಾವು ನೋಡುತ್ತಿರುವ ಅಗ್ನಿಗೆ ಪ್ರಕಾಶವೆಲ್ಲಿಂದ ಬಂದೀತು ?

ಸ್ಫುರಿಸುವಂತೆ ಭಾಸವಾಗುವ ವಿಶ್ವವೂ ತನ್ನ ಸ್ವಭಾವದಿಂದಲೇ ಸ್ವಯಂಪ್ರಕಾಶನಾದ ಈಶ್ವರನ ಪ್ರಕಾಶದಲ್ಲಿ ಸ್ಫುರಿಸುತ್ತದೆ. ಹೇಗೆ ನೀರು, ಕೊಳ್ಳಿ ಇತ್ಯಾದಿಗಳು ಉಷ್ಣತೆಯನ್ನು ಹೊಂದುವುದು ಉರಿಯುವ ಬೆಂಕಿಯ ಸಂಪರ್ಕದಲ್ಲಿದ್ದಾಗ ಮಾತ್ರವೋ, ಹಾಗೆಯೇ ಸೂರ್ಯ ಮತ್ತು ಸರ್ವ ಜಗತ್ತು ಈಶ್ವರನ ಪ್ರಕಾಶದಲ್ಲಿ ಮಾತ್ರ ಪ್ರಕಾಶಿಸುತ್ತವೆ. ಹೀಗೆ, ಬ್ರಹ್ಮವೊಂದೇ ಪ್ರಕಾಶಿಸುವುದರಿಂದ ಹಾಗೂ ವಸ್ತುಗಳ ಪ್ರಕಾಶದ ರೂಪದಲ್ಲಿ

ನಾನಾರೀತಿಯಿಂದ ಪ್ರಕಾಶಿಸುವುದರಿಂದ ಬ್ರಹ್ಮದ ಸ್ವಯಂಪ್ರಕಾಶ ಸ್ವರೂಪ ಅವಗತವಾಗುತ್ತದೆ. ಸ್ವತಃ ತನ್ನಲ್ಲಿಯೇ ಪ್ರಕಾಶವಿಲ್ಲದಿದ್ದರೆ ಅದು ಬೇರೆ ಏನನ್ನೂ ಪ್ರಕಾಶಿಸಲಾರದು, ಸ್ಪಷ್ಟವಾಗಿ ಕಾಣುವಂತೆ, ಮಡಕೆ ಮೊದಲಾದವುಗಳು ಮತ್ತೊಂದನ್ನು ಪ್ರಕಾಶಿಸಲಾರವು, ಆದರೆ, ಪ್ರಕಾಶಿಸುತ್ತಿರುವ ಸೂರ್ಯ ಇತ್ಯಾದಿಗಳು ಹಾಗೆ ಮಾಡಬಲ್ಲವು.]

**'ಅನುಕೃತೇಸ್ತಸ್ಯ ಚ'** ಮತ್ತು **'ಅಪಿ ಚ ಸ್ಮರ್ಯತೇ'** ಎಂಬ **ಬ್ರಹ್ಮಸೂತ್ರ**ದ (1-3-6-22, 23) ಸೂತ್ರಗಳ ಮೇಲಿನ ಭಾಷ್ಯಗಳ ಮೂಲಕ ಶ್ರುತಿಯನ್ನು ಚರ್ಚಿಸುತ್ತ **ಮುಂಡಕೋಪನಿಷತ್ತಿ**ನಲ್ಲಿ ಹೇಳಿದ ಪ್ರಕಾಶದ ಅನುಕೃತಿ ಹಾಗೂ 'ಅವನ' ಶಬ್ದದ ಪ್ರಯೋಗ ಈ ಪ್ರಕಾಶ ಬ್ರಹ್ಮನದೇ ಎಂದು ಸ್ಪಷ್ಟಗೊಳಿಸುತ್ತವೆ. ಇದಲ್ಲದೆ, ಸ್ಮೃತಿಯಲ್ಲಿಯೂ ಇದರ ಉಲ್ಲೇಖವಿದೆ.) **ಮುಂಡಕೋಪನಿಷತ್ತಿ**ನಲ್ಲಿ ಹೇಳಿದ ಭಾಸ ಭೌತಿಕ ಎನ್ನುವುದನ್ನು ನಿರಾಕರಿಸುತ್ತ ಅದು ಸ್ವಯಂಪ್ರಕಾಶವಾದ ಹಾಗೂ ಜಗತ್ತಿನ ವಸ್ತುಗಳಲ್ಲಿ ಪ್ರಕಾಶದ ಅಧಿಷ್ಠಾನವಾದ **ಪ್ರಜ್ಞಾ** (ಭಾರೂಪಃ) ಎನ್ನುವುದನ್ನು ಸ್ಥಾಪಿಸುತ್ತದೆ ಹಾಗೂ ಕಬ್ಬಿಣದ ಉಂಡೆಯನ್ನು ಪ್ರಕಾಶಿಸುವ ಅಗ್ನಿಯ ದೃಷ್ಟಾಂತವನ್ನು ಕೊಡುತ್ತದೆ. (ಯಥಾ ಸುತಪ್ತೋಽಯಃಪಿಂಡೋಽಗ್ನ್ಯ-ನುಕೃತಃ, ಅಗ್ನಿಂ ದಹನ್ತಮನುದಹತಿ।) ಹಾಗೂ ಮುಂದುವರೆದು ಹೀಗೆ ಹೇಳುತ್ತದೆ -

ಅಥವಾ ನ ಸೂರ್ಯಾದೀನಾಮೇವ ಶ್ಲೋಕಪರಿಪಠಿತಾ-ನಾಮಿದಂ ತದ್ಧೇತುಕಂ ವಿಭಾನಮುಚ್ಯತೇ । ಕಿಂ ತರ್ಹಿ ? 'ಸರ್ವಮಿದಮ್' ಇತಿ ಅವಿಶೇಷಶ್ರುತೇಃ ಸರ್ವಸ್ಯೈವಾಸ್ಯ ನಾಮರೂಪಕ್ರಿಯಾಕಾರಕಫಲಜಾತಸ್ಯ ಯಾ ಅಭಿವ್ಯಕ್ತಿಃ ಸಾ ಬ್ರಹ್ಮಜ್ಯೋತಿಃ ಸತ್ತಾನಿಮಿತ್ತಾ । ಯಥಾ ಸೂರ್ಯಾದಿ-ಜ್ಯೋತಿಸ್ಸತ್ತಾನಿಮಿತ್ತಾ ಸರ್ವಸ್ಯ ರೂಪಜಾತಸ್ಯಾಭಿವ್ಯಕ್ತಿಃ, ತದ್ವತ್ । 'ನ ತತ್ರ ಸೂರ್ಯೋ ಭಾತಿ' ಇತಿ ಚ ತತ್ರಶಬ್ದಮಾಹರನ್ ಪ್ರಕೃತಗ್ರಹಣಂ ದರ್ಶಯತಿ । ಪ್ರಕೃತಂ ಚ ಬ್ರಹ್ಮ 'ಯಸ್ಮಿನ್ ದ್ಯೌಃ ಪೃಥಿವೀ ಚಾನ್ತರಿಕ್ಷಮೋತಮ್' ಇತ್ಯಾದಿನಾ । ಅನನ್ತರಂ ಚ 'ಹಿರಣ್ಮಯೇ ಪರೇ ಕೋಶೇ ವಿರಜಂ ಬ್ರಹ್ಮ ನಿಷ್ಕಲಮ್ । ತಚ್ಛುಭ್ರಂ ಜ್ಯೋತಿಷಾಂಜ್ಯೋತಿಸ್ತದ್ಯದಾತ್ಮವಿದೋ ವಿದುಃ' ಇತಿ । ಕಥಂ ತಜ್ಜ್ಯೋತಿಷಾಂಜ್ಯೋತಿಃ? ಇತ್ಯತ ಇದಮುತ್ಥಿತಮ್ 'ನ ತತ್ರ ಸೂರ್ಯೋ

ಭಾತಿ’ ಇತಿ । ಯದಪ್ಯುಕ್ತಮ್ – ಸೂರ್ಯಾದೀನಾಂ ತೇಜಸಾಂ ಭಾನಪ್ರತಿಷೇಧಸ್ತೇಜೋಧಾತಾವೇವಾನ್ಯಸ್ಮಿನ್ನವಕಲ್ಪತೇ ಸೂರ್ಯ ಇವೇತರೇಷಾಮಿತಿ । ತತ್ರ ತು ಸ ಏವ ತೇಜೋಧಾತುರನ್ಯೋ ನ ಸಂಭವತೀತ್ಯುಪಪಾದಿತಮ್ । ಬ್ರಹ್ಮಣ್ಯಪಿ ಚೈಷಾಂ ಭಾನಪ್ರತಿಷೇಧೋಽವಕಲ್ಪತೇ । ಯತೋ ಯದುಪಲಭ್ಯತೇ ತತ್ಸರ್ವಂ ಬ್ರಹ್ಮಣೈವ ಜ್ಯೋತಿಷೋಪಲಭ್ಯತೇ । ಬ್ರಹ್ಮ ತು ನಾನ್ಯೇನ ಜ್ಯೋತಿಷಾ ಉಪಲಭ್ಯತೇ ಸ್ವಯಂಜ್ಯೋತಿಃಸ್ವರೂಪತ್ವಾತ್, ಯೇನ ಸೂರ್ಯಾದಯಸ್ತಸ್ಮಿನ್ ಭಾಯುಃ । ಬ್ರಹ್ಮ ಹ್ಯನ್ಯದ್ವ್ಯನಕ್ತಿ ನ ತು ಬ್ರಹ್ಮಾನ್ಯೇನ ವ್ಯಜ್ಯತೇ । ‘ಆತ್ಮನೈವಾಯಂ ಜ್ಯೋತಿಷಾಸ್ತೇ’, ‘ಅಗೃಹ್ಯೋ ನ ಹಿ ಗೃಹ್ಯತೇ’ ಇತ್ಯಾದಿಶ್ರುತಿಭ್ಯಃ ।

ಅಪಿ ಚೇದ್ದ್ರೂಗ್ರೂಪತ್ವಂ ಪ್ರಾಜ್ಞಸ್ಯೈವಾತ್ಮನಃ ಸ್ಮರ್ಯತೇ ಭಗವದ್ಗೀತಾಸು –

ನ ತದ್ಭಾಸಯತೇ ಸೂರ್ಯೋ ನ ಶಶಾಙ್ಕೋ ನ ಪಾವಕಃ ।
ಯದ್ಗತ್ವಾ ನ ನಿವರ್ತನ್ತೇ ತದ್ಧಾಮ ಪರಮಂ ಮಮ ॥ ಇತಿ ।

ಯದಾದಿತ್ಯಗತಂ ತೇಜೋ ಜಗದ್ಭಾಸಯತೇಽಖಿಲಮ್ ।
ಯಚ್ಚನ್ದ್ರಮಸಿ ಯಚ್ಚಾಗ್ನೌ ತತ್ತೇಜೋ ವಿದ್ಧಿ ಮಾಮಕಮ್ ॥
ಇತಿ ಚ ।

[ಅಥವಾ, ಶ್ರುತಿಯಲ್ಲಿ ಹೇಳಿರುವ ಕೇವಲ ಸೂರ್ಯನ ಪ್ರಕಾಶವಷ್ಟಕ್ಕೇ ಅವನು ಕಾರಣನಾಗದಿರಬಹುದು. ಹಾಗಾದರೆ, ಮತ್ತೇನನ್ನು ಅವನು ಪ್ರಕಾಶಿಸುತ್ತಾನೆ ? ಶ್ರುತಿಯಲ್ಲಿ ‘ಸರ್ವಮಿದಂ’ (ಇದೆಲ್ಲವನ್ನೂ) ಎಂದು ಅವಿಶೇಷವಾಗಿ ಹೇಳಿರುವುದರಿಂದ ನಾಮ, ರೂಪ, ಕ್ರಿಯೆ, ಕಾರಕ, ಫಲ ಇವುಗಳಿಂದ ಕೂಡಿದ ಸಮಸ್ತ ವಿಶ್ವದ ಅಭಿವ್ಯಕ್ತಿಗೆ ಬ್ರಹ್ಮದ ಪ್ರಕಾಶವೇ ಕಾರಣ, ಹೇಗೆ ಸೂರ್ಯಪ್ರಕಾಶದಿಂದ ಎಲ್ಲ ರೂಪಗಳು, ವರ್ಣಗಳು ತೋರಿಬರುತ್ತವೆಯೋ ಹಾಗೆ. ಇದಲ್ಲದೆ, ಶ್ರುತಿಯಲ್ಲಿರುವ ‘ಅಲ್ಲಿ’ ಎನ್ನುವ ಶಬ್ದ - ‘ಅಲ್ಲಿ ಸೂರ್ಯ ಬೆಳಗುವುದಿಲ್ಲ’ - ಪರಿಶೀಲನೆಯಲ್ಲಿರುವ ವಸ್ತುವನ್ನೇ ಸ್ವೀಕರಿಸಬೇಕು. ಈ ವಸ್ತುವೆಂದರೆ ಶ್ರುತಿಪ್ರಮಾಣವಾದ ಬ್ರಹ್ಮ, ‘ಯಾವುದರಲ್ಲಿ ದ್ಯುಲೋಕ, ಪೃಥ್ವಿ ಮತ್ತು ಅಂತರಿಕ್ಷಗಳು ಸೇರಿವೆಯೋ’ ; ‘ಬ್ರಹ್ಮವು ರಜಸ್ಸಿನಿಂದ ಮುಕ್ತವಾಗಿ ಹಾಗೂ ಅಖಂಡವಾಗಿ

ಹಿರಣ್ಮಯಕೋಶದಲ್ಲಿ(ದೆ) ; ಅದು ಶುದ್ಧವಾದುದು ಹಾಗೂ ಜ್ಯೋತಿಗಳ ಜ್ಯೋತಿ ; ಆತ್ಮವನ್ನು ತಿಳಿದವರು ಅದನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾರೆ.' - ಬ್ರಹ್ಮವು ಜ್ಯೋತಿಗಳ ಜ್ಯೋತಿ ಹೇಗೆ ಎಂದು ತೋರಿಸಲು ಶ್ರುತಿ 'ಅದನ್ನು ಸೂರ್ಯ ಪ್ರಕಾಶಿಸುವುದಿಲ್ಲ' ಎಂದು ಹೇಳಿದೆ. ಸೂರ್ಯಾದಿಗಳ ತೇಜಸ್ಸನ್ನು ಅಲ್ಲಗಳೆಯಲು ಇನ್ನೊಂದು ಪ್ರಕಾಶತತ್ತ್ವದ ಅಸ್ತಿತ್ವವನ್ನು ಸಿದ್ಧಮಾಡುವುದು ಅವಶ್ಯವಿದೆ - ಎನ್ನುವ ಆಕ್ಷೇಪಕ್ಕೆ ಉತ್ತರವಾಗಿ - (ಉದಾಹರಣೆಗೆ 'ಸೂರ್ಯನ ಪ್ರಕಾಶದಲ್ಲಿ ಬೇರೆ ಯಾವುದೂ ಪ್ರಕಾಶಿಸಲಾರದು') - ಇಂಥ ಪ್ರಕಾಶತತ್ತ್ವ ಬ್ರಹ್ಮವಲ್ಲದೆ ಬೇರೆ ಯಾವುದೂ ಇರಲಾರದು ಎಂದು ತೋರಿಸಿಯಾಗಿದೆ. ಹೀಗೆ, ಬ್ರಹ್ಮಕ್ಕೆ ಸಂಬಂಧಿಸಿದಂತೆ ಸೂರ್ಯ, ಚಂದ್ರ ಮೊದಲಾದವರ ಸ್ವಯಂಪ್ರಕಾಶವನ್ನು ಅಲ್ಲಗಳೆಯುವುದು ಸೂಕ್ತವೆನಿಸುತ್ತದೆ. ಯಾಕೆಂದರೆ, ಯಾವುದು ಗ್ರಾಹ್ಯವಾಗುತ್ತದೆಯೋ ಅದೆಲ್ಲ ಸ್ವಯಂಪ್ರಕಾಶನಾದ ಬ್ರಹ್ಮದಿಂದ ಮಾತ್ರ ಗ್ರಾಹ್ಯವಾಗುತ್ತದೆ. ಬೇರೆ ಯಾವುದೊಂದು ಪ್ರಕಾಶ ಬ್ರಹ್ಮವನ್ನು ತೋರುತ್ತಿದ್ದರೆ ಸೂರ್ಯಾದಿಗಳು ಆ ಕಾರ್ಯ ಮಾಡಬಹುದಾಗಿತ್ತು. ಆದರೆ ಬ್ರಹ್ಮದ ಸ್ವರೂಪವೇ ಸ್ವಯಂಪ್ರಕಾಶ. ಅದನ್ನು ಬೇರೆ ಯಾವುದೂ ತೋರಿಸಲಾರದು. ಎಲ್ಲವೂ ಬ್ರಹ್ಮದಿಂದಲೇ ವ್ಯಕ್ತವಾಗುತ್ತದೆ ; ಯಾವುದೂ ಬ್ರಹ್ಮವನ್ನು ವ್ಯಕ್ತಪಡಿಸಲಾರದು. ಕೆಳಗಿನಂಥ ಶ್ರುತಿಗಳು ಇದನ್ನು ಸ್ಪಷ್ಟಗೊಳಿಸುತ್ತವೆ - "ಜ್ಯೋತಿಯಾದ ಆತ್ಮದಿಂದಲೇ, ಕುಳಿತಿರುವುದು ಸಾಧ್ಯ" "ಅವನು ಎಂದೂ ಗ್ರಾಹ್ಯನಾಗುವುದಿಲ್ಲ, ಯಾಕೆಂದರೆ ಅವನು ಅಗ್ರಾಹ್ಯನು."

ಇದಲ್ಲದೆ, ಇದನ್ನು ಸ್ಮರಿಸಿಕೊಳ್ಳುತ್ತ **ಭಗವದ್ಗೀತೆ** ಪ್ರಾಜ್ಞನಾದ ಆತ್ಮಕ್ಕೆ ಮಾತ್ರ ಇಂಥ ರೂಪವಿದೆ ಎಂದು ಹೇಳುತ್ತದೆ. "ಎಲ್ಲಿಂದ ಮರಳುದಾರಿಗಳಿಲ್ಲವೋ ಅದು ನನ್ನ ಪರಮಧಾಮ. ಅದನ್ನು ಸೂರ್ಯನಾಗಲಿ, ಚಂದ್ರನಾಗಲಿ, ಅಗ್ನಿಯಾಗಲಿ ಪ್ರಕಾಶಿಸುವುದಿಲ್ಲ." (ಗೀತೆ 15-6). "ಯಾವುದು ಜಗತ್ತನ್ನು ಬೆಳಗುವ ಸೂರ್ಯನ ತೇಜಸ್ಸೋ, ಯಾವ (ತೇಜಸ್ಸು) ಚಂದ್ರನಲ್ಲಿ ಅಥವಾ ಅಗ್ನಿಯಲ್ಲಿದೆಯೋ ಅದು ನನ್ನ ತೇಜಸ್ಸೆಂದು ತಿಳಿ." (ಗೀತೆ. 15-12).]

## 7.1.9 ಮನಸ್ಸು ದಿವ್ಯ ಚಕ್ಷು - ಜ್ಞಾನೇಂದ್ರಿಯಗಳ ಪಾತ್ರ

ಎಲ್ಲ ಜ್ಞಾನಗಳ ಮೂಲ ಸಾಕ್ಷಿ-

ಆತ್ಮ ಎಂದು ತೋರಿಸುತ್ತ, **ಛಾಂದೋಗ್ಯೋಪನಿಷದ್** (8-12-4, 5) ಈ ಸಂದರ್ಭದಲ್ಲಿ ಮನಸ್ಸು ಹಾಗೂ ಜ್ಞಾನೇಂದ್ರಿಯಗಳ ಪಾತ್ರವನ್ನು ತೋರಿಸುತ್ತದೆ -

ಅಥ ಯತ್ರೈತದಾಕಾಶಮನುವಿಷಣ್ಣಂ ಚಕ್ಷುಃ ಸ ಚಾಕ್ಷುಷಃ ಪುರುಷೋ ದರ್ಶನಾಯ ಚಕ್ಷುರಥ ಯೋ ವೇದೇದಂ ಜಿಘ್ರಾಣೀತಿ ಸ ಆತ್ಮಾ ಗನ್ಧಾಯ ಘ್ರಾಣಮಥ ಯೋ ವೇದೇದಮಭಿವ್ಯಾಹರಾಣೀತಿ ಸ ಆತ್ಮಾಽಭಿವ್ಯಾಹಾರಾಯ ವಾಗಥ ಯೋ ವೇದೇದꣳಶೃಣವಾನೀತಿ ಸ ಆತ್ಮಾ ಶ್ರವಣಾಯ ಶ್ರೋತ್ರಮ್ । ಅಥ ಯೋ ವೇದೇದಂ ಮನ್ವಾನೀತಿ ಮನೋಽಸ್ಯ ದೈವಂ ಚಕ್ಷುಃ ।

ಇದರ ಮೇಲಿನ ಭಾಷ್ಯ ಹೀಗಿದೆ -

ಅಥ ಯತ್ರ ಕೃಷ್ಣತಾರೋಪಲಕ್ಷಿತಮಾಕಾಶಂ ದೇಹಚ್ಛಿದ್ರಮನುವಿಷಣ್ಣಮನುಷಕ್ತಮನುಗತಂ ಚಕ್ಷುಃ ತತ್ರ ಸ ಪ್ರಕೃತೋಽಶರೀರ ಆತ್ಮಾ ಚಾಕ್ಷುಷಃ, ಚಕ್ಷುಷಿ ಭವ ಇತಿ ಚಾಕ್ಷುಷಃ ಪುರುಷಃ ತಸ್ಯ ದರ್ಶನಾಯ ರೂಪೋಪಲಬ್ಧಯೇ ಚಕ್ಷುಃ ಕರಣಮ್ । ಯಸ್ಯ ತದ್ದೇಹಾದಿಭಿಃ ಸಂಹತತ್ವಾತ್ ಪರಸ್ಯ ದ್ರಷ್ಟುರರ್ಥೇ, ಸೋಽತ್ರ ಚಕ್ಷುಷಿ ದರ್ಶನೇನ ಲಿಙ್ಗೇನ ದೃಶ್ಯತೇ ಪರೋಽಶರೀರೋಽಸಂಹತಃ । 'ಅಕ್ಷಿಣಿ ದೃಶ್ಯತೇ' ಇತಿ ಪ್ರಜಾಪತಿನೋಕ್ತಂ ಸರ್ವೇನ್ದ್ರಿಯ-ದ್ವಾರೋಪಲಕ್ಷಣಾರ್ಥಮ್ । ಸರ್ವವಿಷಯೋಪಲಬ್ಧಾ ಹಿ ಸ ಏವೇತಿ । ಸ್ಫುಟೋಪಲಬ್ಧಿಹೇತುತ್ವಾತ್ತು 'ಅಕ್ಷಿಣಿ' ಇತಿ ವಿಶೇಷವಚನಂ ಸರ್ವಶ್ರುತಿಷು । 'ಅಹಮದರ್ಶಮಿತಿ ತತ್ಸತ್ಯಂ ಭವತಿ' (ಬೃ. 4-1-4) ಇತಿ ಚ ಶ್ರುತೇಃ । ಅಥಾಽಪಿ ಯೋಽಸ್ಮಿನ್ ದೇಹೇ ವೇದ । ಕಥಮ್? ಇದಂ ಸುಗನ್ಧಿ ದುರ್ಗನ್ಧಿ ವಾ ಜಿಘ್ರಾಣೀತ್ಯಸ್ಯ ಗನ್ಧಂ ವಿಜಾನೀಯಾಮಿತಿ, ಸ ಆತ್ಮಾ, ತಸ್ಯ ಗನ್ಧಾಯ ಗನ್ಧವಿಜ್ಞಾನಾಯ ಘ್ರಾಣಮ್ । ಅಥ ಯೋ ವೇದೇದಂ ವಚನಮಭಿವ್ಯಾಹರಾಣೀತಿ, ವದಿಷ್ಯಾಮೀತಿ ಸ ಆತ್ಮಾ । ಅಭಿವ್ಯಾಹರಣಕ್ರಿಯಾಸಿದ್ಧಯೇ ಕರಣಮ್ ವಾಗಿನ್ದ್ರಿಯಮ್ । ಅಥ ಯೋ ವೇದೇದಂ ಶೃಣವಾನೀತಿ ಸ ಆತ್ಮಾ, ಶ್ರವಣಾಯ ಶ್ರೋತ್ರಮ್ ।

ಅಥ ಯೋ ವೇದೇದಂ ಮನ್ವಾನೀತಿ ಮನನವ್ಯಾಪಾರ-ಮಿನ್ದ್ರಿಯಾಸಂಸ್ಪೃಷ್ಟಂ ಕೇವಲಂ ಮನ್ವಾನೀತಿ ವೇದ ಸ ಆತ್ಮಾ । ಮನನಾಯ ಮನಃ । ಯೋ ವೇದ ಸ ಆತ್ಮೇತ್ಯೇವಂ ಸರ್ವತ್ರ ಪ್ರಯೋಗಾದ್ವೇದನಮಸ್ಯ ಸ್ವರೂಪಮಿತ್ಯವಗಮ್ಯತೇ । ಯಥಾ ಯಃ ಪುರಸ್ತಾತ್ ಪ್ರಕಾಶಯತಿ ಸ ಆದಿತ್ಯೋ, ಯೋ ದಕ್ಷಿಣತೋ ಯಃ

ಪಶ್ಚಾದ್ ಉತ್ತರತೋ ಯ ಊರ್ಧ್ವಂ ಪ್ರಕಾಶಯತಿ ಸ ಆದಿತ್ಯ, ಇತ್ಯುಕ್ತೇ ಪ್ರಕಾಶಸ್ವರೂಪ ಇತಿ ಗಮ್ಯತೇ । ದರ್ಶನಾದಿಕ್ರಿಯಾನಿರ್ವೃರ್ತ್ತ್ಯರ್ಥಾನಿ ತು ಚಕ್ಷುರಾದಿ ಕರಣಾನಿ । ಇದಂ ಚಾಸ್ಯಾತ್ಮನಃ ಸಾಮರ್ಥ್ಯಾದವಗಮ್ಯತೇ । ಆತ್ಮನಃ ಸತ್ತಾಮಾತ್ರ ಏವ ಜ್ಞಾನಕರ್ತೃತ್ವಂ ನ ತು ವ್ಯಾಪೃತತಯಾ । ಯಥಾ ಸವಿತುಃ ಸತ್ತಾಮಾತ್ರ ಏವ ಪ್ರಕಾಶನಕರ್ತೃತ್ವಂ ನ ತು ವ್ಯಾಪೃತತಯೇತಿ, ತದ್ವತ್ ।

ಮನೋಽಸ್ಯಾತ್ಮನೋ ದೈವಮಪ್ರಾಕೃತಮ್ ಇತರೇನ್ದ್ರಿಯೈ-ರಸಾಧಾರಣಂ ಚಕ್ಷುಃ । ಚಷ್ಟೇ ಪಶ್ಯತ್ಯನೇನೇತಿ ಚಕ್ಷುಃ । ವರ್ತಮಾನಕಾಲವಿಷಯಾಣಿ ಚೇನ್ದ್ರಿಯಾಣಿ । ಅತೋಽದೈವಾನಿ ತಾನಿ । ಮನಸ್ತು ತ್ರಿಕಾಲವಿಷಯೋಪಲಬ್ಧಿಕರಣಂ ಮೃದಿತದೋಷಂ ಚ ಸೂಕ್ಷ್ಮವ್ಯವಹಿತಾದಿ ಸರ್ವೋಪಲಬ್ಧಿಕರಣಂ ಚೇತಿ ದೈವಂ ಚಕ್ಷುರುಚ್ಯತೇ ।

[ಆತ್ಮ ಅಶರೀರವಾದರೂ ಅದು ಚಕ್ಷುರೂಪದ ಉಪಾಧಿಯೊಡನೆ ಸಂಬಂಧ ಹೊಂದಿದೆ. ಚಕ್ಷು, ಕಣ್ಣಿನ ಕಪ್ಪಾದ ಪಾಪೆ ಈ ಇಂದ್ರಿಯದ ವಾಸಸ್ಥಾನ ಎಂದು ಹೇಳುತ್ತಾರೆ. ಆತ್ಮಕ್ಕೆ ಕಣ್ಣು ವರ್ಣಗಳನ್ನು ಗ್ರಹಿಸುವ ಸಾಧನ. ಈ ಆತ್ಮಕ್ಕೆ ದೇಹವಿಲ್ಲ, ದೇಹ ಸಂಘಾತವೂ ಇಲ್ಲ. ನೋಡುವ ಕ್ರಿಯೆಯ ವಿಶ್ಲೇಷಣೆಯ ಮೂಲಕ ಅದನ್ನು ಗ್ರಹಿಸಬಹುದು. ಯಾಕೆಂದರೆ, ದೇಹದೊಡನೆ ಅದರ ಜೋಡಣೆ ಇರುವುದು ನೋಡುವವನ ಪ್ರಯೋಜನಕ್ಕಾಗಿ. ತನ್ನನ್ನು ಕಣ್ಣಿನ ಮೂಲಕ ನೋಡಬಹುದು ಎಂಬ ಪ್ರಜಾಪತಿಯ ಹೇಳಿಕೆಯನ್ನು ವಿಸ್ತೃತವಾಗಿ ಅದು ಎಲ್ಲ, ಎಂದರೆ ಎಲ್ಲ ಜ್ಞಾನೇಂದ್ರಿಯಗಳ ಕ್ರಿಯೆಗಳಿಗೂ ಅನ್ವಯಿಸುವುದು ಅವಶ್ಯವಿದೆ. ಯಾಕೆಂದರೆ, ಎಲ್ಲ ವಸ್ತುಗಳನ್ನು ಗ್ರಹಿಸುವವನು ಆತ್ಮವೇ. ಎಲ್ಲ ಶ್ರುತಿಗಳೂ ಕಣ್ಣನ್ನು (ಚಕ್ಷುವನ್ನು) ವಿಶೇಷವಾಗಿ ಉಲ್ಲೇಖಿಸುತ್ತವೆ. ಯಾಕೆಂದರೆ ಕಣ್ಣಿನಿಂದ ಬರುವ ಗ್ರಹಿಕೆಯಲ್ಲಿ ಸ್ಪಷ್ಟತೆ ಇರುತ್ತದೆ. 'ಅದು ಸತ್ಯವಾದದ್ದು ಯಾಕೆಂದರೆ, ಅದನ್ನು ನಾನು ನೋಡಿದ್ದೇನೆ' ಎಂದು ಶ್ರುತಿ ಸಾರಿದೆ. ಹಾಗೆಯೇ, ಯಾರು ಈ ದೇಹದಲ್ಲಿ 'ಈ ಸುಗಂಧಿಯಾದದ್ದನ್ನು ಅಥವಾ ದುರ್ಗಂಧಿಯಾದದ್ದನ್ನು ಮೂಸಿ ನೋಡುವೆ' ಹಾಗೂ 'ಅದರ ವಾಸನೆಯನ್ನು ಗುರುತಿಸುತ್ತೇನೆ' ಎಂದು ತಿಳಿಯುವುದು ಆತ್ಮ ; ಘ್ರಾಣೇಂದ್ರಿಯ ಅದು ಗಂಧವನ್ನು ತಿಳಿಯುವ

ಸಾಧನ. ಯಾರು 'ನಾನು ಈ ಶಬ್ದಗಳನ್ನು ಉಚ್ಚರಿಸುತ್ತೇನೆ, ನಾನು ಅಭಿವ್ಯಕ್ತಿ ಪಡೆಯುತ್ತೇನೆ' ಎಂದು ತಿಳಿಯುವನೋ ಅದು ಆತ್ಮ ; ವಾಕ್ಕು ಶಬ್ದಗಳ ಮೂಲಕ ಅಭಿವ್ಯಕ್ತಿ ಸಾಧನ. ಮತ್ತೂ ಯಾರು 'ನಾನು ಕೇಳಬಯಸುತ್ತೇನೆ' ಎಂದು ತಿಳಿಯುತ್ತಾನೋ ಅದು ಆತ್ಮ ; ಶ್ರೋತ್ರ ಎಂಬ ಇಂದ್ರಿಯ ಅವನು ಧ್ವನಿಯನ್ನು ತಿಳಿಯುವ ಸಾಧನ.

ಮತ್ತು ಯಾರು 'ನಾನು ಇದನ್ನು ಕುರಿತು ಆಲೋಚಿಸುತ್ತೇನೆ, ಯಾವ ಇಂದ್ರಿಯಕ್ಕೂ ಸಂಬಂಧಿಸಿರದಂತೆ ನಾನು ಆಲೋಚನೆ ಮಾಡಬೇಕು' ಎಂದು ತಿಳಿಯುತ್ತಾರೋ ಅದು ಆತ್ಮ. ಮನಸ್ಸು ಮನನಕ್ಕಾಗಿ ಇದೆ. 'ಯಾರು ತಿಳಿಯುತ್ತಾರೋ ಅದು ಆತ್ಮ' ಎನ್ನುವುದನ್ನು ಎಲ್ಲ ಕಡೆಗೂ ಪ್ರಯೋಗಿಸಿದ್ದರಿಂದ 'ಚಿತ್' ಅದರ ಅಂತಃಸತ್ವವೆನ್ನುವುದು ಗೊತ್ತಾಗುತ್ತದೆ. ಯಾರು ಎದುರಿಗೆ ಇರುವುದನ್ನು ಪ್ರಕಾಶಿಸುತ್ತಾನೋ ಅವನು ಸೂರ್ಯ, ಯಾರು ಬಲಕ್ಕಿದ್ದುದನ್ನು, ಹಿಂದಿರುವುದನ್ನು, ಎಡಕ್ಕಿರುವುದನ್ನು, ಮೇಲೆ ಇರುವುದನ್ನು ಪ್ರಕಾಶಿಸುತ್ತಾರೋ ಅವನು ಸೂರ್ಯ ಎಂದು ಹೇಳಿದಾಗ ತಿಳಿದು ಬರುವುದು ಸೂರ್ಯನ ಸ್ವರೂಪ ಪ್ರಕಾಶ ಎಂದು. ಕಣ್ಣು ಮೊದಲಾದ ಇಂದ್ರಿಯಗಳು ಇರುವ ಉದ್ದೇಶ ಗ್ರಹಿಕೆಯ ಕ್ರಿಯೆಗಳನ್ನು ಪೂರೈಸುವುದಕ್ಕೆ ಜ್ಞಾನ ಆತ್ಮದ 'ಸತ್' ಮತ್ತು 'ಚಿತ್' ಸ್ವರೂಪದಿಂದ ಬರುವುದು ಆತ್ಮದ ಯಾವುದೊಂದು ಕ್ರಿಯೆಯಿಂದಲ್ಲ. ಹೇಗೆ ಪ್ರಕಾಶಿಸುವ ಕ್ರಿಯೆಯಲ್ಲಿ ಸೂರ್ಯನ 'ಕರ್ತೃತ್ವ' ಅವನ ಉಪಸ್ಥಿತಿ ಮಾತ್ರ, ಅವನ ಯಾವುದೊಂದು ಕೃತಿಯಲ್ಲವೋ ಹಾಗೆ.

ಮನಸ್ಸು ಆತ್ಮದ ದೈವೀ 'ಚಕ್ಷು'. ಅದು ಅಸಾಮಾನ್ಯವಾದದ್ದು ಹಾಗೂ ಉಳಿದ ಇಂದ್ರಿಯಗಳಿಂದ ವಿಶಿಷ್ಟವಾದದ್ದು. ಅದನ್ನು 'ಚಕ್ಷು' ಎಂದು ಕರೆಯುವ ಕಾರಣವೆಂದರೆ, ಆತ್ಮವು ಅದರ ಮೂಲಕ ನೋಡುತ್ತದೆ ('ಚಷ್ಟೇ'). ಇಂದ್ರಿಯಗಳ ವಿಷಯಗಳು ಗ್ರಹಿಕೆಯ ವರ್ತಮಾನದಲ್ಲಿ ಇರುವಂಥವು. ಆದ್ದರಿಂದ ಅವುಗಳಲ್ಲಿ ದೈವಿಕತೆ ಇಲ್ಲ.

ಆದರೆ ಮನಸ್ಸು ಭೂತ, ವರ್ತಮಾನ ಹಾಗೂ ಭವಿಷ್ಯಗಳಿಗೆಲ್ಲವೂ ಸಂಬಂಧಿಸಿದ ವಸ್ತುಗಳನ್ನು ಗ್ರಹಿಸಬಲ್ಲದು - ಅದು ದೋಷಮುಕ್ತವಾದುದು ಹಾಗೂ ಅದು ಸೂಕ್ಷ್ಮವಿರುವ, ದೂರವಿರುವ ವಸ್ತುಗಳನ್ನು ಗ್ರಹಿಸಬಲ್ಲದು. ಆದ್ದರಿಂದಲೇ ಅದನ್ನು ದಿವ್ಯ ಚಕ್ಷು ಎಂದು ಕರೆದಿರುವುದು.]

ಈ ವಿಷಯದಲ್ಲಿ **ಸೂತ್ರಭಾಷ್ಯ** (2-3-12-18) ಹೀಗೆ ಹೇಳುತ್ತದೆ -

ಅಥ ಯೋ ವೇದೇದಂ ಜಿಘ್ರಾಣೀತಿ ಸ ಆತ್ಮಾ ಇತಿ ಚ ಸರ್ವೈಃ ಕರಣದ್ವಾರೈಃ 'ಇದಂ ವೇದ', 'ಇದಂ ವೇದ' ಇತಿ ವಿಜ್ಞಾನೇನ ಅನುಸನ್ಧಾನಾತ್ ತದ್ರೂಪತ್ವಸಿದ್ಧಿಃ । ನಿತ್ಯಸ್ವರೂಪಚೈತನ್ಯತ್ವೇ ಘ್ರಾಣಾದ್ಯಾನರ್ಥಕ್ಯಮಿತಿ ಚೇತ್, ನ । ಗನ್ಧಾದಿವಿಷಯ-ವಿಶೇಷಪರಿಚ್ಛೇದಾರ್ಥತ್ವಾತ್ । ತಥಾಹಿ ದರ್ಶಯತಿ 'ಗನ್ಧಾಯ ಘ್ರಾಣಮ್' ಇತ್ಯಾದಿ ।

[ಆತ್ಮವು ಚಿತ್ ಸ್ವರೂಪವೆನ್ನುವುದು ಈ ಶ್ರುತಿಯ ಆಧಾರದ ಮೇಲೆ ಸ್ಥಾಪಿತವಾಗಿದೆ. - "'ಇದನ್ನು ಮೂಸಿ ನೋಡುವೆನು' ಎಂದು ಗ್ರಹಿಕೆಯುಳ್ಳವನು ಆತ್ಮನ್" - ಇದು 'ಅವನು ಇದನ್ನು ತಿಳಿದಿದ್ದಾನೆ', 'ಅವನು ಇದನ್ನು ಎಲ್ಲ ಇಂದ್ರಿಯಗಳ ಮೂಲಕವೂ ತಿಳಿದಿದ್ದಾನೆ' ಇಂಥ ಅನುಭವಗಳ ಆಧಾರವಾದ 'ಚಿತ್'ನ್ನು ನೆನಪಿಗೆ ತಂದುಕೊಡುತ್ತದೆ. ಆತ್ಮದ ಸ್ವರೂಪ ನಿತ್ಯ ಚೈತನ್ಯವೆನ್ನುವುದು ನಿಜವಿದ್ದರೂ ಅದರಿಂದ ಶ್ರೋತ್ರದಂಥ ಜ್ಞಾನೇಂದ್ರಿಯಗಳು ನಿರುಪಯೋಗಿ ಎಂದು ತಿಳಿಯಬಾರದು. ಯಾಕೆಂದರೆ 'ಗಂಧ' ದಂಥ ವಿಶಿಷ್ಟ ವಸ್ತುಗಳನ್ನು ಗ್ರಹಿಸುವ ವಿಶಿಷ್ಟ ಕಾರ್ಯಗಳನ್ನು ನೆರವೇರಿಸುತ್ತವೆ. 'ಘ್ರಾಣೇಂದ್ರಿಯವು ಗಂಧವನ್ನು ಗ್ರಹಿಸುವುದಕ್ಕಾಗಿದೆ' ಎಂಬ ಶ್ರುತಿವಾಕ್ಯಗಳು ಇದನ್ನು ಸಿದ್ಧಪಡಿಸುತ್ತವೆ.]

ಈ ಸೂತ್ರಭಾಷ್ಯದ ಮೇಲಿನ **ಬ್ರಹ್ಮವಿದ್ಯಾಭರಣವ್ಯಾಖ್ಯಾ** ಹೀಗೆ ಹೇಳುತ್ತದೆ -

ತತ್ರ ಯದಿ 'ಇದಂ ಯೋ ವೇದ' ಇತ್ಯೇವೋಚ್ಯೇತ, ತದಾ ತಾರ್ಕಿಕಾಭಿಮತೋಽನಿತ್ಯಜ್ಞಾನಾಶ್ರಯ ಏವಾತ್ಮಾ ಸಿಧ್ಯೇತ್, ತನ್ಮಾಭೂದಿತಿ, ಗನ್ಧಾದಿಗೋಚರಜ್ಞಾನಾವಭಾಸಕತಯಾ ಆತ್ಮಾ ಲಕ್ಷ್ಯತೇ । ಗನ್ಧಾದಿಗೋಚರಜ್ಞಾನಾನಾಂ ಹಿ ಉತ್ಪತ್ತಿಮಾರಭ್ಯ ಜ್ಞಾತತಾನೈಯತ್ಯಾತ್ ಜನ್ಯಜ್ಞಾನೇನ ತದನುತ್ಪತ್ತೇಃ ತದವಭಾಸಕಂ ನಿತ್ಯಂ ಜ್ಞಾನಂ ಸಿದ್ಧ್ಯತೀತಿ ಸ ಏವಾತ್ಮಾ । ನ ಚ ಯೋ ವೇದೇತಿ ಗನ್ಧಾದಿಗೋಚರಜ್ಞಾನಾಶ್ರಯತಾಯಾಃ ಪ್ರತಿಪಾದನಾತ್

ನಿತ್ಯಜ್ಞಾನಾಶ್ರಯತ್ವೈವಾತ್ಮನಃ ಸಿಧ್ಯೇತ್ ಇತಿ ವಾಚ್ಯಮ್ । ತಾವತಾಪ್ರಕೃತಾಕಾಙ್ಕ್ಷಾನಿವರ್ತನಾಸಂಭವಾತ್ ಜ್ಞಾನಸ್ವರೂಪ-ಬ್ರಹ್ಮಾಭೇದಸ್ಯ ನಿತ್ಯಜ್ಞಾನರೂಪತಯೈವೋಪಪಾದನೀಯತ್ವಾತ್ । ಅತೋ ವೇದೇತಿನಿರ್ದೇಶಃ ಸತ್ತಾಸತೀತಿವತ್ ತಾದಾತ್ಮ್ಯೇನ ವಾ ನಿತ್ಯಜ್ಞಾನರೂಪಸ್ಯೈವಾತ್ಮನೋ ವೃತ್ತ್ಯುಪಾಧಿಕಭೇದಕಲ್ಪನಯಾ ವಾ ದ್ರಷ್ಟವ್ಯ ಇತಿ ನ ಕಾಚಿದನುಪಪತ್ತಿಃ । ಪರಿಚ್ಛೇದೋ ವೃತ್ತಿರೂಪೋ ಜನ್ಯಃ । ತತ್ರ ಚಕ್ಷುರಾದೀನಾಮುಪಯೋಗ ಇತ್ಯರ್ಥಃ । ಗನ್ಧಾಯ ಗನ್ಧಗೋಚರವೃತ್ತ್ಯರ್ಥಮ್ । ದರ್ಶನಾಯ ಚಕ್ಷುಃ, ಶ್ರವಣಾಯ ಶ್ರೋತ್ರಮ್ ಇತ್ಯಾದಿ ಸಮಭಿವ್ಯಾಹಾರಾತ್ ।

[ಶ್ರುತಿಯು 'ಇದನ್ನು ತಿಳಿದಿರುವ ಅವನು' ಎಂದು ಹೇಳಿದರೆ, ಆತ್ಮವು ಅನಿತ್ಯ ಜ್ಞಾನದ ಆಶ್ರಯ ಎಂಬ ತಾರ್ಕಿಕರ ಅಭಿಮತ ಸಿದ್ಧವಾದಂತಾಗುವುದು - ಇದನ್ನು ತಪ್ಪಿಸಲು, ಶ್ರುತಿಯು ವಾಸನೆ ಮೊದಲಾದವುಗಳಿಗೆ ಸಂಬಂಧಿಸಿದ ಜ್ಞಾನವನ್ನು ಪ್ರಕಾಶಿಸುವವನು ಆತ್ಮ ಎಂದು ಸೂಚಿಸುವ ಭಾಷೆಯನ್ನು ಉಪಯೋಗಿಸುತ್ತದೆ. ವಾಸನೆ ಮೊದಲಾದವುಗಳಿಗೆ ಸಂಬಂಧಿಸಿದ 'ಇದು ವಾಸನೆ' ಎಂಬ ಪ್ರತೀತಿ ಅದರ ಉತ್ಪತ್ತಿಯ ನಂತರ ಸತತವಾಗಿ ಗ್ರಹಿಸಲ್ಪಡುತ್ತದೆ. ಒಂದು ವೇಳೆ ಗ್ರಹಿಸುವ ಚೈತನ್ಯವೇ ಉತ್ಪಾದಿತವಾಗಿದ್ದರೆ, ಇದು ಸಾಧ್ಯವಾಗುತ್ತಿರಲಿಲ್ಲ. ಹೀಗೆ ಪ್ರತೀತಿಯನ್ನು ಬೆಳಗುವ ನಿತ್ಯಚೈತನ್ಯದ ಸಿದ್ಧಿಯಾದಂತಾಯಿತು. ಇದೇ ಆತ್ಮ. ಆತ್ಮವನ್ನು ವಾಸನೆ ಮುಂತಾದ ಜ್ಞಾನಗಳ ಆಶ್ರಯವೆಂದು 'ಇದನ್ನು ತಿಳಿದಿರುವ ಅವನು' ಎಂಬ ಶ್ರುತಿ ಹೇಳಿದೆಯೆಂಬ ಕಾರಣಕ್ಕೆ ಆತ್ಮವು ಕೇವಲ ಶಾಶ್ವತ ಜ್ಞಾನದ ಆಶ್ರಯವೆಂದು ಅರ್ಥ ಮಾಡಬಾರದು. ಇಂಥ ಉತ್ತರದಿಂದ ಇಲ್ಲಿ ಪ್ರಕೃತ ಸಮಸ್ಯೆಯ ಅಪೇಕ್ಷೆ ಪೂರೈಸಲಾರದು. ನಿತ್ಯ ಚೈತನ್ಯಸ್ವರೂಪವಾದ ಬ್ರಹ್ಮದೊಡನೆ ಆತ್ಮದ ಐಕ್ಯದ ಸಾಧ್ಯತೆ ಆತ್ಮವೂ ನಿತ್ಯಚೈತನ್ಯಸ್ವರೂಪವೆನ್ನುವ ಅಧಾರದ ಮೇಲೆ ಮಾತ್ರ ಇದೆ.

ಆದ್ದರಿಂದ, 'ತಿಳಿದಿದ್ದಾನೆ' (ವೇದ) ಎಂಬ ಶ್ರುತಿಯ ಪದಪ್ರಯೋಗವನ್ನು 'ಅಸ್ತಿತ್ವ ಇದೆ' ಎಂಬ ವಾಕ್ಯದಲ್ಲಿದ್ದಂತೆ ತಾದಾತ್ಮ್ಯತೆಯನ್ನು ಸೂಚಿಸುವದಕ್ಕಾಗಿ ಅಥವಾ ಭೇದವು ವೃತ್ತಿ ಎಂಬ ಉಪಾಧಿಯಿಂದ ಕಲ್ಪಿತವಾಗಿದ್ದು, ಆತ್ಮ ನಿತ್ಯಚೈತನ್ಯನೇ ಎನ್ನುವುದನ್ನು ತಿಳಿಸುವುದಕ್ಕಾಗಿ. ಇದರಲ್ಲಿ ಅತಾರ್ಕಿಕವಾದುದೇನೂ ಇಲ್ಲ. ವಿಶಿಷ್ಟವನ್ನು ಹೊಂದುವುದರಿಂದ ವೃತ್ತಿ ಹುಟ್ಟಿಕೊಳ್ಳುತ್ತದೆ. ಈ

ಸಂದರ್ಭದಲ್ಲಿಯೇ ಕಣ್ಣು ಇತ್ಯಾದಿಗಳ ಪಾತ್ರ. ಘ್ರಾಣೇಂದ್ರಿಯ ಇರುವುದು ಗಂಧಕ್ಕೆ ಸಂಬಂಧಿಸಿದ ವೃತ್ತಿಯನ್ನು ಹುಟ್ಟಿಸುವುದಕ್ಕಾಗಿ ; 'ಕಣ್ಣು ಇರುವುದು ನೋಡುವುದಕ್ಕಾಗಿ' 'ಶ್ರೋತ್ರ ಇರುವುದು ಕೇಳುವುದಕ್ಕಾಗಿ' ಇಂಥ ವಾಕ್ಯಗಳೊಡನೆ ಇದೂ ಬಂದಿರುವುದರಿಂದ ಈ ವಿಷಯ ಸ್ಪಷ್ಟವಾಗಿದೆ.]

ಮನಸ್ಸು ಮತ್ತು ಇಂದ್ರಿಯಗಳ ಕ್ರಿಯೆಗಳನ್ನು **ಸೂತ್ರಭಾಷ್ಯ** (2-4-1-6) ಹೀಗೆ ಹೇಳಿದೆ.

ಶಬ್ದಸ್ಪರ್ಶರೂಪರಸಗನ್ಧವಿಷಯಾಃ ಪಞ್ಚಬುದ್ಧಿಭೇದಾಃ, ತದರ್ಥಾನಿ ಪಞ್ಚಬುದ್ಧೀಂದ್ರಿಯಾಣಿ ವಚನಾದಾನವಿಹರಣೋತ್ಸ-ರ್ಗಾನನ್ದಾಃ ಪಞ್ಚಕರ್ಮಭೇದಾಸ್ತದರ್ಥಾನಿ ಚ ಪಞ್ಚ ಕರ್ಮೇನ್ದ್ರಿಯಾಣಿ । ಸರ್ವಾರ್ಥವಿಷಯಂ ತ್ರೈಕಾಲ್ಯವೃತ್ತಿ ಮನಸ್ತ್ವೇಕ-ಮನೇಕವೃತ್ತಿಕಮ್ । ತದೇವ ವೃತ್ತಿಭೇದಾತ್ ಕಚಿದಭಿನ್ನವದ್ವ್ಯಪ-ದಿಶ್ಯತೇ ಮನಃ, ಬುದ್ಧಿಃ, ಅಹಙ್ಕಾರಃ, ಚಿತ್ತಂ ಚೇತಿ । ತಥಾ ಚ ಶ್ರುತಿಃ ಕಾಮಾದ್ಯಾ ನಾನಾವಿಧಾ ವೃತ್ತೀರನುಕ್ರಮ್ಯಾಹ 'ಏತತ್ಸರ್ವಂ ಮನ ಏವ' ಇತಿ ।

[ಶಬ್ದ, ಸ್ಪರ್ಶ, ರೂಪ, ರಸ, ಗಂಧ ಎಂಬ ಐದು ಅನುಭವ ವಿಶಿಷ್ಟಗಳಿವೆ ಹಾಗೂ ಇವುಗಳನ್ನು ಗ್ರಹಿಸಲು ಐದು ಜ್ಞಾನೇಂದ್ರಿಯಗಳಿವೆ. ಐದು ವಿಧವಾದ ಕ್ರಿಯೆಗಳಿವೆ - ಮಾತಾಡುವುದು, ಹಿಡಿಯುವುದು, ನಡೆದಾಡುವುದು, ಉತ್ಸರ್ಗ ಹಾಗೂ ಆನಂದ. ಇವುಗಳಿಗಾಗಿ ಐದು ಕರ್ಮೇಂದ್ರಿಯಗಳಿವೆ. ಸರ್ವವೂ ವಿಷಯವಾಗಿರುವ, ಮೂರೂ ಕಾಲಗಳಲ್ಲಿ ಕ್ರಿಯಾಶೀಲವಾಗಿರುವ ಮನಸ್ಸು ಒಂದೇ ಆಗಿದ್ದು ಅನೇಕ ಪರಿವರ್ತನೆಗಳನ್ನು ಅಥವಾ ವೃತ್ತಿಗಳನ್ನು ಹೊಂದಬಲ್ಲದು. ಅದರ ಕ್ರಿಯೆಗಳ ವೈವಿಧ್ಯದಿಂದಾಗಿ ಅದಕ್ಕೆ ಮನಸ್ಸು, ಬುದ್ಧಿ, ಅಹಂಕಾರ, ಚಿತ್ತಗಳೆಂಬ ಬೇರೆ ಬೇರೆ ಹೆಸರುಗಳಿವೆ. 'ಕಾಮ' ದಂಥ ವೃತ್ತಿಗಳನ್ನು ಲೆಕ್ಕಿಸಿದ ನಂತರ ಶ್ರುತಿ ಕೂಡ 'ಇದೆಲ್ಲವೂ ಮನಸ್ಸು ಮಾತ್ರ' ಎಂದು ಹೇಳುತ್ತದೆ.]

**ವಿವೇಕಚೂಡಾಮಣಿ** (95,96) ಹೀಗೆ ಹೇಳುತ್ತದೆ –

ನಿಗದ್ಯತೇಽನ್ತಃಕರಣಂ ಮನೋ

ಧೀರಹಂಕೃತಿಶ್ಚಿತ್ತಮಿತಿ ಸ್ವವೃತ್ತಿಭಿಃ ।

ಮನಸ್ತು ಸಙ್ಕಲ್ಪವಿಕಲ್ಪನಾದಿಭಿರ್ಬುದ್ಧಿಃ

ಪದಾರ್ಥಾಧ್ಯವಸಾಯಧರ್ಮತಃ॥
ಅತ್ರಾಭಿಮಾನಾದಹಮಿತ್ಯಹಂಕೃತಿಃ
ಸ್ವಾರ್ಥಾನುಸಂಧಾನಗುಣೇನ ಚಿತ್ತಮ್ ॥

[ಅಂತಃಕರಣವನ್ನು ಅದರ ಭಿನ್ನ ಭಿನ್ನ ಕ್ರಿಯೆಗಳಿಗನುಸಾರವಾಗಿ ಮನಸ್ಸು, ಬುದ್ಧಿ, ಅಹಂಕಾರ ಅಥವಾ ಚಿತ್ತ ಹೀಗೆ ಬೇರೆ ಬೇರೆ ಹೆಸರುಗಳಿಂದ ಕರೆಯಲಾಗಿದೆ. ಅನುಕೂಲ, ಪ್ರತಿಕೂಲಗಳನ್ನು ಗಮನಿಸುವುದು ಮನಸ್ಸು, ವಸ್ತುಗಳ ನಿಜವಾದ ಸ್ವರೂಪವನ್ನು ನಿಶ್ಚಯಿಸುವುದು ಬುದ್ಧಿ ; ದೇಹವನ್ನೇ ತಾನು, ತನ್ನ ಆತ್ಮ ಎಂದು ತಾದಾತ್ಮ್ಯಹೊಂದುವುದು ಅಹಂಕಾರ ; ತನಗೆ ಆಸ್ಥೆಯಿರುವ ವಿಷಯಗಳನ್ನು ನೆನಪಿಡುವುದು ಚಿತ್ತ.]

### 7.1.10 ಅಂತಃಕರಣ - ಸ್ವೀಕಾರದ ಆವಶ್ಯಕತೆ

ಕರ್ಮೇಂದ್ರಿಯ, ಜ್ಞಾನೇಂದ್ರಿಯಗಳನ್ನಲ್ಲದೆ ಅಂತಃಕರಣವನ್ನೂ ಸ್ವೀಕರಿಸುವ ಆವಶ್ಯಕತೆಯನ್ನು **ಸೂತ್ರ** (2-3-13-32) ಹಾಗೂ ಅದರ ಮೇಲಿನ **ಭಾಷ್ಯ** ತೋರಿಸುತ್ತವೆ -

ನಿತ್ಯೋಪಲಬ್ಧ್ಯನುಪಲಬ್ಧಿಪ್ರಸಙ್ಗೋऽನ್ಯತರನಿಯಮೋ ವಾನ್ಯಥಾ ।

ತಚ್ಚೈವಂಭೂತಮನ್ತಃಕರಣಮವಶ್ಯಮಸ್ತೀತ್ಯಭ್ಯುಪಗನ್ತವ್ಯಮ್ । ಅನ್ಯಥಾ ಹ್ಯನಭ್ಯುಪಗಮ್ಯಮಾನೇ ತಸ್ಮಿನ್ ನಿತ್ಯೋಪಲಬ್ಧ್ಯನುಪಲಬ್ಧಿಪ್ರಸಙ್ಗಃ ಸ್ಯಾತ್ । ಆತ್ಮೇನ್ದ್ರಿಯವಿಷಯಾಣಾಮುಪಲಬ್ಧಿಸಾಧನಾನಾಂ ಸನ್ನಿಧಾನೇ ಸತಿ ನಿತ್ಯಮೇವೋಪಲಬ್ಧಿಃ ಪ್ರಸಜ್ಯೇತ । ಅಥ ಸತ್ಯಪಿ ಹೇತುಸಮವಧಾನೇ ಫಲಾಭಾವಸ್ತತೋ ನಿತ್ಯಮೇವಾನುಪಲಬ್ಧಿಃ ಪ್ರಸಜ್ಯೇತ । ನ ಚೈವಂ ದೃಶ್ಯತೇ । ಅಥವಾ ಅನ್ಯತರಸ್ಯಾತ್ಮನ ಇನ್ದ್ರಿಯಸ್ಯ ವಾ ಶಕ್ತಿಪ್ರತಿಬಂಧೋऽಭ್ಯುಪಗನ್ತವ್ಯಃ । ನ ಚಾತ್ಮನಃ ಶಕ್ತಿಪ್ರತಿಬನ್ಧಃ ಸಂಭವತಿ । ಅವಿಕ್ರಿಯತ್ವಾತ್ । ನಾಪೀನ್ದ್ರಿಯಸ್ಯ । ನ ಹಿ ತಸ್ಯ ಪೂರ್ವೋತ್ತರಯೋಃ ಕ್ಷಣಯೋರಪ್ರತಿಬದ್ಧಶಕ್ತಿಕಸ್ಯ ಸತೋ ಅಕಸ್ಮಾಚ್ಛಕ್ತಿಃ ಪ್ರತಿಬಧ್ಯೇತ । ತಸ್ಮಾದ್ಯಸ್ಯಾವಧಾನಾನವಧಾನಾಭ್ಯಮುಪಲಬ್ಧ್ಯನುಪಲಬ್ಧೀ ಭವತಃ ತನ್ಮನಃ । ತಥಾ ಚ ಶ್ರುತಿಃ 'ಅನ್ಯತ್ರಮನಾ ಅಭೂವಂ ನಾದರ್ಶಮನ್ಯತ್ರಮನಾ ಅಭೂವಂ ನಾಶ್ರೋಷಮ್' ಇತಿ, 'ಮನಸಾ ಹ್ಯೇವ ಪಶ್ಯತಿ ಮನಸಾ ಶೃಣೋತಿ' ಇತಿ ।

[ಮನಸ್ಸು ಎಂಬುದಿದೆಯೆಂದು ಒಪ್ಪಿಕೊಳ್ಳದೇ ಹೋದರೆ ಅರಿವಿನ ಕ್ರಿಯೆ ಸತತವಾಗಿ ನಡೆದಿರಬೇಕಾಗುತ್ತದೆ ; ಇಲ್ಲವೇ ನಿತ್ಯವೂ ಅದರ ಅಭಾವವಿರಬೇಕಾಗುತ್ತದೆ ; ಅಥವಾ, ಆತ್ಮ ಮತ್ತು ಇಂದ್ರಿಯಗಳ ಶಕ್ತಿಗೆ ಪ್ರತಿಬಂಧ ಬರಬೇಕಾಗುತ್ತದೆ.

ಆದ್ದರಿಂದ ಮನಸ್ಸು ಎಂಬುದಿದೆ ಎನ್ನುವುದನ್ನು ಅನಿವಾರ್ಯವಾಗಿ ಸ್ವೀಕರಿಸಬೇಕಾಗುತ್ತದೆ. ಇಲ್ಲವಾದರೆ, ಸದಾಕಾಲವೂ ಗ್ರಹಿಕೆ ಅಥವಾ ಸದಾ ಅದರ ಅಭಾವ ಉಂಟಾಗುವ ಪ್ರಸಂಗ ಬರುತ್ತದೆ. ಯಾಕೆಂದರೆ, ಗ್ರಹಿಕೆಗೆ ಅವಶ್ಯವಿರುವ ಸಾಧನಗಳು - ಆತ್ಮ, ಇಂದ್ರಿಯಗಳು ಹಾಗೂ ವಸ್ತುಗಳು - ಸಂಪರ್ಕದಲ್ಲಿರುವಾಗ ಗ್ರಹಿಕೆ ಯಾವಾಗಲೂ ಸಿದ್ಧಿಸಲೇಬೇಕು. ಇಲ್ಲವಾದರೆ ಗ್ರಹಿಕೆಗೆ ಅವಶ್ಯವಿರುವ ಎಲ್ಲ ಕಾರಣ ಫಲಕಗಳು ಸಂಪರ್ಕದಲ್ಲಿದ್ದರೂ, ಸದಾಕಾಲವೂ ಗ್ರಹಿಕೆಯ ಪ್ರಸಂಗ ಎದುರಾಗುತ್ತದೆ. ಆದರೆ, ಅನುಭವದಲ್ಲಿ ಹೀಗಾಗುವುದು ಕಂಡುಬಂದಿಲ್ಲ. ಹೀಗಾಗಿ ಆತ್ಮದ ಶಕ್ತಿಗಾಗಲಿ, ಜ್ಞಾನೇಂದ್ರಿಯಗಳ ಶಕ್ತಿಗಾಗಲಿ ಪ್ರತಿಬಂಧಗಳನ್ನು ಒಪ್ಪಬೇಕಾಗುತ್ತದೆ. ಆದರೆ, ಆತ್ಮವು ಎಂದಿಗೂ ಬದಲಾಗದುದರಿಂದ ಅವನ ಶಕ್ತಿಗೆ ಪ್ರತಿಬಂಧಗಳಿರುವುದು ಸಾಧ್ಯವಿಲ್ಲ. ಇಂದ್ರಿಯಗಳ ಶಕ್ತಿಗೆ ಪ್ರತಿಬಂಧಗಳನ್ನು ಕಲ್ಪಿಸಲೂ ಆಗುವುದಿಲ್ಲ. ಹಿಂದು, ಮುಂದಿನ ಯಾವ ಕ್ಷಣಗಳಲ್ಲಿ ಕಾಣದ ಪ್ರತಿಬಂಧ ಮಧ್ಯದಲ್ಲಿ ಯಾವುದೇ ಕಾರಣವಿಲ್ಲದೆ ಬರುತ್ತದೆ ಎಂದು ಹೇಳಲಾಗದು. ಯಾವುದರ ಅವಧಾನ ಮತ್ತು ಅನವಧಾನಗಳ ಕಾರಣದಿಂದಾಗಿ ಅರಿವು ಅಥವಾ ಅದರ ಅಭಾವದ ಉಪಲಬ್ಧಿಯಾಗುತ್ತದೆಯೋ ಅದೇ ಮನಸ್ಸು. ಶ್ರುತಿ ಹೀಗೆ ಸಾರಿದೆ - ' ನನ್ನ ಮನಸ್ಸು ಬೇರೆ ಕಡೆಯಲ್ಲಿದ್ದಿತು, ಆದ್ದರಿಂದ ನಾನು ನೋಡಲಿಲ್ಲ', ಹಾಗೂ 'ನನ್ನ ಮನಸ್ಸು ಬೇರೆ ಕಡೆಯಲ್ಲಿದ್ದಿತು ಆದ್ದರಿಂದ ನಾನು ಕೇಳಲಿಲ್ಲ' ಮತ್ತು 'ಮನಸ್ಸಿನಿಂದಲೇ ನೋಡುತ್ತಾನೆ, ಮನಸ್ಸಿನಿಂದಲೇ ಕೇಳುತ್ತಾನೆ']

## 7.1.11 ಜ್ಞಾನದ ಸಾಕ್ಷಾತ್ಕಾರದ ವರೆಗೂ ಆತ್ಮನಿಗೆ ಅಂತಃಕರಣದ ಸಂಬಂಧವಿರುತ್ತದೆ.

ಅಂತಃಕರಣದೊಡನಿರುವ ಆತ್ಮದ ಸಂಬಂಧ, (ಸುಷುಪ್ತಿಯಲ್ಲಿ ಅಥವಾ ಪ್ರಳಯದಲ್ಲಿಯೂ ಬೀಜರೂಪದಲ್ಲಿ

ದೊರಕುವ) ಸಮ್ಯಕ್ ಜ್ಞಾನದ ಸಾಕ್ಷಾತ್ಕಾರವಾಗುವ ವರೆಗೂ ಇರುತ್ತದೆ. ಇದನ್ನು **ಸೂತ್ರ** (23-3-13-30, 31) ತೋರಿಸಿದೆ. **ಭಾಷ್ಯ** ಹೀಗೆ ಹೇಳುತ್ತದೆ -

ಯಾವದಯಮಾತ್ಮಾ ಸಂಸಾರೀ ಭವತಿ, ಯಾವದಸ್ಯ ಸಮ್ಯಗ್ದರ್ಶನೇನ ಸಂಸಾರಿತ್ವಂ ನ ನಿವರ್ತತೇ, ತಾವದಸ್ಯ ಬುದ್ಧ್ಯಾ ಸಂಯೋಗೋ ನ ಶಾಮ್ಯತಿ । ಯಾವದೇವ ಚಾಯಂ ಬುದ್ಧ್ಯುಪಾಧಿಸಂಬಂಧಸ್ತಾವಜ್ಜೀವಸ್ಯ ಜೀವತ್ವಂ ಸಂಸಾರಿತ್ವಂ ಚ । ಪರಮಾರ್ಥತಸ್ತು ನ ಜೀವೋ ನಾಮ ಬುದ್ಧ್ಯುಪಾಧಿಸಂಬನ್ಧ-ಪರಿಕಲ್ಪಿತಸ್ವರೂಪವ್ಯತಿರೇಕೇಣಾಸ್ತಿ।

ಈ ಸಂದರ್ಭದಲ್ಲಿ ಉದ್ಧೃತವಾದ ಶ್ರುತಿ ಹೀಗಿದೆ –

"ಯೋಽಯಂ ವಿಜ್ಞಾನಮಯಃ ಪ್ರಾಣೇಷು ಹೃದ್ಯನ್ತರ್ಜ್ಯೋತಿಃ ಪುರುಷಃ ಸಮಾನಃ ಸನ್ನುಭೌಲೋಕಾವನುಸಞ್ಚರತಿ ಧ್ಯಾಯತೀವ ಲೇಲಾಯತೀವ ।"

**ಭಾಷ್ಯ** ಮುಂದುವರೆದು ಹೀಗೆ ಹೇಳುತ್ತದೆ –

ಬುದ್ಧಿಮಯತ್ವಂ ಚ ತದ್ಗುಣಸಾರತ್ವಮೇವಾಭಿಪ್ರೇಯತೇ ।

(ನೋಡಿರಿ: ಬ್ರ. ಸೂ 2-3-13-29)

ಏತದುಕ್ತಂ ಭವತಿ – ನಾಯಂ ಸ್ವತೋ ಧ್ಯಾಯತಿ, ನಾಪಿ ಚಲತಿ, ಧ್ಯಾಯನ್ತ್ಯಾಂ ಬುದ್ಧೌ ಧ್ಯಾಯತೀವ, ಚಲನ್ತ್ಯಾಂ ಬುದ್ಧೌ ಚಲತೀವೇತಿ । ಅಪಿ ಚ ಮಿಥ್ಯಾಜ್ಞಾನಪುರಸ್ಸರೋಽಯಮಾತ್ಮನೋ ಬುದ್ಧ್ಯುಪಾಧಿಸಂಬನ್ಧಃ । ನಚ ಮಿಥ್ಯಾಜ್ಞಾನಸ್ಯ ಸಮ್ಯಗ್‌ಜ್ಞನಾದ-ನ್ಯತ್ರ ನಿವೃತ್ತಿರಸ್ತಿ । ...........ಅಯಮಪಿ ಬುದ್ಧಿಸಂಬನ್ಧಃ ಶಕ್ತ್ಯಾತ್ಮನಾ ವಿದ್ಯಮಾನ ಏವ ಸುಷುಪ್ತಪ್ರಲಯಯೋಃ ಪುನಃ ಪ್ರಬೋಧಪ್ರಸವಯೋರಾವಿರ್ಭವತಿ ।

[ಎಲ್ಲಿಯ ವರೆಗೆ ಪುನರ್ಜನ್ಮವು ಆತ್ಮದೊಂದಿಗೆ ಸಂಬಂಧ ಹೊಂದಿದೆಯೋ, ಮತ್ತು ಸಾಕ್ಷಾತ್ಕಾರದ ಕಾರಣವಾಗಿ ಕೊನೆಗೊಳ್ಳುವುದಿಲ್ಲವೋ ಅಲ್ಲಿಯ ವರೆಗೆ ಬುದ್ಧಿಯೊಡನೆ ಆತ್ಮದ ಸಂಬಂಧ ಮುಗಿಯುವುದಿಲ್ಲ. ಹಾಗೂ ಎಲ್ಲಿಯವರೆಗೆ ಬುದ್ಧಿ ಎಂಬ ಉಪಾಧಿಯಿಂದ ಸೀಮಿತನಾಗಿರುತ್ತಾನೋ ಅಲ್ಲಿಯ ವರೆಗೆ ಅವನ ಜೀವತ್ವ ಹಾಗೂ ಅದರ ಸಂಸಾರೀ ಸ್ವರೂಪ ಅಸ್ತಿತ್ವದಲ್ಲಿರುತ್ತದೆ.

ವಾಸ್ತವದಲ್ಲಿ ಬುದ್ಧಿಯೆಂಬ ಉಪಾಧಿಯಿಂದ ಸೀಮಿತವಾದ ಕಲ್ಪಿತ ಅಸ್ತಿತ್ವದಿಂದ ಸ್ವತಂತ್ರವಾದ 'ಜೀವ' ಎನ್ನುವುದಿಲ್ಲವೇ ಇಲ್ಲ.

ಶ್ರುತಿ ಹೀಗೆ ಹೇಳುತ್ತದೆ - 'ಇಂದ್ರಿಯಗಳ ಮಧ್ಯದಲ್ಲಿ ಬುದ್ಧಿಯೊಡನೆ ತಾದಾತ್ಮ್ಯಹೊಂದಿದ ಈ ಅನಂತವಾದ, ಹೃದಯದಲ್ಲಿ ಜ್ಯೋತಿಯಾಗಿರುವ ಪುರುಷನು ಬುದ್ಧಿಯ ರೂಪವನ್ನು ತಾಳಿ ಎರಡು ಲೋಕಗಳಲ್ಲಿಯೂ ಸಂಚಾರ ಮಾಡುತ್ತಿರುತ್ತಾನೆ. ಅವನು ಧ್ಯಾನ ಮಾಡುತ್ತಿರುವಂತೆಯೂ ಕಾಣುತ್ತಾನೆ, ಚಲಿಸುತ್ತಿರುವಂತೆಯೂ ತೋರುತ್ತಾನೆ.' ಬುದ್ಧಿಯೊಡನೆ ತಾದಾತ್ಮ್ಯವೆಂದರೆ ಬುದ್ಧಿಯ ಗುಣಗಳ ಪ್ರಾಚುರ್ಯ. ಇಲ್ಲಿ ಸೂಚಿತವಾದ ವಿಚಾರ ಹೀಗಿದೆ - ತಾನಾಗಿ ಅವನು ಚಿಂತಿಸುವುದಿಲ್ಲ, ಚಲಿಸುವುದೂ ಇಲ್ಲ. ಆದರೆ ಬುದ್ಧಿ ವಿಚಾರ ಮಾಡಿದಾಗ ಅವನೂ ವಿಚಾರ ಮಾಡುತ್ತಿರುವಂತೆ ಕಾಣುತ್ತಾನೆ. ಬುದ್ಧಿ ಚಲಿಸಿದಾಗ ಅವನೂ ಚಲಿಸುತ್ತಿರುವಂತೆ ತೋರುತ್ತಾನೆ. ಇದಲ್ಲದೆ, ಬುದ್ಧಿಯೊಡನೆ ಆತ್ಮದ ಸಂಬಂಧಕ್ಕೆ ಮಿಥ್ಯಾಜ್ಞಾನವೇ ಕಾರಣ. ಸಮ್ಯಕ್ ಜ್ಞಾನದಿಂದಲ್ಲದೆ ಬೇರೆ ಯಾವುದರಿಂದಲೂ ಈ ಸಂಬಂಧ ಹೋಗಲಾರದು...

ಹಾಗೆಯೇ, ನಿದ್ರೆ ಹಾಗೂ ಪ್ರಳಯಗಳಲ್ಲಿ ಈ ಸಂಬಂಧ ಸುಪ್ತವಾಗಿದ್ದುಕೊಂಡು ಎಚ್ಚರ ಹಾಗೂ ಸೃಷ್ಟಿಕಾಲದಲ್ಲಿ ಮತ್ತೆ ತಲೆ ಎತ್ತುತ್ತದೆ.]

### 7.1.12 ಮುಖ್ಯ ಪ್ರಾಣ

ಸೂಕ್ಷ್ಮಶರೀರವು ಮನಸ್ಸು ಮತ್ತು ಪ್ರಾಣವೆಂದೂ ಹೆಸರಿಸುವ ಹತ್ತು ಇಂದ್ರಿಯಗಳನ್ನಲ್ಲದೆ, ಪ್ರಾಣ, ಅಪಾನ, ವ್ಯಾನ, ಉದಾನ ಹಾಗೂ ಸಮಾನ ಎಂದು ಕಾರ್ಯಗತವಾದ ಮುಖ್ಯಪ್ರಾಣನನ್ನೂ ಒಳಗೊಳ್ಳುತ್ತದೆ. **ಸೂತ್ರಭಾಷ್ಯ** (2-4-5-12) ಹೀಗೆ ಹೇಳಿದೆ -

ವೃತ್ತಿಭೇದಶ್ಚಾಯಂ ಕಾರ್ಯಭೇದಾಪೇಕ್ಷಃ । ಪ್ರಾಣಃ ಪ್ರಾಗ್ವೃತ್ತಿರುಚ್ಛ್ವಾಸಾದಿಕರ್ಮಾ । ಅಪಾನೋಽರ್ವಾಗ್ವೃತ್ತಿರ್ನಿಶ್ವಾಸಾ-ದಿಕರ್ಮಾ । ವ್ಯಾನಸ್ತಯೋಃ ಸನ್ಧೌ ವರ್ತಮಾನೋ ವೀರ್ಯವತ್ಕರ್ಮ-ಹೇತುಃ । ಉದಾನ ಊರ್ಧ್ವವೃತ್ತಿರುತ್ಕ್ರಾನ್ತ್ಯಾದಿಹೇತುಃ। ಸಮಾನಃ ಸಮಂ ಸರ್ವೇಷ್ವಙ್ಗೇಷು ಯೋಽನ್ನರಸಾನ್ನಯತೀತಿ ।

**ವಿವೇಕಚೂಡಾಮಣಿ** (97) ಹೀಗೆ ಹೇಳುತ್ತದೆ -

ಪ್ರಾಣಾಪಾನವ್ಯಾನೋದಾನಸಮಾನಾ ಭವತ್ಯಸೌ ಪ್ರಾಣಃ ।
ಸ್ವಯಮೇವ ವೃತ್ತಿಭೇದಾದ್ವಿಕೃತೇರ್ಭೇದಾತ್ಸುವರ್ಣಸಲಿಲಮಿವ ॥

[ಬೇರೆ ಬೇರೆ ಕಾರ್ಯಗಳನ್ನನುಲಕ್ಷಿಸಿ (ಮುಖ್ಯಪ್ರಾಣದ) ಐದು ವೃತ್ತಿಗಳನ್ನು ಹೇಳಲಾಗಿದೆ. ಪ್ರಾಣವೆಂದರೆ, ನಿಃಶ್ವಾಸ ಮೊದಲಾದ ಕರ್ಮಗಳುಳ್ಳ ಮುಂದೆ ಹೋಗುವ ವೃತ್ತಿ ; ಅಪಾನವೆಂದರೆ ಉಚ್ಛ್ವಾಸ ಮೊದಲಾದ ಕರ್ಮಗಳಿರುವ ಹಿಂದೆ ಸರಿಯುವ ವೃತ್ತಿ ; ವ್ಯಾನ ಇವೆರಡರ ನಡುವೆ ಇರುವುದು ; ಅದು ಶಕ್ತಿಯಿಂದ ಕೆಲಸಗಳನ್ನು ಮಾಡುವ ವೃತ್ತಿ ; ಉದಾನದ ವೃತ್ತಿ ಮೇಲೇರುವುದು, ಇದು ದೇಹತ್ಯಾಗ ಮುಂತಾದ ಕ್ರಿಯೆಗಳಿಗೆ ಕಾರಣ. ಸಮಾನ ಆಹಾರದ ಸಾರವನ್ನು ಎಲ್ಲ ಅವಯವಗಳಿಗೆ ಸಮಾನವಾಗಿ ತಲುಪಿಸುವ ಕಾರ್ಯ ಮಾಡುತ್ತದೆ.

ಸುವರ್ಣ, ನೀರುಗಳಂತೆ ಪ್ರಾಣ ಒಂದೇ ಆದರೂ ವಿವಿಧ ಪ್ರಕಾರದ ಕ್ರಿಯೆಗಳಿಗೆ ಅನುಕೂಲವಾಗಿ ಪ್ರಾಣ, ಅಪಾನ, ವ್ಯಾನ, ಉದಾನ ಹಾಗೂ ಸಮಾನ ಎಂದಾಗುತ್ತದೆ.]

### 7.1.13 ಸೂಕ್ಷ್ಮ ಶರೀರ

ಸೂಕ್ಷ್ಮ ಘಟಕಗಳುಳ್ಳ (ಅಣವಶ್ಚ ಇ.) ಈ ಸೂಕ್ಷ್ಮ ಶರೀರವನ್ನು ಕುರಿತು **ಸೂತ್ರಭಾಷ್ಯ** (2-4-2-6) ಸ್ಮೃತಿಯನ್ನುದ್ಧರಿಸಿ ಹೀಗೆ ಹೇಳಿದೆ –

**ತಥಾ ಚ ಸ್ಮೃತಿಃ** -

ಪುರ್ಯಷ್ಟಕೇನ ಲಿಙ್ಗೇನ ಪ್ರಾಣಾದ್ಯೇನ ಸ ಯುಜ್ಯತೇ ।
ತೇನ ಬದ್ಧಸ್ಯ ವೈ ಬನ್ಧೋ ಮೋಕ್ಷೋ ಮುಕ್ತಸ್ಯ ತೇನ ಚ ॥

[ಅವನು ಎಂಟು ಘಟಕಗಳುಳ್ಳ ಪ್ರಾಣ ಇತ್ಯಾದಿ ಲಿಂಗಶರೀರದೊಡನೆ ಕೂಡಿರುತ್ತಾನೆ. ಇದರ ಬಂಧನದಲ್ಲಿರುವುದೇ ಅವನ ಬಂಧನ, ಅವನ ಮುಕ್ತಿ ಇದರಿಂದ ಬಿಡುಗಡೆಯಲ್ಲಿದೆ.]

**ವಿವೇಕಚೂಡಾಮಣಿ** (98, 99) ಹೀಗೆ ಹೇಳುತ್ತದೆ -

ವಾಗಾದಿಪಞ್ಚ ಶ್ರವಣಾದಿಪಞ್ಚ
ಪ್ರಾಣಾದಿಪಞ್ಚಾಭ್ರಮುಖಾನಿ ಪಞ್ಚ ।

ಬುದ್ಧ್ಯಾದ್ಯವಿದ್ಯಾಪಿ ಚ ಕಾಮಕರ್ಮಣೀ
ಪುರ್ಯಷ್ಟಕಂ ಸೂಕ್ಷ್ಮಶರೀರಮಾಹುಃ॥
॥ 98 ॥

ಇದಂ ಶರೀರಂ ಶೃಣು ಸೂಕ್ಷ್ಮಸಂಜ್ಞಿತಂ
ಲಿಙ್ಗನ್ತ್ವಪಞ್ಚೀಕೃತಭೂತಸಂಭವಮ್।
ಸವಾಸನಂ ಕರ್ಮಫಲಾನುಭಾವಕಂ
ಸ್ವಾಜ್ಞಾನತೋಽನಾದಿರುಪಾಧಿರಾತ್ಮನಃ ॥
॥99॥

[ವಾಕ್ ಮೊದಲಾದ ಐದು ಕರ್ಮೇಂದ್ರಿಯಗಳು, ಶ್ರೋತ್ರ ಮೊದಲಾದ ಐದು ಜ್ಞಾನೇಂದ್ರಿಯಗಳು, ಐದು ಪ್ರಾಣಗಳು, ಆಕಾಶ ಮೊದಲಾದ ಐದು ಭೂತಗಳು, ಬುದ್ಧಿ ಮೊದಲಾದ ನಾಲ್ಕು ಆಯಾಮಗಳುಳ್ಳ ಅಂತಃಕರಣ, ಅವಿದ್ಯಾ, ಕಾಮ, ಕರ್ಮ - ಈ ಎಂಟು ಘಟಕಗಳಿಂದ ಸೂಕ್ಷ್ಮಶರೀರ ಘಟಿತವಾಗಿದೆಯೆಂದು ಹೇಳುತ್ತಾರೆ.

ಸೂಕ್ಷ್ಮವಾದದ್ದು ಎಂದು ಗುರುತಿಸಲಾದ ಈ ಶರೀರವು **ಲಿಂಗಶರೀರ**. ಇದು ಅಪಂಚೀಕೃತ ಭೂತಗಳಿಂದ ಹುಟ್ಟಿದ್ದು ವಾಸನೆಗಳನ್ನು ಹೊಂದಿರುತ್ತದೆ, ಕರ್ಮಗಳ ಫಲವನ್ನು ಅನುಭವಿಸುತ್ತದೆ, ಆತ್ಮವಿಷಯದ ಅಜ್ಞಾನದಿಂದ ಎದ್ದು ಬಂದಿರುವುದು. ಆತ್ಮನಲ್ಲಿ ಅಧ್ಯಾರೋಪಿತವಾದ ಅನಾದಿಯಾದ ಉಪಾಧಿಯು.]

**ಮಾನಸೋಲ್ಲಾಸ**ವು ಪಂಚೀಕರಣವನ್ನು ಅನೇಕ ಸಲ ಉಲ್ಲೇಖಿಸಿ ಹೀಗೆಯೂ ಹೇಳಿದೆ –

ಅಪಞ್ಚೀಕೃತಪಞ್ಚಮಹಾಭೂತಾನಿ ಪಞ್ಚತನ್ಮಾತ್ರಾಣಿ । ತತ್ಕಾರ್ಯಂ ಚ ಪಞ್ಚ ಪ್ರಾಣಾಃ, ದಶೇನ್ದ್ರಿಯಾಣಿ ಮನೋ, ಬುದ್ಧಿಶ್ಚೇತಿ ಸಪ್ತದಶಕಂ ಲಿಙ್ಗಂ ಭೌತಿಕಂ ಹಿರಣ್ಯಗರ್ಭ ಇತ್ಯುಚ್ಯತೇ । ಏತತ್ಸೂಕ್ಷ್ಮಶರೀರಮಾತ್ಮನಃ ।

[ಅಪಂಚೀಕೃತವಾದ ಭೂತಗಳು ಐದು ತನ್ಮಾತ್ರೆಗಳು ಇವುಗಳ ಕಾರ್ಯಗಳಾದ ಲಿಂಗಶರೀರ ಭೌತಿಕವಾಗಿದ್ದು ಅದರಲ್ಲಿ ಹದಿನೇಳು ಘಟಕಗಳಿರುತ್ತವೆ - ಐದು ಪ್ರಾಣಗಳು, ಹತ್ತು ಇಂದ್ರಿಯಗಳು, ಮನಸ್ಸು ಹಾಗೂ ಬುದ್ಧಿ. ಇದನ್ನು ಹಿರಣ್ಯಗರ್ಭನೆಂದು ಕರೆಯುತ್ತಾರೆ. ಇದು ಆತ್ಮದ ಸೂಕ್ಷ್ಮಶರೀರ.]

ಪ್ರಾಣಗಳು ಇತ್ಯಾದಿಗಳು ಉತ್ಪಾದಿತ ವಿಷಯಗಳು ಎನ್ನುವುದಕ್ಕೆ ಶ್ರುತಿಗಳ ಆಧಾರವಿದೆ.

ಏತಸ್ಮಾಜ್ಜಾಯತೇ ಪ್ರಾಣೋ ಮನಸ್ಸರ್ವೇನ್ದ್ರಿಯಾಣಿ ಚ ।

(ಕೈ.ಉ. ; ಮುಂ.ಉ. 2-1-3)

**ಪ್ರಶ್ನೋಪನಿಷದ್** (2-3,4) ಹೀಗೆ ಹೇಳುತ್ತದೆ - ಮುಖ್ಯಪ್ರಾಣ ತನ್ನನ್ನು ಐದು ವಿಧವಾಗಿ ವಿಭಾಗಿಸಿಕೊಂಡು, ದೇಹದ ಸಮಗ್ರತೆಯನ್ನು ಕಾಯ್ದುಕೊಳ್ಳುತ್ತದೆ ಹಾಗೂ ಅದಕ್ಕೆ ಆಧಾರವಾಗಿದೆ ; ಅದು ದೇಹವನ್ನು ಬಿಟ್ಟು ಹೋದಾಗ ಉಳಿದವುಗಳೂ ಹೋಗುತ್ತವೆ. ಅದು ದೇಹದಲ್ಲಿದ್ದಾಗ ಅದನ್ನನುಸರಿಸಿ ಉಳಿದವೂ ಇರುತ್ತವೆ.

ಅಹಮೇವೈತತ್ಪಞ್ಚಧಾತ್ಮಾನಂ ಪ್ರವಿಭಜ್ಯೈತದ್ಬಾಣಮ-ವಷ್ಟಭ್ಯ ವಿಧಾರಯಾಮಿ । ತಸ್ಮಿನ್ನುತ್ಕ್ರಾಮತ್ಯಥೇತರೇ ಸರ್ವ ಏವೋತ್ಕ್ರಾಮನ್ತೇ । ತಸ್ಮಿಂಶ್ಚ ಪ್ರತಿಷ್ಠಮಾನೇ ಸರ್ವ ಏವ ಪ್ರಾತಿಷ್ಠನ್ತೇ ।

### 7.1.14 ಕ್ರಿಯೆ ಮತ್ತು ಗ್ರಹಿಕೆ - ಪ್ರಾಣ, ಪ್ರಜ್ಞಾ, ಚೈತನ್ಯ

ಜೀವನ ಎಲ್ಲ ಕ್ರಿಯೆಗಳಿಗೂ - ಅವನು ದೇಹದಲ್ಲಿದ್ದಾಗ, ದೇಹವನ್ನು ಬಿಟ್ಟು ಹೋಗುವಾಗ, ಮತ್ತು ನಂತರ ಅವನ ಪ್ರವಾಸ - ಈ ಎಲ್ಲಕ್ಕೂ ಪ್ರಾಣವನ್ನು ಉಪಾಧಿಯಾಗಿ ಹೊಂದಿದ ಚೈತನ್ಯವೇ ಕಾರಣ. **ಕೌಷೀತಕಿ ಉಪನಿಷದ್** ಕೂಡ ಹೀಗೆ ಹೇಳುತ್ತದೆ -

'ಪ್ರಾಣೋಸ್ಮಿ ಪ್ರಜ್ಞಾತ್ಮಾ' (3-2) 'ಅಥ ಖಲು ಪ್ರಾಣ ಏವ ಪ್ರಜ್ಞಾತ್ಮೇದಂ ಶರೀರಂ ಪರಿಗೃಹ್ಯೋತ್ಥಾಪಯತಿ' (3-3) | 'ಯೋ ವೈ ಪ್ರಾಣಃ ಸಾ ಪ್ರಜ್ಞಾ, ಯಾ ವಾ ಪ್ರಜ್ಞಾ ಸ ಪ್ರಾಣಃ । ಸ ಹ ಹ್ಯೇತಾವಸ್ಮಿಞ್ಛರೀರೇ ವಸತಃ ಸಹೋತ್ಕ್ರಾಮತಃ I' (3-4)

[ನಾನು ಇಂದ್ರ, ಪ್ರಾಣನು, ಪ್ರಜ್ಞೆಯಾಗಿರುವ ಆತ್ಮನು. ಪ್ರಾಣವು ಪ್ರಜ್ಞೆಯೊಡನೆ ಸೇರಿಕೊಂಡು ದೇಹವನ್ನು ಹಿಡಿದು ಅದನ್ನು ಮೇಲೇಳುವಂತೆ ಮಾಡುತ್ತದೆ. ಯಾವುದು ಪ್ರಾಣವೋ ಅದೇ ಪ್ರಜ್ಞೆ, ಯಾವುದು ಪ್ರಜ್ಞೆಯೋ ಅದೇ ಪ್ರಾಣ. ಯಾಕೆಂದರೆ ಅವು ದೇಹದಲ್ಲಿ ಕೂಡಿಯೇ ಇರುತ್ತವೆ ಹಾಗೂ ಒಟ್ಟಿಗೆಯೇ ಅದನ್ನು ಬಿಟ್ಟು ಹೋಗುತ್ತವೆ.]

**ಸೂತ್ರಭಾಷ್ಯ** (1-1-11-31) ತೋರಿಸುವ ಹಾಗೆ - ಜ್ಞಾನಶಕ್ತಿ ಹಾಗೂ ಕ್ರಿಯಾಶಕ್ತಿಗಳಿಗೆ ಆಶ್ರಯಗಳಾದ ಮನಸ್ಸು ಹಾಗೂ ಪ್ರಾಣಗಳು

ಆತ್ಮದ ಉಪಾಧಿಗಳು. ಅವು ಬೇರೆ ಬೇರೆ ಎನ್ನುವಂತೆ ಮಾತಾಡಬಹುದು. ಆದರೆ, ಈ ಉಪಾಧಿಗಳಿಂದ ಕೂಡಿದ ಆತ್ಮದಲ್ಲಿ ಭಾಗಗಳಿಲ್ಲ. ಆದ್ದರಿಂದ, ಶ್ರುತಿ ಹೇಳುವ ಹಾಗೆ ಇವೆರಡೂ ಒಂದೇ ಎಂದು ತಿಳಿಯಬಹುದು - 'ಪ್ರಾಣವೇ ಪ್ರಜ್ಞಾ'.

ಜ್ಞಾನಕ್ರಿಯಾಶಕ್ತಿದ್ವಯಾಶ್ರಯಯೋರ್ಬುದ್ಧಿಪ್ರಾಣಯೋಃ ಪ್ರತ್ಯಗಾತ್ಮೋಪಾಧಿಭೂತಯೋರ್ಭೇದನಿರ್ದೇಶಯೋಪಪತ್ತೇಃ, ಉಪಾಧಿದ್ವಯೋಪಹಿತಸ್ಯ ತು ಪ್ರತ್ಯಗಾತ್ಮನಃ ಸ್ವರೂಪೇಣಾಭೇದ ಇತ್ಯತಃ 'ಪ್ರಾಣ ಏವ ಪ್ರಜ್ಞಾತ್ಮಾ' ಇತ್ಯೇಕೀಕರಣಮವಿರುದ್ಧಮ್ ।

ಅಲ್ಲದೆ, ಪ್ರಜ್ಞೆಯ ಕ್ರಿಯೆಗೆ ಹೂಡ ಬ್ರಹ್ಮದ ಉಪಸ್ಥಿತಿಯೇ ಕಾರಣವಾದುದರಿಂದ ಆಲಂಕಾರಿಕ ಭಾಷೆಯಲ್ಲಿ ಅದನ್ನು **ಕಠೋಪನಿಷತ್** (2-5-5) ಕರೆಯುವ ಹಾಗೆ, ಬ್ರಹ್ಮ ಎಂದೇ ಕರೆಯಬಹುದು. 'ಮರ್ತ್ಯರಾರೂ ಪ್ರಾಣಾಪನಗಳಿಂದ ಬದುಕಿರು-ವುದಿಲ್ಲ. ಅಲ್ಲದೆ, ಇವೆರಡಕ್ಕೆ ಆಶ್ರಯವಾಗಿರುವ ಬೇರೊಂದರಿಂದ.' ಇದನ್ನು **ಸೂತ್ರಭಾಷ್ಯ** (1-1-11-31) ಎತ್ತಿ ತೋರಿಸುತ್ತದೆ -

ಪ್ರಾಣವ್ಯಾಪಾರಸ್ಯಾಪಿ ಪರಮಾತ್ಮಾಯತ್ತತ್ವಾತ್ ಪರಮಾತ್ಮ-ನ್ಯುಪಚರಿತುಂ ಶಕ್ಯತ್ವಾತ್ ।

ನ ಪ್ರಾಣೇನ ನಾಪಾನೇನ ಮರ್ತ್ಯೋ ಜೀವತಿ ಕಶ್ಚನ ।
ಇತರೇಣ ತು ಜೀವನ್ತಿ ಯಸ್ಮಿನ್ನೇತಾವುಪಾಶ್ರಿತೌ ॥

ಆತ್ಮಪುರಾಣ (2-246 ದಿಂದ 257) ಹೀಗೆ ಹೇಳುತ್ತದೆ -

ಆನನ್ದಾತ್ಮಾ ಮಯಾ ನಾಯಮವಾಙ್ಮನಸಗೋಚರಃ ।
ವಕ್ತುಂ ಶಕ್ಯೋ, ನ ಚಾನೇನ ಜ್ಞಾತುಮಪ್ಯತ್ಯಲೌಕಿಕಃ ॥

ತತೋ ಜ್ಞಾನಕ್ರಿಯಾಶಕ್ತೀ ಪ್ರಾಣಪ್ರಜ್ಞೇ ಹಿ ಲೌಕಿಕೇ ।
ಆಶ್ರಿತ್ಯಾಹಂ ಸ್ವಮಾತ್ಮಾನಂ ಕಥಯಿಷ್ಯಾಮ್ಯಲೌಕಿಕಮ್ ॥

ಪ್ರಾಣಪ್ರಜ್ಞೇ ವಿಹಾಯೈತೇ ನ ದೇಹಾದೀಹ ತಿಷ್ಠತಿ ।
ಕ್ರಿಯಾಶಕ್ತಿಸ್ತಥಾ ಪ್ರಾಣೋ ನ ತಿಷ್ಠತಿ ಧಿಯಂ ವಿನಾ ॥

ಸ್ಥಾವರೇಷು ಯತೋ ನೈಷ ದೃಶ್ಯತೇ ಬುದ್ಧಿವರ್ಜನಾತ್ ।
ಪ್ರಾಣಂ ವಿನಾ ತಥಾ ಬುದ್ಧಿರ್ನ ದೃಷ್ಟಾ ಹಿ ಘಟಾದಿಷು ॥

ಬುದ್ಧಿಶ್ಚ ಜಡರೂಪಾ ಹಿ ಪ್ರಕಾಶಂ ಸ್ವಾತ್ಮನಃ ಪರಮ್ ।
ಅಪೇಕ್ಷತೇ ಯಥಾ ಸ್ತಮ್ಭಃ ಪ್ರಾಣೇನ ಸದೃಶೀ ತತಃ ॥

ಅನ್ತರ್ವಾಯುಃ ಪ್ರಚಲತಿ ಪ್ರಜಾನಾತಿ ತಥೈವ ಧೀಃ ।
ಪ್ರಾಣಃ ಪ್ರಜ್ಞೇತಿ ವೈ ತಸ್ಮಾದೇತಯೋರ್ನಾಮ ದೇಹಿನಾಮ್ ॥

ವಸ್ತುತಶ್ಚಲನಂ ನೈವ ಜಡಾನಾಂ ದೃಶ್ಯತೇ ಕ್ವಚಿತ್ ।
ರಥಾದಯೋ ಯಥಾ ನೈವ ದೃಶ್ಯನ್ತೇ ಸ್ವಯಮೇವ ಹಿ ॥

ಅಶ್ವಾದೀಂಶ್ಚೇತನಾನ್ ಹಿತ್ವಾ ಚಲನ್ತಃಕರ್ಹಿಚಿತ್ ಕ್ವಚಿತ್ ।
ಪ್ರಕರ್ಷಸ್ತತ್ರ ಕೇನ ಸ್ಯಾನ್ಮೂಲಾಭಾವಾತ್ತು ಹೇತುತಃ ॥

ಜ್ಞಪ್ತಿಶ್ಚ ನ ಜಡೇ ಕಾಪಿ ದೃಶ್ಯತೇ ಹಿ ಘಟಾದಿಕೇ ।
ಪ್ರಕರ್ಷಶ್ಚ ಜಡೇ ಜ್ಞಪ್ತೇರ್ದೂರಾಪಾಸ್ತಃ ಸದೈವ ಹಿ ॥

ತಸ್ಮಾದ್ಯತ್ಸನ್ನಿಧಾವಸ್ಯ ಜಡಸ್ಯೇದಂ ವಿಜಾಯತೇ ।
ಪ್ರಕರ್ಷೇಣ ತಥಾ ವಾಯೋಃ ಸ ಪ್ರಾಣಶ್ಚೇತನೋ ಭವೇತ್ ॥

ಪ್ರಕಾಶಯತಿ ಯಃ ಸರ್ವಂ ಸ ಜ್ಞಪ್ತಿಶ್ಚೇತನಃ ಸ್ಮೃತಃ ।
ಆತ್ಮಾನಂ ಚ ಪ್ರಕರ್ಷೇಣ ಜಡಜಾತಪ್ರಕಾಶನಾತ್ ॥

ಸ್ವಸಜಾತಿವಿಜಾತ್ಯುತ್ಥಭೇದಾಭಾವೇನ ಹೇತುನಾ ।
ಸ್ವಪ್ರಕಾಶೇನ ಚಾತ್ಮಾನಮಾತ್ಮಾ ಜಾನಾತಿ ನಾಪರಃ ॥

[ಆತ್ಮವನ್ನು ಕುರಿತು ಉಪದೇಶ ನೀಡುವುದಾದರೆ ಅದನ್ನು ನೇರವಾಗಿ ಸಂವಹಿಸಬೇಕೇ ಅಥವಾ ಉಪಾಧಿಗಳ ಮೂಲಕವೋ ಎಂಬ ಪ್ರಶ್ನೆ ಏಳುತ್ತದೆ. ಆನಂದಾತ್ಮನೂ ವಾಕ್, ಮನಸ್ಸುಗಳ ಆಚೆಗೆ ಇರುವವನೂ ಆಗಿರುವವನನ್ನು ಕುರಿತು ನಾನು ಮಾತಲಾಡಲಾರೆನು, ಬೇರೆ ಯಾರೂ ಈ ರೀತಿ ಅವನನ್ನು ತಿಳಿಯಲಾರರು. ಜಗತ್ತಿನಲ್ಲಿ ಗುಣಗಳನ್ನು, ಕ್ರಿಯೆಗಳನ್ನು, ಜಾತಿಗಳನ್ನು ಹಾಗೂ ವ್ಯವಹಾರದಲ್ಲಿ ನಿರ್ದಿಷ್ಟವಾದವುಗಳನ್ನು ನಿರ್ದೇಶಿಸಲು ಮಾತು ಶಬ್ದಗಳನ್ನು ಬಳಸಬಹುದು. ಇವು ಯಾವವೂ ಆತ್ಮಕ್ಕೆ ಅನ್ವಯಿಸುವುದಿಲ್ಲ, ಹೀಗಾಗಿ ಆತ್ಮವನ್ನು ಶಬ್ದಗಳಿಂದ ನೇರವಾಗಿ ತಿಳಿಯುವಂತಿಲ್ಲ. ಆದ್ದರಿಂದ, ಅನಿವಾರ್ಯವಾಗಿ ಎರಡನೆಯ ವಿಧಾನವನ್ನು ಅನುಸರಿಸ-ಬೇಕಾಗುತ್ತದೆ. ಇಲ್ಲಿ ಆತ್ಮದಿಂದ ದೂರಸೂಚಕಗಳಾದ ಉಪಾಧಿಗಳನ್ನು ಬಿಟ್ಟುಕೊಟ್ಟು ಅತ್ಯಂತ ಸಮೀಪದಲ್ಲಿರುವವುಗಳನ್ನು ಎಂದರೆ, ಪ್ರಾಣ ಹಾಗೂ ಪ್ರಜ್ಞಾಗಳನ್ನು ಉಪಯೋಗಿಸಲಾಗಿದೆ. ಇದರಿಂದ ಲಕ್ಷಣಾ ವೃತ್ತಿಯಲ್ಲಿ ಮಿತವ್ಯಯವನ್ನು ಸಾಧಿಸಿದಂತಾಗುತ್ತದೆ. ದೇಹ

ಮೊದಲಾದ ದೂರದ ಉಪಾಧಿಗಳು ಕೂಡ ನಿಕಟ ಸಾಮೀಪ್ಯ ಹೊಂದಿದ ಪ್ರಾಣ ಹಾಗೂ ಪ್ರಜ್ಞಾಗಳ ಮೂಲಕವಾಗಿಯೇ ಆತ್ಮವನ್ನು ತೋರಿಸಬಲ್ಲವು. ಲೋಕದಲ್ಲಿ ಪ್ರಸಿದ್ಧವಾದ ಕ್ರಿಯಾಶಕ್ತಿ ಹಾಗೂ ಜ್ಞಾನಶಕ್ತಿಗಳೇ ಈ ಸಮೀಪದ ಉಪಾಧಿಗಳು - ಪ್ರಜ್ಞಾ ಮತ್ತು ಪ್ರಾಣ - ಲೋಕಾತೀತವಾದ ಆತ್ಮವನ್ನು ತಿಳಿಯಲು ಇವುಗಳಿಗೆ ಅಂಟಿಕೊಳ್ಳುತ್ತೇವೆ. ಈ ಉಪಾಧಿಗಳ ವೈಶಿಷ್ಟ್ಯವೆಂದರೆ, ಅವುಗಳಿಲ್ಲದೆ ದೇಹ ಮೊದಲಾದವುಗಳು ಇರಲಾರವು, ಹಾಗೂ ಅವುಗಳಿದ್ದರೇನೇ ಅವು ಇರಬಲ್ಲವು. ಎಲ್ಲಿ ಪ್ರಜ್ಞಾ ಕಾಣುವುದಿಲ್ಲವೋ ಪ್ರಾಣವೂ ಕಾಣಲಾರದು. ಉದಾಹರಣೆಗೆ, ಸಸ್ಯಜಗತ್ತು. ಇದು ಲೌಕಿಕ ವ್ಯವಹಾರದಲ್ಲಿ ಅನುಭವಕ್ಕೆ ಬರುವ ವಿಷಯ. ಸಸ್ಯಗಳ ಬೆಳವಣಿಗೆಯನ್ನಾಧರಿಸಿ ಅವುಗಳಲ್ಲಿಯೂ ಪ್ರಾಣವಿದೆಯೆಂದು ಹೇಳುವುದಕ್ಕೆ ಆಧಾರವಿದೆಯೆಂದು ಸಾಧಿಸುವುದಾದರೆ, ಅಲ್ಲಿ ಪ್ರಜ್ಞಾ ಕೂಡ ಇರುವುದಕ್ಕೆ ಸಾಕ್ಷಿ ಇದೆ ಎಂದು ಅನುಮಾನ ಮಾಡಲು ಸಾಧ್ಯವಿದೆ. ಉದಾಹರಣೆಗೆ, ಬಳ್ಳಿಗಳು ಮೇಲಿನ ಕ್ಷೇತ್ರವನ್ನೇ ಹುಡುಕಿಕೊಂಡು ಬೆಳೆಯುತ್ತವೆ. ಇದಕ್ಕೆ ವಿರುದ್ಧವಾಗಿ, ಮಡಕೆ ಮೊದಲಾದ ವಸ್ತುಗಳಲ್ಲಿ ಪ್ರಾಣವಿರುವುದಿಲ್ಲವಾದ್ದರಿಂದ ಅಲ್ಲಿ ಪ್ರಜ್ಞಾ ಕೂಡ ಇರುವುದಿಲ್ಲ. ಪ್ರಜ್ಞಾ ಜಡವಾದುದರಿಂದ ತನ್ನಷ್ಟಕ್ಕೆ ತಾನೇ ಗ್ರಹಿಸಲಾರದು ; ಅದಕ್ಕೆ ಆತ್ಮದ ಪ್ರಕಾಶದ ಆವಶ್ಯಕತೆ ಇದೆ, ಒಂದು ಸ್ತಂಭಕ್ಕೆ ಹೇಗೋ ಹಾಗೆ ; ಈ ದೃಷ್ಟಿಯಿಂದ ಅದು ಪ್ರಾಣದೊಂದಿಗೆ ಸಾದೃಶ್ಯ ಹೊಂದಿದೆ. ಪ್ರಾಣವು ದೇಹದ ಒಳಗೆ ಸಂಚರಿಸುವುದರಿಂದ ಹಾಗೂ ಪ್ರಜ್ಞಾ ತಿಳಿಯುವುದು ಎಂದು ವ್ಯವಹಾರದಲ್ಲಿ ಗೃಹೀತವಾಗಿರುವುದರಿಂದ, ಅವುಗಳಿಗೆ ಆ ಅರ್ಥ ಬಂದಿವೆ. ಜಡ ವಸ್ತು ತನ್ನಷ್ಟಕ್ಕೆ ತಾನೇ ಚಲಿಸಲಾರದು. ಅಥವಾ ತಿಳಿಯಲಾರದು ಎನ್ನುವುದು ಬಂಡಿ ಹಾಗೂ ಮಡಕೆಯ ಉದಾಹರಣೆಗಳಿಂದ ಸ್ಪಷ್ಟವಾಗಿದೆ. ಹೀಗಾಗಿ ಪ್ರಾಣ ಹಾಗೂ ಪ್ರಜ್ಞಾ ಸಚೇತನ ಆತ್ಮದ ಸೂಚಕವಾಗಿವೆ. ಆತ್ಮಕ್ಕೆ ನಿಕಟವಾಗಿರುವುದರಿಂದಲೇ ಪ್ರಾಣ 'ಚಲಿಸುತ್ತದೆ' ಹಾಗು ಪ್ರಜ್ಞಾ 'ತಿಳಿಯುತ್ತದೆ'. ಸ್ವಯಂಪ್ರಕಾಶವೂ, ಅದ್ವಯವೂ ಆದ ಆತ್ಮವು ಮಾತ್ರ ತನ್ನಷ್ಟಕ್ಕೆ ತಾನೇ ಗ್ರಹಿಸಬಲ್ಲುದು. ಯಾಕೆಂದರೆ, ಅದನ್ನು ಪ್ರಕಾಶಿಸಲು ಅದರಂತಹ ಹಾಗೂ ಅದಕ್ಕಿಂತ ಭಿನ್ನವಾದ ವಸ್ತುವಿಲ್ಲ.]

**ಅನುಭೂತಿಪ್ರಕಾಶ** (8-31 ರಿಂದ 40 ಹಾಗೂ 46) ಕೂಡ ಹೀಗೆಯೇ ಹೇಳುತ್ತದೆ -

ಪ್ರಾಣೋಽಸ್ಮೀತ್ಯಾದಿವಾಕ್ಯೇನ ತಸ್ಮೈ ತತ್ತ್ವಮವೋಚತ ॥

ಪ್ರಾಣಪ್ರಜ್ಞೇ ಕ್ರಿಯಾಜ್ಞಾನಶಕ್ತೀ ದ್ವೇ ಲಿಙ್ಗದೇಹಗೇ ।
ತದಧಿಷ್ಠಾನರೂಪತ್ವಾತ್ತಾಭ್ಯಾಮಾತ್ಮೋಪಲಕ್ಷಿತಃ ॥

ಪ್ರಜ್ಞಾತ್ಮಾ ಪ್ರಾಣರೂಪೋಽಸ್ಮೀತ್ಯೇವಂ ತಸ್ಮಾ ಅವೋಚತ ।
ಆನನ್ದೋಽಜರ ಇತ್ಯಾದಿ ನಿರ್ಣಯಸ್ತಸ್ಯ ಉಚ್ಯತೇ ॥

ಅತ್ರೋಪಾಯೋ ನಾಸ್ತಿ ಕಶ್ಚಿದುಪಾಧಿಮುಪಲಕ್ಷಕಮ್ ।
ವಿನಾತ್ಮವಾಚಕಃ ಶಬ್ದೋ ಯಸ್ಮಾನ್ನ ಕಾಪಿ ವೀಕ್ಷ್ಯತೇ ॥

ಲೋಕೇ ಗುಣಕ್ರಿಯಾಜಾತಿರೂಢಯಃ ಶಬ್ದಹೇತವಃ ।
ನಾತ್ಮನ್ಯನ್ಯತಮೋಽಮೀಷಾಂ ತೇನಾತ್ಮಾ ನಾಭಿಧೀಯತೇ ॥

ಉಪಾಧಿಷ್ವಪಿ ಸರ್ವೇಷು ಸಾಮೀಪ್ಯಾತ್ ಪ್ರತ್ಯಗಾತ್ಮನಃ ।
ಪ್ರಾಣಪ್ರಜ್ಞಾದ್ವಯಂ ಯೋಗ್ಯಮತ್ಯನ್ತಂ ತೇನ ಲಕ್ಷ್ಯತೇ ॥

ಪ್ರಾಣಶಬ್ದೋಽಭಿಧಾವೃತ್ತ್ಯಾ ವಾಯುಂ ಚೇಷ್ಟಕಮಾಹ ಹಿ ।
ಪ್ರಜ್ಞಾಶಬ್ದೋ ಜ್ಞಾನಹೇತುಂ ಬುದ್ಧಿಂ ವಕ್ತಿ ಸ್ವಶಕ್ತಿತಃ ॥

ತದ್ಬ್ರುದ್ಧ್ಯಧಿಷ್ಠಾನತಯಾ ತದ್ಧೇತುತ್ವೋಪಚಾರತಃ ।
ತಾಭ್ಯಾಮಾತ್ಮಾ ಲಕ್ಷ್ಯಮಾಣೋ ಜ್ಞೇಯಃ ಶಾಖಾಗ್ರಚನ್ದ್ರವತ್ ॥

ದೇಹೇನ್ದ್ರಿಯಾದಯೋ ಭಾವಾ ಜ್ಞಾನಾದಿವ್ಯಾಪೃತಿಕ್ಷಮಾಃ ।
ಯಸ್ಯ ಸನ್ನಿಧಿಮಾತ್ರೇಣ ಸೋಽಹಮಿತ್ಯವಧಾರಯ ॥

ಅಜಡಾತ್ಮವದಾಭಾನ್ತಿ ಯತ್ಸಾನ್ನಿಧ್ಯಾಜ್ಜಡಾ ಅಪಿ ।
ದೇಹೇನ್ದ್ರಿಯಮನಃಪ್ರಾಣಾಃ ಸೋಽಹಮಿತ್ಯವಧಾರಯ ॥

ಇನ್ದ್ರಿಯಾಣಾಂ ಪ್ರವೃತ್ತಿಃ ಸ್ಯಾತ್ ಪ್ರಜ್ಞಾಲೋಚನಪೂರ್ವಿಕಾ ।
ಪ್ರಾಣವಾಯುಪ್ರೇರಿತಾ ಚೇತ್ಯೇವಂ ಲೋಕೇ ವ್ಯವಸ್ಥಿತಿಃ ॥

ಗಿಡದ ಒಂದು ಟೊಂಗೆ ಚಂದ್ರನತ್ತ ದಿಗ್ದರ್ಶನ ಮಾಡುವಂತೆ ಪ್ರಾಣ ಮತ್ತು ಪ್ರಜ್ಞೆ ಆತ್ಮವನ್ನು ಸೂಚಿಸುತ್ತವೆ. ಯಾವುದರ ಕೇವಲ ಉಪಸ್ಥಿತಿಯಿಂದ ದೇಹ, ಇಂದ್ರಿಯಗಳು ಇತ್ಯಾದಿ ಅರಿವು ಮುಂತಾದವುಗಳನ್ನು ದೊರಕಿಸಲು ಉದ್ಯುಕ್ತವಾಗುತ್ತವೆಯೋ ಅದು

ಆತ್ಮ ಎಂದು ದೃಢವಾಗಿ ತಿಳಿದುಕೋ. ಯಾವುದರ ಕೇವಲ ಉಪಸ್ಥಿತಿಯಿಂದ ದೇಹ, ಇಂದ್ರಿಯಗಳು ಜಡವಾದರೂ ಸಚೇತನವೆಂದು ಕಂಡುಬರುತ್ತವೆಯೋ ಅದು ಆತ್ಮವೆಂದು ದೃಢವಾಗಿ ತಿಳಿದುಕೋ. ಪ್ರಜ್ಞಾದ ಆವಶ್ಯಕ ಆಲೋಚನೆಯ ನಂತರ ಹಾಗೂ ಪ್ರಾಣದ ಪ್ರಚೋದನೆಯಿಂದ ಇಂದ್ರಿಯಗಳು ಕಾರ್ಯಪ್ರವೃತ್ತ-ವಾಗುತ್ತವೆ ಎನ್ನುವುದು ಲೋಕದ ಅನುಭವ.

### 7.1.15 ಗೋಲಕಗಳು ಇಂದ್ರಿಯಗಳಲ್ಲ

ಇಂದ್ರಿಯಗಳು, ಪ್ರಾಣ ಮತ್ತು ಅಂತಃಕರಣಗಳನ್ನು ಕುರಿತು ಇದುವರೆಗೆ ಹೇಳಿರುವುದು ಈ ವಿಷಯದಲ್ಲಿ ಏಕಮೇವ ಪ್ರಮಾಣವಾದ ಶ್ರುತಿಯ ಆಧಾರದ ಮೇಲೆ, ಯಾಕೆಂದರೆ ಪ್ರತ್ಯಕ್ಷ ಮೊದಲಾದ ಪ್ರಾಯೋಗಿಕ ಪ್ರಮಾಣಗಳಿಂದ ಇವುಗಳನ್ನು ತಿಳಿಯಲಾರೆವು. ಇಂದ್ರಿಯಗಳು ಗೋಲಕಗಳು, ಅವು ಗೋಲಕಗಳ ಧಾರಣಶಕ್ತಿಗಳು, ಅವು ಅಹಂಕಾರದ ಉತ್ಪತ್ತಿಗಳು, ಅಥವಾ ಗೋಲಕಗಳಿಗಿಂತ ಭಿನ್ನವಾದ ದ್ರವ್ಯಗಳು - ಇಂಥ ಹಲವಾರು ಅಭಿಪ್ರಾಯಗಳನ್ನು ಬೇರೆ ಬೇರೆ ಪ್ರಕ್ರಿಯೆಗಳು ಮುಂದಿರಿಸಿವೆ. ಇವೆಲ್ಲ ಪ್ರಮಾಣಗಳಿಲ್ಲದ ಬರೀ ಊಹೆಗಳು ಹಾಗೂ ದೋಷಪೂರ್ಣವಾದವುಗಳು. ಆದ್ದರಿಂದ ಇವುಗಳನ್ನು ತಿರಸ್ಕರಿಸ-ಲಾಗಿದೆ. ಮನಸ್ಸು ಅಣುರೂಪದ್ದು, ಶಾಶ್ವತವಾದದ್ದು ಇಂಥ ಅಭಿಪ್ರಾಯಗಳೂ ತಿರಸ್ಕಾರಾರ್ಹವೇ. ಶ್ರುತಿ ತೋರಿಸಿದಂತೆ ಇಂದ್ರಿಯಗಳೂ ಪ್ರಾಣ ಮತ್ತು ಅಂತಃಕರಣ ಸೂಕ್ಷ್ಮಭೂತಗಳಿಂದ ಉತ್ಪನ್ನವಾದವುಗಳು, ಭೌತಿಕ ಸ್ವರೂಪದವು, ಹಾಗೂ ಸ್ವಭಾವದಿಂದಲೇ ಅಶಾಶ್ವತವಾದವುಗಳು. ಅವುಗಳಿಗೆ ಭಾಗಗಳಿವೆ ಹಾಗೂ ಅವು ಚಲನೆಯನ್ನು ಹೊಂದಬಲ್ಲವು. ಈಗಾಗಲೇ ಉದ್ಧೃತವಾದ ಶ್ರುತಿಗಳಲ್ಲದೆ 'ಅನ್ನಮಯಂ ಹಿ ಸೋಮ್ಯ ಮನ ಆಪೋಮಯಃ ಪ್ರಾಣಸ್ತೇಜೋಮಯೀ ವಾಕ್ ।' (ಛಾಂ.ಉ. 6-5-4) (ಸೋಮ್ಯನೆ, ಮನಸ್ಸು ಅನ್ನದ (ಪೃಥ್ವಿಯ), ಪ್ರಾಣವು ಜಲದ ಹಾಗೂ ವಾಕ್ಕು ಅಗ್ನಿಯ) ಉತ್ಪನ್ನಗಳು. ತನ್ಮನೋಽಕುರುತ । (ಬೃ.ಉ. 1-2-3) ('ಅದು ಮನಸ್ಸನ್ನು ಸೃಷ್ಟಿಸಿತು')